# ಕೆಂಧೂಳಿ

ಹೊಸ ಸವಾಲುಗಳ ಕನಸು

ಪ್ರಧಾನ ಸಂಪಾದಕ: ತುರುವನೂರು ಮಂಜುನಾಥ

**KENDHOOLI** *Kannada Weekly*

kendhooli.com/e-paper/


## ರಾಜಕಾರಣ: ನೀರು ಕಾರಣ



ಭಾಸ್ಕರ ರಾವ್ ಅವರ ಅಂಕಣದಲ್ಲಿ...


ಸಂಪುಟ - 02 | ಸಂಚಿಕೆ - 68 | ಪುಟ - 16 | ರೂ. 16/- | ಮಾರ್ಚ್ 03 ರಿಂದ ಮಾರ್ಚ್ 09, 2022 KARKAN/2018/76310




ಅಣುಯುದ್ಧ ನಿಶ್ಚಿತ, ಮೂರನೇ ಮಹಾಯುದ್ಧಕ್ಕೆ ಮುನ್ಸೂಚನೆ

# ಗುಬ್ಬಚ್ಚಿ ಮೇಲೆರಗಿದ ಗಿಡುಗ!

ಮಹದಾಯಿ ಯೋಜನೆ


## ಸರ್ಕಾರದ ಕಿವಿಗೆ ಬೀಳುತ್ತಿಲ್ಲ

## ರೈಸ್ ಫುಲ್ಲಿಂಗ್ ಆಸೆಗೆ ಹಣ ಉರುಳಿಸಿ ಜೈಲು ಪಾಲಾದ ಮಾಜಿ ಶಾಸಕರ ಪುತ್ರ!!

ಭ್ರಷ್ಟರ ಕೂಪ ಬಿಬಿಎಂಪಿಯಲ್ಲಿ

## ಉಂಡವನೇ ಜಾಣ


# ಲಿಂಗಯ್ಯನಂತಹ ಗ್ರಾಮೀಣ ಸಾಹಿತಿಗಳ ದಾಖಲೆ ಮುಖ್ಯ




ಕರ್ನಾಟಕದಲ್ಲಿ ಅದರಲ್ಲೂ ಹಳ್ಳಿಗಾಡಿನಲ್ಲಿ ಸಾಹಿತಿಗಳ ಹೆಸರುಗಳು ಬಹುತೇಕರಿಗೆ ಗೊತ್ತೆ ಇರುವುದಿಲ್ಲ .ಅವರ ಹೆಸರುಗಳು ಎಲ್ಲೂ ದಾಖಲಾಗುವುದಿಲ್ಲ ಹಾಗಾಗಿ ಅವರ ಹೆಸರು ಅವರ ಅಸ್ತಂಗದ ನಂತರ ಮರೆಯಾಗಿಬಿಡುತ್ತವೆ: ಹೀಗಾಗಿ ಇಂದು ಸಾವಿರಾರು ಸಾಹಿತಿಗಳ ಅದರಲ್ಲೂ ಗ್ರಾಮೀಣ ಭಾಗದ ಸಾಹಿತಿಗಳ ಹೆಸರುಗಳನ್ನು ಅವರ ಸಾಹಿತ್ಯವನ್ನು ಪ್ರಸಾರ ಮಾಡುವ ಕೆಲಸವಂತೂ ಎಂದೂ ಆಗಿಲ್ಲ ಹೀಗಾಗಿ ಇಂದು ಎಷ್ಟೋ ಸಾಹಿತಿಗಳ ನೆನಪೇ ಇಲ್ಲದಂತಾಗಿದೆ.

ಚಿತ್ರದುರ್ಗ ಜಿಲ್ಲೆಗೆ ಬಂದರೆ ಕೇವಲ ಚಿತ್ರದುರ್ಗ ನಗರ ಮತ್ತು ಪ್ರಮುಖ ತಾಲೂಕು ಮಟ್ಟದ ಸಾಹಿತಿಗಳನ್ನು ಗುರುತಿಸುವ ಕೆಲಸವಾಗಿದೆಯೇ ಹೊರೆತು ಗ್ರಾಮೀಣ ಭಾಗದ ಸಾಹಿತಿಗಳ ಹೆಸರುಗಳನ್ನು ಗುರುತಿಸುವ ಕೆಲಸ ಎಲ್ಲೂ ಆಗಿಲ್ಲ . ಕೆಲವರಿಗೆ ಸಾಹಿತಿಗಳಿಗೂ ಅವರ ಹೆಸರುಗಳು ಗೊತ್ತಿಲ್ಲದ ಮಟ್ಟಿಗೆ ಈ ಗ್ರಾಮೀಣ ಸಾಹಿತಿಗಳು ತಾವಾಯಿತು ತಮ್ಮ ಸಾಹಿತ್ಯ ಚಟುವಟಿಕೆಯಾಯಿತು ಎನ್ನುವಷ್ಟರ ಮಟ್ಟಿಗೆ ಸುಮ್ಮನಾಗಿ ಬಿಟ್ಟಿದ್ದಾರೆ .ಕೃತಿಗಳನ್ನು ಬರೆದು ಕೆಲವನ್ನು ಮುದ್ರಿಸಿದ್ದಾರೆ ಕೆಲವು ಹಾಗೆಯೇ ಹಸ್ತಪ್ರತಿಯಲ್ಲಿಯೇ ಉಳಿದಿವೆ.

ಆದರೆ ಜಿಲ್ಲಾ ಮಟ್ಟದಲ್ಲಿ ಸಾಹಿತ್ಯವ ಅಧ್ಯಯನ ಮಾಡಿದವವರು ಅಥವಾ ಜನಪ್ರಿಯ ಸಾಹಿತಿಗಳು ಜಿಲ್ಲಾ ಮಟ್ಟದ ಸಾಹಿತಿಗಳನ್ನು ದಾಖಲಿಸುವಾಗ ಹಲವಾರು ಗ್ರಾಮೀಣ ಸಾಹಿತಿಗಳ ಹೆಸರನ್ನು ನಮೂದಿಸುವುದೇ ಇಲ್ಲ.ಕೇವಲ ಜನಪ್ರಿಯತೆಯೊಂದೇ ಮಾನದಂಡವಾಗುವುದಿಲ್ಲ ಬದಲಾಗಿ ಸಾಹಿತಿಗಳು ಸಲ್ಲಿಸಿದ ಸೇವೆ ಅವರ ಸಾಹಿತ್ಯದ ಪರಿಯನ್ನು ಅವಲೋಕಿಸಬೇಕಾಗುತ್ತದೆ. ಈ ಕುರಿತು ಚಿತ್ರದುರ್ಗ ಜಿಲ್ಲೆಯಲ್ಲಿ ಅಂತಹ ಕಾರ್ಯ ಆಗಿಲ್ಲ ಆಗಿದ್ದರೂ ಅದು ಕೇವಲ ಜನಪ್ರಿಯ ಮಟ್ಟದ ಸಾಹಿತಿಗಳನ್ನು ಗುರುತಿಸಲಾಗಿದೆ . 80ರ ದಶಕದ ಹಿಂದಿನ ಸಾಹಿತಿಗಳನ್ನಂತೂ ಮರೆತೆ ಬಿಟ್ಟಿದ್ದಾರೆ. ಚಿತ್ರದುರ್ಗ ಜಿಲ್ಲಾ ಸಾಹಿತಿಗಳ ಕುರಿತು 85 ರಲ್ಲಿ ಬಂದ ಕೈಪಿಡಿಯೊಂದರಲ್ಲಿಯೂ ಕೂಡ ಸಂಪೂರ್ಣ ಗ್ರಾಮೀಣ ಸಾಹಿತಿಗಳನ್ನು ಮರೆಯಲಾಗಿತ್ತು .2000ರಲ್ಲಿ ಶರಭೇಂದ್ರಯ್ಯ ಚಿತ್ರದುರ್ಗ ಜಿಲ್ಲಾ ಸಾಹಿತಿಗಳ ಕುರಿತು ಅವಲೋಕನವೊಂದನ್ನು ಮಾಡಿದ್ದರು ಅದರಲ್ಲೂ ಕೂಡ ಗ್ರಾಮೀಣ ಸಾಹಿತಿಗಳ ಪರಿಚಯವನ್ನಂತೂ ಮಾಡಿಯೇ ಇಲ್ಲ .ಇತ್ತೀಚೆಗೆ ಅಂದರೆ 2020 ಮಾರ್ಚ್ 6 ರಂದು 'ಚುಲುಮೆ' ಎನ್ನುವ ಕನ್ನಡ ಸಾಹಿತ್ಯ ತಾಣದಲ್ಲಿ ಜಿಲ್ಲೆಯ ಜನಪ್ರಿಯ ಹಿರಿಯ ಸಾಹಿತಿಗಳಾದ ಡಾ.ಬಿ,ಎಲ್.ವೇಣು ಅವರು ಚಿತ್ರದುರ್ಗದ ಸಾಹಿತಿಗಳ ಪರಿಚಯವನ್ನು ಮಾಡಿಕೊಟ್ಟಿದ್ದಾರೆ ಆದರೆ ಅವರು ಒಟ್ಟಾರೆ ಜಿಲ್ಲೆಯ ಸಾಹಿತಿಗಳ ಕುರಿತು ಪರಿಚಯವಿಲ್ಲ ಇಷ್ಟನ್ನು ಬಿಟ್ಟರೆ ಜಿಲ್ಲೆಯ ಒಟ್ಟಾರೆ ಸಾಹಿತಿಗಳ ಕ್ರೋಡಿಕರಣವಾಗಿಲ್ಲ ಇದು ಕೇವಲ ಚಿತ್ರದುರ್ಗ ಅಲ್ಲ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಇದೇ ದೋರಣೆಯಾಗಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇಂತ ಕಾರ್ಯಗಳನ್ನು ಗುರುತಿಸಿ ಮಾಡಬೇಕು ಆದರೆ ಆ ಕಾರ್ಯವನ್ನು ಮಾಡಿಲ್ಲ ಎನ್ನುವುದು ನೋವಿನ ಸಂಗತಿ, ಹಾಗಾಗಿಯೇ ಹಲವಾರು ಗ್ರಾಮೀಣ ಸಾಹಿತಿಗಳ ಪರಿಚಯವಿಲ್ಲದಂತಾಗಿದೆ. ಅವರ ಹೆಸರುಗಳು ಸಂಪೂರ್ಣ ಅಳಸಿಹೋಗಿವೆ ಎನ್ನುವುದೇ ದುರಂತ.



ಯಾಕೆ ಇಷ್ಟೆಲ್ಲ ಪೀಠಿಕೆ ಎಂದರೆ ನಾನು ಈ ಹಿಂದೆ ಇದೇ ಅಂಕಣದಲ್ಲಿ ನಮ್ಮ ತುರುವನೂರಿನ ಜಿ.ಕಲ್ಲಪ್ಪ, ಜಿ.ಏಕಾಂತಪ್ಪ ಅವರ ಸಾಹಿತ್ಯದ ಕುರಿತು ಬರೆದಾಗಲೂ ಇದೇ ವಿಷಯಗಳನ್ನು ಪ್ರಸ್ತಾಪಿಸಿದ್ದೆ, ತುರುವನೂರು ಒಂದು ಸಾಂಸ್ಕೃತಿಕ ವಾತವಾರಣದ ಊರು ಸಾಹಿತ್ಯದ ಬಗ್ಗೆ ಹೇರಳವಾಗಿ ಬರೆದವರು ಅನೇಕರು ಇದ್ದರು ಈಗಲೂ ಇದ್ದಾರೆ . ಜಿ.ಕಲ್ಲಪ್ಪ, ಜಿ.ಏಕಾಂತಪ್ಪ. ಕೆ.ಲಿಂಗಯ್ಯ ಜಿ.ಟಿ.ಸ್ವಾಮಿ .ಅನಸೂಯ ರಾಮರೆಡ್ಡಿ. ಎಂ.ಆರ್.ವಿಶ್ವನಾಥ ರೆಡ್ಡಿ,ಮೈಲಹಳ್ಳಿ ರೇವಣ್ಣ ಮೊದಲಾದವರು ಇದ್ದಾರೆ. ಈ ಬಗ್ಗೆ ನಾನಾಗಲೇ ಇಬ್ಬರು ಸಾಹಿತಿಗಳನ್ನು ಅವರ ಸಾಂಸ್ಕೃತಿಕ ಹಿನ್ನೆಲಯನ್ನು ಪರಿಚಯಿಸಿಕೊಟ್ಟಿದ್ದೆ.

ಈಗ ನಿಂಗಯ್ಯ ಅವರ ಸಾಹಿತ್ಯ ಮತ್ತು ಆದ್ಯಾತ್ಮಿಕ ಜೀವನವು ಅಷ್ಟೇ ಮುಖ್ಯವಾದದ್ದು.

ನಿಂಗಪ್ಪ ಅವರ ಪೂರ್ವಿಕರು ಅನಂತಪುರ ಜಿಲ್ಲೆಯ ಉರವಕೊಂಡ ತಾಲ್ಲೂಕಿನ ರ್‍ಯಾಕಿಟ್ಲಿ ಸಮೀಪದ ಸಣ್ಣ ಹಳ್ಳಿಯೊಂದರಿಂದ ತುರುವನೂರಿಗೆ ವಲಸೆ ಬಂದವರು ಮನೆಯಲ್ಲಿ ಕಂಬಳಿ ನೇಯುವ ಕಾಯಕವಾದರೂ ಲಿಂಗಪ್ಪನವ ಮನಸ್ಸು ಸೆಳೆದಿದ್ದು ಆದ್ಯಾತ್ಮ ಜೀವನದ ಬಗ್ಗೆ ಮನೆಯ ಮೂಲ ವೃತ್ತಿ ಕಂಬಳಿ ನೇಯುವುದಾದರೂ ತಾವು ಓದಿ ಶಿಕ್ಷಣ ವೃತ್ತಿಗೆ ಸೇರಿದವರು ಶಿಕ್ಷಕರಾಗಿ ಸೇವಿಸಲ್ಲಿಸುತ್ತಲೇ ಸಾಹಿತ್ಯ ರಚನೆಯಲ್ಲಿ ತೊಡಗಿದವರು ಹಲವಾರು ತತ್ವಪದಗಳನ್ನು ರಚಿಸಿದವರು

ತ್ರಿಪದಿ,ಶತಕಗಳನ್ನು ರಚಿಸಿ ಎಲ್ಲರ ಮನಗೆದ್ದಿದ್ದರು.ಐದು ಸಾವಿರ ಬಜನೆ ಪದಗಳನ್ನುರಚಿಸಿದ ಖ್ಯಾತಿಯೂ ಇವರಿಗಿದೆ, ಹಾಗಾಗಿ ಈ ಗ್ರಾಮದಲ್ಲಿ ಎಲ್ಲಿಯೇ ಭಜನೆ ನಡೆದರೂ ಇವರು ರಚಿಸಿದ ಬಜನೆ ಹಾಡುಗಳು ಮಾರ್ಧನಿಸುತ್ತವೆ, ಇಂದಿಗೂ ಕೂಡ ಇವರ ಬಜನೆ ಹಾಡುಗಳನ್ನು ಹಾಡುತ್ತಿರುವುದು ವಿಶೇಷವಾಗಿದೆ.ಭಕ್ತಿಯೇ ಪ್ರಧಾನವಾಗಿಟ್ಟುಕೊಂಡು ಹತ್ತಕ್ಕೂ ಹೆಚ್ಚು ಕೃತಿಗಳನ್ನ ರಚಿಸಿದ್ದಾರೆ, ಇದರಲ್ಲಿ ಶತಕ,ತ್ರಿವಿದಿಗಳು ಪ್ರಮುಖವಾಗಿವೆ..

ವಚನಾಮೃತ ಸಂಪುಟ –1 ಸಂಪುಟ–2 ಪುರತತ್ವಾಮೃತ ಸಂಪುಟ–1 ಸಂಪುಟ–2 ಬೋಧಾಮೃತ ಸಂಪುಟ–1 ಬೋದಾಮೃತ ಸಂಪುಟ–2 ಇವೆಲ್ಲವೂ ತತ್ವಪದಗಳಾಗಿದ್ದು ಬಹುತೇಕ ಇವೆಲ್ಲವೂ ಕೂಡ ಮುದ್ರಣಗೊಂಡಿವೆ. ಇನ್ನೂ ತುರುವನೂರು ಲಿಂಗಾರ್ಯರ ತತ್ವಪದಗಳು ಭಾಗ–1 ಭಾಗ ಎರಡು ಕನ್ನಡ ಮತ್ತ ಸಂಸ್ಕೃತಿ ಇಲಾಖೆ ಪ್ರಕಟಿಸಿದ..ಭಾಮಿನಿ ಷಟ್ಪದಿಯಲ್ಲಿ ಬರೆದ ಗುರು ಭಕ್ತಿಸಾರ ಜ್ಞಾನಾಮೃತಸಾರ ವೈರಾಗ್ಯ ಸಂಪದ ಮತ್ತು ಕನಕದಾಸರ ಚರಿತ್ರೆ ಇವೆಲ್ಲವೂ ಹಸ್ತಪ್ರತಿಯಲ್ಲಿಯೇ ಇವೆ ಹಾಗೆಯೇ ಶ್ರೀ ತನೇಶ್ವರ ಮಹಾತ್ಮೆಯು ಚಂಪೂ ಕಾವ್ಯ ಮತ್ತು ಭಾಮಿನಿ ಷಟ್ಪದಿಯಲ್ಲಿ ಬರೆದಿದ್ದು ಅದು ಪ್ರಕಟವಾಗಿದೆ ಹಾಗೆಯೇ ಗೋವಿಂದ ತ್ರಿಪದಿ, ಬಸವಣ್ಣ ತ್ರಿಪದಿ, ಸುನೀತ ಶತಕ, ಸುಗಣೇ ಶತಕ ಸುಜ್ಞಾನ ಶತಕ, ಸುಬೋಧ ಶತಕ ಇವೆಲ್ಲವೂ ಹಸ್ತಪ್ರಿತಿಯಲ್ಲಿಯೇ ಇವೆ, ಅದೇ ರೀತಿ ಪ್ರವಣಾರ್ಥವು ಎನ್ನು ಕಾವ್ಯವನ್ನು ತೆಲುಗಿನಿಂದ ಕನ್ನಡಕ್ಕೆ ಅನುವಾದಿಸಿದ್ದು ಅದು ಪ್ರಕಟವಾಗಿದೆ. ಮಾರೀ ಜಾತ್ರೆ, ಕವನ ಸಂಕಲನ,ಶಿವಯೋಗಿ ರಾಚಪ್ಪನವರ ಪುಣ್ಯ ಚರಿತ್ರೆ ವೇದಾಂತ ಕಥಾಸಾರವು ಹಾಗೂ ಶ್ರೀ ನರಹರಿ ಸದ್ಗುರುಗಳ ಪುಣ್ಯ ಚರಿತ್ರೆ ಎಂಬ ಆಧ್ಯಾತ್ಮಿಕ ಕೃತಿಗಳು ಪ್ರಕಟವಾಗಿವೆ.

ಶ್ರಿ ಕುರುಕುಲ ವಿಜಯಂ, ಸತ್ಯ ಶ್ರೀಯಾಳ ನಾಟಕ, ಪಂಚೀಕರಣವು ಗದ್ಯ, ಪ್ರಹ್ಲಾದ ಚರಿತ್ರೆ ಹರಿಕಥೆ ಮತ್ತು ತ್ರಿಪದಿಯಲ್ಲಿ ಬರೆದ ನೀತಿ ಚಿಂತಾಮಣಿ ಲಾವಣಿ ಪದಗಳ ಸಂಗ್ರಹವೂ ಕೂಡ ಮುದ್ರಣಕಂಡಿಲ್ಲ ಹೀಗೆ ಹತ್ತು ಹಲವಾರು ಕೃತಿಗಳನ್ನು ರಚಿಸಿದ ಇವರ ಸಾಹಿತ್ಯ ಸಾಧನೆ ಸಾಮಾನ್ಯವೇನಲ್ಲ ಇಂತವರ ಕುರಿತು ಚಿತ್ರದರ್ಗು ಜಿಲ್ಲೆಯಲ್ಲಿ ದಾಖಲೆಯೊಂದು ಇಲ್ಲ ಎಂದರೆ ಹೇಗೆ? ಚಿತ್ರದುರ್ಗ ಜಿಲ್ಲಾ ಸಾಹಿತಿಗಳ ಹೆಸರಿನ ಪಟ್ಟಿಯಲ್ಲಿ ದಾಖಲಾಗಿದೆ ಇರುವುದು ನಿಜಕ್ಕೂ ಬೇಸರದ ಸಂಗತಿ. ಆದರೆ 80–81 ರಲ್ಲಿ ಕನ್ನಡ ಸಾಹಿತ್ಯ ಪರಿಷತ್ ಹೊರ ತಂದ ಸಾಹಿತಿಗಳ ಪರಿಚಯದಲ್ಲಿ ಇವರ ಹೆಸರು ದಾಖಲಾಗಿದೆ ಎನ್ನುವುದು ಸಂತೋಷದ ಸಂಗತಿ.

ಲಿಂಗಯ್ಯ ನವರು ಗರುಲಿಂಗ ತ್ರಿಪದಿಯಲ್ಲಿ ಚಿತ್ರದುರ್ಗದ ಕೋಟೆ ಕೂರಿತು ಹೀಗೆ ಬರೆಯುತ್ತಾರೆ;

"ಏಳುಸುತ್ತಿನ ಕೋಟೆ,ಸಾಲುಸಾಲಿನ ಪೇಟೆ
ನೀಲದುಪ್ಪರಿಗೆ– ಮೇಲೇರಿಹಾಡುತಿಹ
ಬಾಲೆ ಇವಳಾರು ಗುರುಲಿಂಗ.

ಚಿತ್ರದುರ್ಗದ ಬೆಟ್ಟ ಹತ್ತಿ ನೋಳ್ಪವದಿಟ್ಟ
ಚಿತ್ರಕರ ನೋಟ ಹತ್ತಿನೋಡಿರಿ ಗುಡ್ಡ
ಹತ್ತಿದವನೇ ಕಟ್ಟ ಗುರುಲಿಂಗ

ಹಕ್ಕಿಹಾರದ ಕೋಟೆ,ಬೆಕ್ಕು ತೋರದ ಕೋಟೆ
ಕಕ್ಕಸ ಕೋಟೆ ರಣಗೋಟೆ
ಮದಕರಿ ಸೊಕ್ಕಿರ್ದ ಕೋಟೆ ಗುರುಲಿಂಗ"

ಚಿತ್ರದುರ್ಗದ ಬಗ್ಗೆ ಅದರಲ್ಲೂ ಕೋಟೆಯ ಬಗ್ಗೆ ಇವರಿಗಿರುವ ಅಕ್ಕರಯೇ ಈ ತ್ರಿಪದಿ ಬರೆಯಲು ಪ್ರೇರೇಪಿತವಾಗಿದೆ ಎನಿಸುತ್ತದೆ.

ಲಿಂಗಯ್ಯ ಕೇವಲ ಆದ್ಯಾತ್ಮಿಕ ಮತ್ತು ಸಾಹಿತ್ಯ ಕೃಷಿ ಜೊತೆ ಜೊತೆಗೆ ಸಾಮಾಜಿಕ ಕಾಳಜಿ ಉಳ್ಳವರು ,ದಾಸ್ಯದ,ಮೌಢ್ಯದ ವಿರುದ್ಧ ಸಿಡಿದೆದ್ದವರು 1919ರಲ್ಲಿ ತುರುವನೂರಿನಲ್ಲಿ ಪ್ರತಿ ವರ್ಷದಂತೆ ಮಾರಿ ಜಾತ್ರೆ ನಡೆಯುವಾಗ ಊರಿನ ಗೌಡರ ಜೊತೆ ಲಿಂಗಯ್ಯನವರು ಮಾಡಿದ ವಾದ ಇತಿಹಾಸ ದಾಖಲೆಯಾಗಿದೆ, ಪ್ರತಿ ಮಾರಿ ಜಾತ್ರೆಯಲ್ಲಿಯೂ ಕೂಡ ಕುರಿಗಳನ್ನು ಬಲಿಕೊಡುವ ಈ ಜಾತ್ರೆ ಬಗ್ಗೆ ಧ್ವನಿ ಎತ್ತಿದವರು . ಮಾರಿ ಜಾತ್ರೆಯನ್ನು ಅಂಧಕಾರದಲ್ಲಿ ಮಾಡುತ್ತಿದ್ದೇವೆ ಮಾರಿ ಜಾತ್ರೆಯ ನೆಪದಲ್ಲಿ ಹಿಂದುಳಿದವರೆಲ್ಲ ದಾಸ್ಯತ್ವದಲ್ಲಿ ಬಳಲುವಂತಾಗಿದೆ, ನಾವೆಲ್ಲ ದಾಸ್ಯತ್ವದಿಂದ ಹೊರಬರಬರಬೇಕು ಜೀತದಾಳುಗಳಾಗಿ ಯಾರು ದುಡಿಯಬಾರದು. ಪ್ರತಿ ಜಾತ್ರೆಗೂ ಸಾವಿರಾರು ರೂಪಾಯಿ ಸಾಲ ಮಾಡಿ ಅದೇ ದಾಸ್ಯತ್ವದಲ್ಲಿ ಮುಂದುವರೆಯುವದರಲ್ಲಿ ಅರ್ಥವೂ ಇಲ್ಲ ಎಂದು ಲಿಂಗಯ್ಯ ಇಡೀ ಮಾರೀ ಜಾತ್ರೆಯನ್ನೇ ನಿಲ್ಲಿಸುವಲ್ಲಿ ಯಶಸ್ವಿಯಾಗಿದ್ದರು ಆಗ ಮಾರೀಜಾತ್ರೆ ಸ್ಥಗಿತಗೊಂಡಿತ್ತು. ಕಾರಣ ಆಗ ಲಿಂಗಯ್ಯ ಅವರ ಈ ಮಾತಿನಿಂದ ಉಂಟಾದ ವಾದ ಸಂಘರ್ಷಕ್ಕೆ ಕಾರಣವಾಗಿತ್ತು ಬಲಿ ಬಿಟ್ಟ ಕುರಿಗಳನ್ನು ತಬ್ಬಿ ಯಾವುದೇ ಕಾರಣಕ್ಕೂ ಬಲಿ ಕೊಡಲು ಬಿಡುವುದಿಲ್ಲ ಎಂದು ಹಠ ಹಿಡಿದಿದ್ದರು ಇದರ ಪರಿಣಾಮವೇ ಜಾತ್ರೆ ರದ್ದಾಗಿತ್ತು. ಅಂದು ರದ್ದಾದ ಜಾತ್ರೆ ಮತ್ತೇ ನಡೆದದ್ದು 1988ರಲ್ಲಿ ಊರಿನಲ್ಲಿ ಅದ್ದೂರಿಯಾಗಿ ನಡೆಯಿತಾದರೂ ಮತ್ತೇ ಕಾಕ ತಾಳೀಯವಂತೆ ಸವರ್ಣೀಯರು ಮತ್ತ ದಲಿತರ ಮಧ್ಯೆ ನಡೆದ ಕಲಹದಿಂದ ಇಡೀ ರಾಜ್ಯವನ್ನೇ ಗಮನಸೆಳೆದಿತ್ತು. ಈ ಗಲಭೆ ಹಿನ್ನೆಲೆಯಲ್ಲಿ ದೂರು ದಾಖಲಾಗಿದ್ದ ಊರಿನ ಪ್ರಮುಖ ವ್ಯಕ್ತಿಗಳು ನ್ಯಾಯಾಲಯಕ್ಕೆ ತಿರುಗಾಡಿ ಹದಿನೈದು ವರ್ಷಗಳ ಬಳಿಕ ಮತ್ತೇ ಜಾತ್ರೆ ನಡೆಯಿತು ಆಗಿನಿಂದ ಆಗಾಗ ಜಾತ್ರೆ ನಡೆಯುತ್ತಲೇ ಇದೆ. ಆದರೆ ಲಿಂಗಯ್ಯನಂತವರ ದಾಸ್ಯದ ಈ ಮೂಡನಂಭಿಕೆ ವಿರುದ್ಧ ನಡೆಸಿದ ಹೋರಾಟ ಇತಿಹಾಸ ದಾಖಲಾಗಿದೆ. ಆದರೆ ಮತ್ತೇ ಮೂಡನಂಬಿಕೆಯಲ್ಲಿಯೇ ನಡೆಯುತ್ತಿರುವ ಇಂತ ಜಾತ್ರೆಗಳಿಗೆ ಲಿಂಗಯ್ಯನಂತ ಕ್ರಾಂತಿಕಾರಿಗಳು ನೆನಪಾಗುತ್ತಾರೆ ಅಷ್ಟೆ ,ಆದರೆ ಈ ಮೌಢ್ಯವನ್ನು ಹೋಗಲಾಡಿಸಲು ಸಾಧ್ಯವಾಗುತ್ತಿಲ್ಲ..!?

# ಜೀತದಾಳುಗಳ ಮುಕ್ತಿಗಾಗಿಯೇ ಮೀಸಲಿಟ್ಟ ಡಾ.ಪ್ರಸಾದ್






ರೈತ ಕುಟುಂಬದ, ಪ್ರಿವಿಲೇಜ್ ಇರುವ ಜಾತಿಯ ಹಿನ್ನೆಲೆಯಿಂದ ಬಂದಿರುವ ಡಾ. ಕಿರಣ್ ಪ್ರಸಾದ್ ಅವರು ಕಳೆದ ಮೂವತ್ತು ವರ್ಷಗಳಿಂದ ಜೀತ ನಿರ್ಮೂಲನೆಗಾಗಿ ಶ್ರಮಿಸುತ್ತಿರುವುದು ಒಂದು ಅಧ್ಯಯನಯೋಗ್ಯ ಕಥನ. ಮೂಲತಃ ಉಡುಪಿ ಜಿಲ್ಲೆಯ ಕಿರಣ್ ಪ್ರಸಾದ್ ಸಣ್ಣಂದಿನಿಂದಲೇ ತಮ್ಮ ಹೊಲದಲ್ಲಿ ಕೆಲಸ ಮಾಡುವ ಕಾರ್ಮಿಕರ ಜೊತೆ ನಿಕಟ ಸಂಪರ್ಕ ಇಟ್ಟುಕೊಂಡಿರುತ್ತಾರೆ. ಹಾಗಾಗಿ ಅವರ ಬದುಕಿನ ಸಂಕಷ್ಟ, ನೋವು ಕಿರಣ್ ಅವರಿಗೆ ಬಹುಬೇಗ ಅರ್ಥವಾಗುತ್ತದೆ.

ಹಾಗಾಗಿ ಬದಲಾವಣೆಯನ್ನು ತರಲು ಕೇವಲ ಜನಸಾಮಾನ್ಯರಿಗೆ ಶಿಕ್ಷಣ ನೀಡುವುದು ಸಾಕಾಗುವುದಿಲ್ಲ, ಆದ್ದರಿಂದ 1976 ರ ಜೀತ ನಿರ್ಮೂಲನೆ ಕಾಯಿದೆಯಲ್ಲಿ ಉಲ್ಲೇಖಿಸಲಾದ ಪ್ರತಿಯೊಂದು ಷರತ್ತುಗಳನ್ನು ಅರ್ಥಮಾಡಿಕೊಳ್ಳಲು ಡಾ ಪ್ರಸಾದ್ ನಿರ್ಧರಿಸಿದರು. ಕಾಯಿದೆಯ ಪ್ರಕಾರ, ಜೀತ ಪ್ರಕರಣಗಳಲ್ಲಿ ನ್ಯಾಯ ನಿರ್ಣಯದ ಅಧಿಕಾರವು ಜಿಲ್ಲಾ ಅಥವಾ ಉಪ–ಜಿಲ್ಲಾ ಮ್ಯಾಜಿಸ್ಟ್ರೇಟ್ ಬಳಿ ಇರುತ್ತದೆ, ಇದರರ್ಥ ದೂರುದಾರರು ನ್ಯಾಯವನ್ನು ಪಡೆಯಲು ನ್ಯಾಯಾಲಯಗಳಿಗೆ ಅಲೆಯಬೇಕಾಗಿರಲಿಲ್ಲ. ಸಾಮಾನ್ಯವಾಗಿ ನ್ಯಾಯಲಯಗಳಲ್ಲಿ ನ್ಯಾಯ ಪ್ರಕ್ರಿಯೆಯು ದೀರ್ಘ ಅವಧಿಯನ್ನು ತೆಗೆದುಕೊಳ್ಳುತ್ತದೆ. ಆದರೆ ಡಿಎಂ ಅಥವಾ ಎಸ್‌ಡಿಎಂ ಬಳಿ ಹೋದರೆ ಪ್ರಕರಣ ಬೇಗ ಮುಕ್ತಾಯವಾಗುತ್ತದೆ. ಮೇಲಾಗಿ ಅದಕ್ಕೆ ಪೂರಕ ಸಾಕ್ಷಿಗಳನ್ನು ಆಒ ಅಥವಾ ಖಆಒ ತಾವೇ ಹುಡುಕಿಕೊಳ್ಳುತ್ತಿದ್ದರು. ಇದು ಅರ್ಥವಾದ ಮೇಲೆ ಅವರು ಹಲವು ಶೋಷಿತರಿಗೆ ಅರ್ಜಿ ಸಲ್ಲಿಸಲು, ನ್ಯಾಯ ಪಡೆಯಲು ಶೀಘ್ರವಾಗಿ ನೆರವಾಗುವಂತಾಯಿತು. ಅದಕ್ಕಾಗಿ ಮೇಲ್ಜಾತಿ ವರ್ಗಗಳಿಂದ ಬೆದರಿಕೆಗಳನ್ನೂ ಎದುರಿಸಬೇಕಾಯಿತು.

ಆದರೆ ಇದಕ್ಕೆ ಜಗ್ಗದ ಅವರು 1990 ರಲ್ಲಿ ಈ ಕಾರ್ಮಿಕರಿಗೆ ಸಹಾಯ ಮಾಡಲು 'ಜೀವಿಕಾ' ಎನ್ನುವ ಎನ್‌ಜಿಓ ಅನ್ನು ಸ್ಥಾಪಿಸಿದರು. ಐದು ವರ್ಷಗಳ ನಂತರ 48 ತಾಲೂಕುಗಳಲ್ಲಿ ಈ ಸಂಸ್ಥೆಯ ಸಂಖ್ಯೆ 20,000 ಕ್ಕೆ ಏರಿತು. ಸುಮಾರು ಮೂರೂವರೆ ದಶಕಗಳಲ್ಲಿ ಡಾ ಪ್ರಸಾದ್ ಅವರು ರಕ್ಷಣೆ ಮತ್ತು ಪುನರ್ವಸತಿ ಮೂಲಕ 7,000 ಕ್ಕೂ ಹೆಚ್ಚು ಜನರಿಗೆ ಘನತೆಯ ಜೀವನವನ್ನು ನೀಡಿದ್ದಾರೆ. ಹೆಚ್ಚುವರಿಯಾಗಿ ಸುಮಾರು 30,000 ಜನರನ್ನು ಸರ್ಕಾರವು ಜೀತಕ್ಕಿದ್ದ ಕಾರ್ಮಿಕರೆಂದು ಗುರುತಿಸಿದೆ ಮತ್ತು ಪುನರ್ವಸತಿ ಪ್ರಕ್ರಿಯೆಯಲ್ಲಿದೆ. ಡಾ ಪ್ರಸಾದ್ ಅವರು ಕಂಡಂತೆ ಈ ಮೂವತ್ತು ವರ್ಷಗಳಲ್ಲಾದ ಪ್ರಮುಖ ಬದಲಾವಣೆಗಳೆಂದರೆ ಹಲವಾರು ತಾಲೂಕುಗಳಲ್ಲಿ ತಮ್ಮ ಕಾರ್ಯಾಚರಣೆಗಳನ್ನು ಯಾವುದೇ ಪ್ರಕರಣಗಳಿಲ್ಲದೆ ಮುಚ್ಚಿರುವುದು. “ನಾವು ಪ್ರಾರಂಭಿಸಿದಾಗ, ನಾವು 170 ತಾಲೂಕುಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದೆವು ಮತ್ತು ಇಂದು ನಮ್ಮ ಸಿಬ್ಬಂದಿ ಅವುಗಳಲ್ಲಿ ಕೇವಲ 20 ರಲ್ಲಿ ಸಕ್ರಿಯರಾಗಿದ್ದಾರೆ. ಇದು ಖಂಡಿತವಾಗಿಯೂ ಸಕಾರಾತ್ಮಕ ಬದಲಾವಣೆಯಾಗಿದೆ. ಆದರೆ ಆದರೆ 2021 ರಲ್ಲೂ 20 ತಾಲೂಕುಗಳಲ್ಲಿರುವುದು ಖಂಡಿತವಾಗಿಯೂ ದೊಡ್ಡ ಸಂಖ್ಯೆಯೇ ”ಎಂದು ಅವರು ಹೇಳುತ್ತಾರೆ. ಇದೀಗ ತಮ್ಮ ಗಮನವನ್ನು ನಗರ ಪ್ರದೇಶದೆಡೆ ಹರಿಸಿರುವ ಡಾ ಪ್ರಸಾದ್ ಅವರು ನಗರ ಪ್ರದೇಶಗಳಲ್ಲಿನ ಶೋಷಿತರ ಪರ ಹೋರಾಡಲು ನಿರ್ಧರಿಸಿದ್ದಾರೆ. ಮುಂಗಡವಾಗಿ ಸಂಬಳ ನೀಡುವ ನೆಪದಲ್ಲಿ, ನಿರ್ಮಾಣ ಕ್ಷೇತ್ರಗಳಲ್ಲಿ, ಮಸಾಜ್ ಪಾರ್ಲರ್‌ಗಳಲ್ಲಿ ಮತ್ತು ಮಾಲ್ಗಳಲ್ಲಿ ಮಾಲೀಕರು ಹೆಚ್ಚಿನ ಗಂಟೆಗಳ ಕಾಲ ಕೆಲಸ ಮಾಡಲು ನೌಕರರನ್ನು ಒತ್ತಾಯಿಸುತ್ತಾರೆ. ಅಂತಹ ಕಳಪೆ ಕೆಲಸದ ಪರಿಸ್ಥಿತಿಗಳು ಮತ್ತು ಒತ್ತಾಯವೂ ಸಹ ಈ ಕಾಯಿದೆಯ ಅಡಿಯಲ್ಲಿ ಬರುವುದರಿಂದ ಅಂತಹವುಗಳ ವಿರುದ್ಧ ಹೋರಾಟ ಸಂಘಟಿಸಲಾಗುವುದು ಎಂದು ಆಶಾಭಾವ ವ್ಯಕ್ತಪಡಿಸುತ್ತಾರೆ ಡಾ. ಕಿರಣ್ ಪ್ರಸಾದ್.


# ಇನ್ನು ತೈಲ ಬೆಲೆ ಏರಿಕೆಗೆ ತಲೆಯಾಡಿಸಬೇಕಿದೆ!



ಪ್ರಧಾನ ಸಂಪಾದಕ
ತುರುವನೂರು ಮಂಜುನಾಥ

ಪುಟ ವಿನ್ಯಾಸ
ಸೂರ್ಯಕುಮಾರ್ ಜಿ.ಎನ್.

ಅನಾವರಣ



ಬಹುತೇಕ ಈಗಾಗಲೇ ತೈಲ ಬೆಲೆ ಏರಿಕೆಗೆ ಕೇಂದ್ರ ಸರ್ಕಾರ ಸಿದ್ದತೆ ಮಾಡಿಕೊಂಡಿದೆ ಐದು ರಾಜ್ಯಗಳ ಚುನಾವಣೆ ಮುಗಿದ ಬಳಿಕ ತೈಲ ಬೆಲೆ ಏರಿಕೆಗೆ ಸಿದ್ದತೆಗೆ ಅಣಿಯಾಗಿತ್ತು ಆದರೆ ಈಗ ಕೇಂದ್ರದ ನೆಪ ಹೇಗಿದೆ ಎಂದರೆ ರಷ್ಯಾ ಉಕ್ರೇನ್ ಯುದ್ಧದ ಪರಿಣಾಮ ಬೆಲೆ ಏರಿಕೆ ಅನಿವಾರ್ಯ ಎನ್ನುವುದನ್ನು ಜನರಿಗೆ ಕಾರಣ ಹೇಳುವ ನೆಪವೊಂದು ಸಿಕ್ಕಿದೆ.

ಕಳೆದ ಮೂರು ತಿಂಗಳಿನಿಂದ ತೈಲ ಬೆಲೆಯಲ್ಲಿ ಯಾವುದೇ ಬದಲಾವಣೆಗಳು ಆಗಿರಲಿಲ್ಲ ಅದಕ್ಕೆ ಕಾರಣ ಈ ಚುನಾವಣೆಗಳು ಈಗ ಇದ್ದಕ್ಕಿದ್ದಂತೆ ಅಂದರೆ ಮಾರ್ಚ್ ಎಂಟರ ನಂತರ ತೈಲ ಬೆಲೆ ಏರಿಸಲು ಸಿದ್ದವಾಗಿದೆ ಆದರೆ ಈ ಬಾರಿ ಬೆಲೆ ಬಹಳಷ್ಟು ಏರಿಕೆಯಾಗಲಿದೆ ಎನ್ನುವುದು 8–10 ರೂ ದಿಡೀರ್ ಏರಿಕೆಯಾಗುವ ಸಾಧ್ಯತೆಗಳು ಕಾಣುತ್ತಿವೆ ಜೊತೆ ಜೊತೆ ಅಡುಗೆ ಅನಿಲವೂ ಏರಿಕೆಯಾಗುತ್ತದೆ ಅದಕ್ಕೆ ಈ ಯುದ್ಧದ ಪರಿಣಾಮ ಎನ್ನುವುದು ಕೇಂದ್ರದ ನೆಪ. ಅದರೆ ಭಾರತೀಯರು ಇಂತ ಕಾರಣಗಳನ್ನು ನಂಬಿ ಅನಿವವಾರ್ಯವಾಗಿ ನಾವು ಈ ಏರಿಕೆಯನ್ನು ಸ್ವೀಕರಿಸಲೇ ಬೇಕು ಯಾಕೆಂದರೆ ನಾವಾಗಲೇ ಕೈಗೊಂಬೆಗಳಾಗಿದ್ದೇವೆ ಎಲ್ಲದಕ್ಕೂ ಸಿದ್ದತೆ ಎನ್ನುವ ಮನೋಸ್ಥಿತಿಯಲ್ಲಿದ್ದೇವೆ ಹಾಗಾಗಿ ಯಾವುದೇ ಬೆಲೆ ಏರಿಕೆಯಾದರೂ ಅದರ ಪ್ರತಿಭಟನೆಗೆ ನಾವು ಮುಂದಾಗುತ್ತಿಲ್ಲ ಹಾಗಾಗಿಯೇ ಈ ದೇಶದ ಜನರ' ತಲೆ ಅಲ್ಲಾಡಿಸುವ' ಮನೋಸ್ಥಿತಿಯನ್ನು ಕೇಂದ್ರದ ನಾಯಕರಿಗೆ ಚನ್ನಾಗಿ ಮನವರಿಕೆಯಾಗಿದೆ. ಏನೇ ಆದರೂ ಮೋದಿಯ ಮಾತಿಗೆ ಮರುಳಾಗುತ್ತಾರೆ ಎನ್ನುವ ಅಚಲ ನಂಬಿಕೆ ಈಗ ನಮ್ಮ ದೇಶದ್ದು ಹಾಗಾಗಿಯೇ ಬರುವ ಎಲ್ಲಾ ಸ್ಥಿತಿಗಳನ್ನು ವಾವು ಅಹ್ವಾನಿಸುತ್ತಲೇ ಇದ್ದೇವೇ' ಹೌದಪ್ಪ'ಗಳಾಗಿ ನಿಂತಿದೇವೆ . ಇದೇ ಸ್ಥಿತಿ ಮುಂದುವರೆದರೆ ಮುಂದೊಂದು ದಿನ ಈ ದೇಶದ ಜನರಿಗೆ ಎಂಥಾ ಸ್ಥಿತಿ ಬಂದೊದಗಬಹುದು ಎನ್ನುವುದನ್ನು ಯೋಚಿಸಿದರೆ ಭಯವಾಗುತ್ತದೆ ಆದರೆ ಕೆಲವರಿಗೆ ಇವೆಲ್ಲವೂ ಹಿಂದಿನ ಆಡಳಿತದ ಪರಿಣಾಮ ಎಂದು ಹೇಳಿದ್ದನ್ನು ತಲೆಯಾಡಿಸುತ್ತಿದ್ದಾರೆ ಅಂತವರಿಗೆ ಮುಂದಿನ ಕೆಟ್ಟ ಸ್ಥಿತಿಗೆ ಸಿದ್ದರಾಗಿ ನಿಂತುಕೊಳ್ಳಿ ಎಂದು ಅಷ್ಟೇ ಹೇಳಬಹುದು ಅದನ್ನು ಬಿಟ್ಟು ಬೇರೆ ಏನು ಹೇಳಲು ಸಾಧ್ಯವಿಲ್ಲ ಇನ್ನೂ ಆರ್ಥಿಕ ಪರಿಸ್ಥಿತಿಯ ಬಗ್ಗೆ ಅವಲೋಕಿಸುತ್ತಾ ಹೋದರೆ, ಜಾಗತಿಕ ಮಟ್ಟದಲ್ಲಿ ಹೊಸ ರೀತಿಯ ಬದಲಾವಣೆಗಳು ಆಗುತ್ತಿವೆ. ಇಂತಹ ಬದಲಾವಣೆಗಳು ಭಾರತದ ಮೇಲೂ ಆಗುತ್ತದೆ. ಹಣ ಗಳಿಸುವುದು ಮತ್ತು ಉಳಿಸುವುದು ಕಷ್ಟವಾಗುತ್ತದೆ. ಆದರೆ ಯಾವುದೇ ಹೊಸ ವ್ಯಾಪಾರ, ಉದ್ದಿಮೆ ತೆರೆದರೆ ಅದರಿಂದ ಹೇಗಾದರೂ ಬದುಕು ಕಟ್ಟಿಕೊಳ್ಳಬಹುದು ಎನ್ನುವ ನಂಬಿಕೆ ಕೂಡ ಕಮರಿ ಹೋಗುತ್ತಿದೆ. ಬಾಡಿಗೆಯಿಂದ ಹಿಡಿದು ಕಚ್ಚಾ ಪದಾರ್ಥಗಳ ವರೆಗೆ ಎಲ್ಲದರ ಬೆಲೆಯೇರಿಕೆ ಆಗುತ್ತಿದೆ. ಗ್ರಾಹಕ ತನ್ನ ಬಳಿ ಇರುವ ಹಣವನ್ನ ಬಹಳ ಜಾಗರೋಕತೆಯಿಂದ ಖರ್ಚು ಮಾಡುತ್ತಿದ್ದಾನೆ. ಹೀಗಾಗಿ ಜಾಗತಿಕ ಮಾರುಕಟ್ಟೆಯಲ್ಲಿ ಇಂದು ಇರುವುದು ಸೂತಕದ ಛಾಯೆ. ಇಲ್ಲೇನಿದ್ದರೂ ಪದಾರ್ಥಗಳ ಉತ್ಪಾದನೆ ನಿಲ್ಲದೆ ಆಗುತ್ತಿರಬೇಕು, ಗ್ರಾಹಕ ಅದನ್ನ ಕೊಳ್ಳುತ್ತಿರಬೇಕು. ದೇಹದಲ್ಲಿ ರಕ್ತ ಪರಿಚಲನೆ ಎಷ್ಟು ಮುಖ್ಯವೋ ದೇಶದಲ್ಲಿ ಹಣದ ಚಲನೆ ಕೂಡ ಅಷ್ಟೇ ಮುಖ್ಯ. ರಕ್ತ ಹರಿಯದಿದ್ದರೆ ದೇಹ ಸ್ತಬ್ಧ, ಹಣದ ಹರಿವಿಲ್ಲದಿದ್ದರೆ ದೇಶ ಸ್ತಬ್ಧ.

ನಿಮಗೆಲ್ಲಾ ಭಾರತದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ನೂರರ ಗಡಿಯನ್ನ ಮುಟ್ಟಿದ್ದು ಮತ್ತು ಅದರಿಂದ ಸಮಾಜದಲ್ಲಿ ಆದ ಬವಣೆ ನೆನಪಿರುತ್ತದೆ ಎಂದು ಭಾವಿಸುವೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ಕಚ್ಚಾ ತೈಲದ ಬೆಲೆ ಮತ್ತೆ ಬ್ಯಾರಲ್ ಗೆ 100 ಡಾಲರ್ ಬಳಿ ಸಾಗುತ್ತಿದೆ. ಇದರರ್ಥ ಮತ್ತೆ ನಾವು ಪೆಟ್ರೋಲ್ ಮತ್ತು ಡೀಸೆಲ್ ಗೆ ಹೆಚ್ಚಿನ ಬೆಲೆಯನ್ನ ನೀಡಲು ಸಿದ್ಧರಾಗಬೇಕು ಎನ್ನುವುದು. ಒಮ್ಮೆ ಡೀಸೆಲ್ ಮತ್ತು ಪೆಟ್ರೋಲ್ ಬೆಲೆ ಹೆಚ್ಚಾದರೆ ಅದು ಸಿರೀಸ್ ಬೆಲೆ ಹೆಚ್ಚಳಕ್ಕೆ ನಾಂದಿ ಹಾಡುತ್ತದೆ. ಯೂರೋಪಿಯನ್ ಯೂನಿಯನ್ ನಲ್ಲಿ ಕೂಡ ಸಾಕಷ್ಟು ಗೋಧಿಯನ್ನ ಬೆಳೆಯುತ್ತಾರೆ. ಸಪ್ಲೈ ಚೈನ್ ನಲ್ಲಿ ಕುಸಿತವಾದರೆ ಬಹಳ ತೊಂದರೆಯಾಗುತ್ತದೆ. ಚೀನಾ, ಇಂಡಿಯಾ ಮತ್ತು ರಷ್ಯಾ ದೇಶಗಳು ಜಗತ್ತಿನ 41 ಪ್ರತಿಶತ ಗೋಧಿಯನ್ನ ಉತ್ಪಾದಿಸುತ್ತವೆ. ಹೀಗಾಗಿ ಗೋಧಿ ಭಾರತಕ್ಕೆ ಬಿಸಿ ತಟ್ಟಿಸದೆ ಇರಬಹುದು, ಆದರೆ ಜಾಗತಿಕವಾಗಿ ಇದರ ಬಿಸಿ ಖಂಡಿತ ತಟ್ಟುತ್ತದೆ. ಈಗಾಗಲೇ ಜಾಗತಿಕವಾಗಿ ಗೋಧಿಯ ಬೆಲೆ ಕೆಲವೇ ವರ್ಷದಲ್ಲಿ ಮೂರುಪಟ್ಟು ಹೆಚ್ಚಳವನ್ನ ಕಂಡಿದೆ ಎನ್ನುವುದು ಇಲ್ಲಿ ಉಲ್ಲೇಖಾರ್ಹ. ಉಕ್ರೇನ್ ಮೇಲೆ ರಷ್ಯಾ ಯುದ್ಧ ಸಾರಿದ ಪರಿಣಾಮ ಈಗ ಮತ್ತಷ್ಟು ಪರಿಸ್ಥಿತಿ ಬಿಗಡಾಯಿಸಿದೆ ಈ ಮೂಲಕ ತೈಲ ಸರಬುರಾಜು ಆಗುತ್ತಿಲ್ಲ ಹೆಚ್ಚಾಗಿ ಅಡುಗೆ ಅನಿಲವೂ ಕಡಿಮೆಯಾಗುತ್ತಿದೆ ಈ ಮೂಲಕ ಈ ಎಣ್ಣೆ ಬೆಲೆ ಏರಿಕೆಗಳು ಆಗುವುದ ನಿಶ್ಚಿತವಾಗಿದೆ ಜೊತೆಗೆ ಇತರೆ ವಸ್ತುಗಳು ಕೂಡ ಬೆಲೆ ಏರಿಕೆಯಾಗಲಿದೆ ಇದು ಈ ಯುದ್ಧದ ಪರಿಣಾಮ ಎನ್ನುವುದು ಕಾರಣ

ಭಾರತದಲ್ಲಿ ಇಂದು ಆಂತರಿಕ ಸಮಸ್ಯೆಗಳು ಬಹಳವಾಗಿದೆ. ಆಂತರಿಕ ಸಮಸ್ಯೆಯ ಹುಟ್ಟಿಗೆ ಹೊರಗಿನಿಂದ ಬಹಳಷ್ಟು ಶಕ್ತಿಗಳು ಪ್ರೇರಣೆ ನೀಡುತ್ತಿವೆ ಎನ್ನುವುದು ಕೂಡ ಸತ್ಯ. ಸದ್ಯದ ಪರಿಸ್ಥಿತಯಲ್ಲಿ ಭಾರತದಲ್ಲಿ ಹಣದುಬ್ಬರ ತಡೆದುಕೊಳ್ಳುವ ಶಕ್ತಿ ಜನತೆಗಿಲ್ಲ. ಯಾವುದೇ ಕಾರಣಕ್ಕೂ ಬೆಲೆಯಲ್ಲಿ ಹೆಚ್ಚಳವಾಗಬಾರದು. ಆದರೆ ಬೆಲೆಯ ಮೇಲಿನ ನಿಯಂತ್ರಣ ಇಂದು ಕೇವಲ ಭಾರತ ಸರಕಾರದ ಕೈಯಲ್ಲಿ ಕೂಡ ಇಲ್ಲ. ಮೇಲೆ ಹೇಳಿದ ಮೂರು ಕಾರಣಗಳು ಭಾರತದ ಹಿಡಿತದಲ್ಲಿಲ್ಲ. ಹೀಗಾಗಿ ಭಾರತ ಸರಕಾರದ ಮುಂದೆ ಸದ್ಯದಲ್ಲೇ ಅತ್ಯಂತ ಗುರುತರವಾದ ಸಮಸ್ಯೆ ಬಂದು ನಿಲ್ಲಲಿದೆ. ಪ್ಯಾಂಡೆಮಿಕ್ ನಿಂದ ಈಗಷ್ಟೆ ಹೊರಬರುತ್ತಿರುವ ಸಮಾಜ ಮತ್ತು ಸರಕಾರ ಎರಡೂ ಇಂತಹ ಪರಿಸ್ಥಿತಿಯನ್ನ ಹೇಗೆ ನಿಭಾಯಿಸುತ್ತವೆ ಎನ್ನುವುದು ಸಹಜವಾಗೇ ಕುತೂಹಲಕ್ಕೆ ಎಡೆ ಮಾಡಿಕೊಡುತ್ತದೆ. ಸರಕಾರವನ್ನ ದ್ವಂದ್ವಕ್ಕೆ ಸಿಲುಕಿಸುವ ಒಂದಲ್ಲ ಒಂದು ಸಮಸ್ಯೆಯಲ್ಲಿ ಸಿಲುಕಿಸುವ ಅವುಗಳಲ್ಲಿ ಯಾವುದರಲ್ಲಿ ಸೋತರು ಅದನ್ನ ದೊಡ್ಡದಾಗಿ ಬಿಂಬಿಸುವ ಹುನ್ನಾರಗಳು ನಡೆಯುತ್ತಿವೆ. ಜಾಗತಿಕ ಮಟ್ಟದಲ್ಲಿ ಯಾವ ದೇಶದಲ್ಲಿ ಯಾರ ಸರಕಾರವಿದ್ದರೆ ಹೆಚ್ಚು ಲಾಭ ಎನ್ನುವ ಲೆಕ್ಕಾಚಾರ ಹಾಕುವ ಪರಿಪಾಠ ಇಂದು ನಿನ್ನೆಯದಲ್ಲ , ಹೀಗಾಗಿ ಇದು ಅವರಿಗೆ ಮಾಮೂಲಿ ಆಟ. ಇವೆಲ್ಲ ಪ್ರಹಸನಗಳ ನಡುವೆ ಪೈಸೆ ಪೈಸೆಗೂ ತಲೆ ಬಿಸಿ ಮಾಡಿಕೊಳ್ಳುವ ಜನ ಸಾಮಾನ್ಯ ಪ್ರಜೆಯ ಗೋಳು ಕೂಡ ಕಡಿಮೆಯಾಗುವ ಲಕ್ಷಣಗಳು ಕಾಣುತ್ತಿಲ್ಲ. ಯಾವುದಕ್ಕೂ ಖರ್ಚಿನ ಮೇಲೆ ನಿಗಾ ಇರಬೇಕಷ್ಟೆ.

ಪತ್ರಿಕೆಗೆ ಚಂದಾದಾರರಾಗಿ ಮತ್ತಷ್ಟು ಬೆಳೆಯಲು ತಾವೂ ಬಾಗಿಯಾಗಿ
ಚಂದಾದಾರರ ವಿವರ

| | |
|---|---|
| ವಾರ್ಷಿಕ | 1100 |
| ಅರ್ಧವಾರ್ಷಿಕ | 600 |
| ಎರಡು ವರ್ಷ | 2200 |
| ಆರು ವರ್ಷ | 6600 |
| ಪೋಷಕರು | 10,000 |
| ಮಹಾಪೋಷಕರು | 20,000 |

# ಲೇಡಿ ವಿಲನ್‌ಗಳ ಧಾರಾವಾಹಿಯಗಳಲ್ಲಿ ವಿಕೃತಿ ಮಿತಿ ಮೀರಿ...

ಹಿಟ್ & ರನ್

ಕನ್ನಡ ಮನರಂಜನಾ ಚಾನೆಲ್‌ಗಳ ಇದೆಂಥಾ ಪರಿಸ್ಥಿತಿ ನೋಡಿ.. ಇಡೀ ದಿನ ಯಾವುದೇ ಚಾನೆಗಳನ್ನು ವೀಕ್ಷಿಸಿದರು ಧಾರಾವಾಹಿಗಳು ರಾರಾಜಿಸುತ್ತಿರುತ್ತವೆ, ಅವೆಲ್ಲವೂ ಒಂದೇ ರೀತಿಯ ಪಾತ್ರಗಳ ಮೂಲಕ ಕತೆ ಹೇಳುವ ಮೂಲಕ ವೀಕ್ಷಕರನ್ನು ಮೂರ್ಖರನ್ನಾಗಿಸುತ್ತವೆ.

ಹೌದು ಕನ್ನಡದ ಬಹುತೇಕ ಮನರಂಜನಾ ಚಾನೆಲ್‌ಗಳಲ್ಲಿ ಬರುತ್ತಿರುವ ಧಾರಾವಾಹಿಗಳು ಒಂದೇ ರೀತಿಯ ಪಾತ್ರಗಳ ಇಟ್ಟುಕೊಂಡು ಕತೆಗಳನ್ನು ಎಣೆಯಲಾಗುತ್ತಿದೆ, ಒಂದು ಹೊಸ ಧಾರವಾಹಿ ಬಂದರೆ ಅದೇ ರೀತಿಯ ಅಷ್ಟಿಷ್ಟು ಬದಲಾವಣೆ ಮಾಡಿ ಕತೆಯನ್ನು ರಚಿಸಲಾಗುತ್ತದೆ ವಿಶೇಷ ಎಂದರೆ ಎಲ್ಲಾ ಧಾರವಾಹಿಗಳಲ್ಲಿಯೂ ಲೇಡಿ ವಿಲನ್‌ಗಳೆ. ಕನ್ನಡದ ಯಾವುದೇ ಧಾರವಾಹಿಗಳನ್ನು ವೀಕ್ಷಿಸುತ್ತಿದ್ದರೂ ಅದರಲ್ಲಿ ನಾಯಕಿಯ ಅತ್ತೆ, ತಂಗಿ, ಅಮ್ಮ ಅಥವಾ ನಾದಿನಿ ವಿಲನ್‌ಗಳಾಗಿರುತ್ತಾರೆ ಅವರ ಮೂಲಕ ನಾಯಕಿಗೆ ಅಥವಾ ನಾಯಕನಿಗೆ ತೊಂದರೆ ಕೊಡುವ ಪಾತ್ರಗಳೇ ಎಲ್ಲವೂ ಕೂಡ .

ಇಂಥ ಬಹುತೇಕ ಧಾರವಾಹಿಗಳು ಈಗ ಕನ್ನಡದ ಎಲ್ಲಾ ಧಾರಾವಾಹಿಗಳಲ್ಲಿಯೂ ಇವೆ. ಜೀ ಕನ್ನಡದಲ್ಲಿ ಬರುವ ಪಾರು, ಗಟ್ಟಿಮೇಳ,ಸತ್ಯ. ಕಲರ್ಸ್‌ಕನ್ನಡದಲ್ಲಿ ಬರುತ್ತಿರುವ ಲಕ್ಷಣ,ಮಂಗಳಗೌರಿ, ಕನ್ನಡತಿ, ಉದಯ ಟಿವಿಯಲ್ಲಿ ಬರುತ್ತಿರುವ ಕಾವ್ಯಾಂಜಲಿ, ಮಹಾಸಂಗಮ, ದೇವಯಾನಿ, ಸ್ಟಾರ್ ಸುವರ್ಣದಲ್ಲಿ ಬರುತ್ತಿರುವ ರಾಧಾ ಶ್ಯಾಮ, ಹೊಂಗನಸು ಹೀಗೆ ಹತ್ತು ಹಲವಾರು ಧಾರಾವಹಿಗಳಲ್ಲಿ ಇದೇ ರೀತಿಯ ಲೇಡಿ ವಿಲನ್‌ಗಳದ್ದೇ ಕಾರುಬಾರು ಈ ಮೂಲಕ ಸಮಾಜಕ್ಕೆ ಯಾವ ಸಂದೇಶವನ್ನು ರವಾನಿಸುತ್ತಿದ್ದಾರೆ ಎನ್ನುವ ಪ್ರಶ್ನೆಗಳು ಈಗ ಉದ್ಭವವಾಗಿವೆ. ಒಂದು ಧಾರವಾಹಿ ಸಮಾಕ್ಕೆ ಮಾದರಿಯಾಗುವಂತದ್ದಾಗಬೇಕು ಆದರೆ ಮಾದರಿಗಿಂತ ಮಾರಕವಾಗುವ ಪಾತ್ರಗಳ ಮೂಲಕ ಕೆಟ್ಟ ಸಂದೇಶಗಳನ್ನು ರವಾನಿಸುತ್ತಿವೆ.




ಕನ್ನಡದಲ್ಲಿ ಹಲವಾರು ಕಾದಂಬರಿಗಳಿವೆ ಅಂತ ಕಾದಂಬರಿಗಳ ಮೂಲಕ ದಾರಾವಾಹಿಗಳನ್ನು ತೆಗೆಯ ಬಹುದು ಆದರೆ ಅಂತ ಕೆಲಸವನ್ನು ಯಾರು ಮಾಡುತ್ತಿಲ್ಲ ಎನ್ನುವುದು ಬೇಸರದ ಸಂಗತಿ. ಇನ್ನೂ ಮಹಾನಾಯಕ, ಸುಭಾಶ್ ಚಂದ್ರಬೋಸ್, ಅಂತ ಧಾರಾವಾಹಿಗಳು ನಿಜಕ್ಕೂ ಸಮಾಜಕ್ಕೆ ಮಾದರಿಯಾಗಿವೆ ಅಲ್ಲದೆ ಮಕ್ಕಳ ಮನಸ್ಸುಗಳ ಮೇಲೆ ಅಂತ ನಾಯಕರ ಪ್ರಭಾವ ಬೀರುವ ಮೂಲಕ ಅವರ ಮುಂದಿನ ಭವಿಷ್ಯವೂ ಉತ್ತಮವಾಗಬಹುದು. ಇದೇ ದಾರಿಯಲ್ಲಿ ಇತ್ತೀಚೆಗೆ ಕನಕದಾಸ ಧಾರಾವಾಹಿಯೂ ಆರಂಭವಾಗಿದೆ ಇಂತ ಧಾರವಾಹಿಗಳನ್ನು ಪ್ರಸಾರ ಮಾಡುವ ಮೂಲಕ ಮಕ್ಕಳ ಮನಸ್ಸಿನ ಮೇಲೆ ಪ್ರಭವಗಳು ಬೀರುತ್ತವೆ. ಇಂತ ಧಾರವಾಹಿಗಳನ್ನು ಬಿಟ್ಟು ಕುಟುಂಬದಲ್ಲಿ ಕೆಡುಕು ಮಾಡುವಂತ ಕೆಟ್ಟ ದರಿದ್ರ ಧಾರಾವಾಹಿಗಳು ನಿಜಕ್ಕೂ ಸಮಾಜಕ್ಕೆ ಮಾರಕವೇ ಮೊದಲು ಲೇಡಿ ವಿಲನ್ ಪಾತ್ರಗಳನ್ನು ನಿಲ್ಲಿಸಿ ಬದಲಾಗಿ ಒಂದೊಳ್ಳೆ ಸಂಸಾರಿಕ ಧಾರಾವಹಿಗಳನ್ನು ಪ್ರಸಾರ ಮಾಡುವತ್ತ ಮುಖಮಾಡಿ. ಇತ್ತೀಚೆಗೆ ಜೀಕನ್ನಡದಲ್ಲಿ ಬರುತ್ತಿರುವ ಪಾರು ಧಾರಾವಾಹಿಯ ಮದುವೆ ದೃಶ್ಯವನ್ನು ಹಿಗ್ಗಿಸಿ ಸತತ ಮೂರು ತಿಂಗಳುಗಳ ಕಾಲ ಪ್ರಸಾರ ಮಾಡಿತು ಅದರಲ್ಲೇನು ವಿಶೇಷ ಅಂತದ್ದು ಇಲ್ಲ ಆದರೆ ಒಂದು ಮದುವೆ ದೃಶ್ಯವನ್ನು ಇಷ್ಟೊಂದು ಹಿಗ್ಗಿಸಿ ಜನರ ಮನಸ್ಸಿಗೆ ಘಾಸಿ ಮಾಡಿ ಪ್ರಸಾರ ಮಾಡುವಂತ ಯೋಗ್ಯ ಕತೆ ಅದರಲ್ಲೇನಿತ್ತು ಇಂತ ನಿರ್ದೇಶಕರಿಗೆ ಮೊದಲು ನಮಸ್ಕಾರ ಮಾಡಬೇಕು ಅದೇ ರೀತಿ ಗಟ್ಟಿಮೇಳ ಧಾರಾವಾಹಿಯು ಕೂಡ ಒಂದು ಮದುವೆ ದೃಶ್ಯವನ್ನು ಒಂದು ತಿಂಗಳ ಕಾಲ ಹಿಂದೆ ನೆರವೇರಿಸಿತ್ತು ಅದು ಕೂಡ ಜೀ ಕನ್ನಡ ಚಾನಲ್‌ನಲ್ಲಿ ಬರುತ್ತಿರುವ ಧಾರವಾಹಿಯೇ. ಇಂತ ದೃಶ್ಯಗಳಿಂದ ಸಾಧನೆ ಮಾಡುವುದಾದರೂ ಏನಾದರೂ ಇದೆಯೇ ಅಥವಾ ಅದರಿಂದ ಟಿಆರ್‌ಪಿ ಬರುತ್ತದೆ ಎನ್ನುವ ಕಾರಣಕ್ಕೆ ಊಹಂ ಪ್ರತಿಷ್ಟೆಗೆ ಧಾರಾವಾಹಿಯನ್ನು ಒಂದಿಷ್ಟು ಹಿಗ್ಗಿಸಲು ಅನುಕೂಲವಾಗುತ್ತದೆ ಎನ್ನುವ ಕಾರಣಕ್ಕೆ ಇಂತ ದೃಶ್ಯಗಳನ್ನು ಪ್ರಸಾರ ಮಡಲಾಗುತ್ತದೆ. ಮೊದಲು ಇಂತ ಕತೆಗಳನ್ನು ಬಿಟ್ಟು ಸಮಾಜಕ್ಕೆ ಆದರ್ಶವಾಗಬಹುದಾದ ಕತೆಗಳನ್ನಾದರೂ ಪ್ರಸಾರ ಮಡಿ ಸಮಾಜಕ್ಕೆ ಒಂದಿಷ್ಟು ಕೊಡುಗೆ ಕೊಟ್ಟರೆ ನಿಜಕ್ಕೂ ಅವರ ಜನ್ಮ ಸಾರ್ಥಕವಾಗುತ್ತದೆ.

# ನರಿಗೆ ಬೇಡವಾದ ಯುದ್ಧ



ಸನತ್‌ಕುಮಾರ ಬೆಳಗಲಿ
ಹಿರಿಯ ಪತ್ರಕರ್ತರು

ಉಕ್ರೇನ್ ಮೇಲೆ ರಷ್ಯದ ಸರ್ವಾಧಿಕಾರಿ ಪುತೀನ್ ದಾಳಿ ಆರಂಭಿಸಿ ಒಂದು ವಾರವಾಗುತ್ತ ಬಂದು ಸಾವಿರಾರು ಜನ ಅಸು ನೀಗಿದ್ದಾರೆ.ಅಲ್ಲಿ ವ್ಯಾಸಂಗ ಮಾಡಲು ಹೋಗಿದ್ದ ಭಾರತದ ,ಕರ್ನಾಟಕದ ವಿದ್ಯಾರ್ಥಿಗಳು ತೊಂದರೆಗೆ ಸಿಲುಕಿದ್ದಾರೆ.ಹಾವೇರಿ ಜಿಲ್ಲೆಯ ಒಬ್ಬ ವಿದ್ಯಾರ್ಥಿ ರಷ್ಯದ ಕ್ಷಿಪಣಿ ದಾಳಿಯಲ್ಲಿ ಸಾವಿಗೀಡಾಗಿದ್ದಾನೆ.

ಪಕ್ರತಿ ವಿಕೋಪಗೊಂಡಾಗ ಕಾಣದ ದೇವರಿಗೆ ಮೊರೆ ಹೋಗುವದು,ಅಭಿಷೇಕ ಮಾಡಿಸುವದು,ಹರಕೆ ಬೇಡಿಕೊಳ್ಳುವದು,ಸಂಭಾವಿತನಂತೆ ವರ್ತಿಸುವದು ಮನುಷ್ಯನ ಚಾಳಿ.ಎಲ್ಲ ಸರಿ ಹೋದಾಗ ಸಹಜೀವಿಗಳನ್ನೇ ಕತ್ತರಿಸಲು ಕತ್ತಿ ಹಿರಿದು ನಿಲ್ಲವದು ,ಜೊತೆಗಿರುವವರನ್ನು ಕೊಲ್ಲವದು,ಪ್ರೀತಿಯನ್ನು ಹಂಚುವ ತಾನೇ ಕಟ್ಟಿಕೊಂಡ ಸಹಬಾಳ್ವೆ ಯ ಸಮಾಜವನ್ನು ಹೊಸಕಿ ಹಾಕುವದು ಮನುಷ್ಯ ನಿಗೆ ಹೊಸದಲ್ಲ.ಅದು ಶಿವಮೊಗ್ಗ ಆಗಿರಲಿ ಇಲ್ಲವೇ ಉಕ್ರೇನ್ ಆಗಿರಲಿ ನೆಲದ ಮೇಲೆ ಬೀಳುವ ರಕ್ತ ಮನುಷ್ಯನದು.ಇದಕ್ಕೆ ಕಾರಣನೂ ಮನುಷ್ಯನೆ ಅಲ್ಲವೇ?

ಕೊವಿಡ್ ನಂಥ ಸಾಂಕ್ರಾಮಿಕಗಳು ಬಂದು ಸಾವಿರಾರು ಜನ ಸತ್ತರು.ಆಗಾಗ ಭೂಕಂಪ ಗಳು,ಪ್ರವಾಹಗಳು ಸಂಭವಿಸಿ ಲಕ್ಷಾಂತರ ಜನ ಅಸು ನೀಗುತ್ತಲೆ ಇರುತ್ತಾರೆ.ಭೂಗೋಳ ಬಿಸಿಯೇರಿ ವಾತಾವರಣ ಅಸಹನೀಯವಾಗುತ್ತಿದೆ. ಇದ್ಯಾವುದರಿಂದಲೂ ಮನುಷ್ಯ ಪಾಠ ಕಲಿಯಲಿಲ್ಲ.ಪರಸ್ಪರ ಹೊಡೆದಾಡುವದನ್ನು ಬಿಡಲಿಲ್ಲ.

ಎಲ್ಲಿ ಮೂರನೇ ಮಹಾಯುದ್ಧಕ್ಕೆ ಕಾರಣವಾಗುವದೋ ಎಂಬ ಭೀತಿಯನ್ನು ಮೂಡಿಸಿರುವ ಉಕ್ರೇನ್ ದುರಂತಕ್ಕೆ ದುರಹಂಕಾರಿ ಪುತೀನ್ ಮಾತ್ರ ಕಾರಣವಲ್ಲ. ಆತನಷ್ಟೇ ಆಂಗ್ಲೋ ಅಮೆರಿಕ ಮತ್ತು ಮತ್ತು ದುಷ್ಟ ನ್ಯಾಟೋ ಕೂಟವೂ ಕಾರಣ.ವಿಲಿ,ವಿಲಿ ಒದ್ದಾಡಿ ಸಾಯುವವರು ಮಾತ್ರ ಉಕ್ರೇನ್ ನ ಸಾಮಾನ್ಯ ಜನ.ಅಷ್ಟೇ ಅಲ್ಲ,ಅಲ್ಲಿ ವ್ಯಾಸಂಗಕ್ಕೆ ಹೋದ ಭಾರತದ ,ಕರ್ನಾಟಕದ ವಿದ್ಯಾರ್ಥಿಗಳು,ಮತ್ತು ನಾನಾ ಕಾರಣಗಳಿಗಾಗಿ ಅಲ್ಲಿ ಹೋದ ಜಗತ್ತಿನ ಬೇರೆ ಬೇರೆ ದೇಶಗಳ ನಾಗರೀಕರು.

ತೊಂಬತ್ತರ ದಶಕದ ಆರಂಭದ ಸಮಾಜವಾದಿ ಸೋವಿಯತ್ ರಷ್ಯ ಪತನಗೊಂಡ ನಂತರ ಸೋವಿಯತ್ ಒಕ್ಕೂಟ ಒಡೆದು ಚೂರು ಚೂರಾಯಿತು ಜೊತೆಗೆ ಜಗತ್ತಿನ ಚಿತ್ರವೇ ಬದಲಾಯಿತು.ಸಂಪತ್ತಿನ ಸಮಾನ ಹಂಚಿಕೆಯ ಸಮತೆಯ ಕನಸು ಭಗ್ನಗೊಂಡು ಮುಕ್ತ ಆರ್ಥಿಕತೆಯ ಹೆಸರಿನಲ್ಲಿ ಮಾರುಕಟ್ಟೆ ಆರ್ಥಿಕತೆಯ ಭ್ರಮಾಲೋಕ ಸೃಷ್ಟಿ ಯಾಯಿತು.

ಸೋವಿಯತ್ ಸಮಾಜವಾದಿ ಕ್ರಾಂತಿಯ ನಾಯಕ ವ್ಲಾದಿಮಿರ್ ಲೆನಿನ್ ವಿಭಿನ್ನ ಜನ ಸಮುದಾಯಗಳು,ಭಾಷೆಗಳು ,ಧರ್ಮಗಳು ಮತ್ತು ರಾಷ್ಟ್ರೀಯತೆಗಳ ಜನರನ್ನು ಕೂಡಿಸಿ ಸಮಾಜವಾದಿ ವ್ಯವಸ್ಥೆ ಯನ್ನು ನಿರ್ಮಿಸಿದ್ದರು.ಆಗ ಉಕ್ರೇನ್ ಕೂಡ ರಷ್ಯದ ಭಾಗವಾಗಿತ್ತು.ರಷ್ಯದೊಂದಿಗೆ ಸಮ್ಮಿಳಿತಗೊಂಡ ವಿಭಿನ್ನ ರಾಷ್ಟ್ರೀಯತೆಗಳ ಜನರಿಗೆ ಮತ್ತು ಆ ಜನ ನೆಲೆಸಿದ ಪ್ರದೇಶಗಳಿಗೆ ಸ್ವಾಯತ್ತ ಅಧಿಕಾರದ ಖಾತರಿಯನ್ನು ಲೆನಿನ್ ನೀಡಿದ್ದರು. ಲಿಪಿಯಿಲ್ಲದ ಬುಡಕಟ್ಟು ಗಳ ಜನರ ಭಾಷೆಗೆ ಲಿಪಿಯನ್ನು ಒದಗಿಸಿದ್ದರು.ಲೆನಿನ್ ಆಗ ಉಕ್ರೇನ್ ನಂಥ ಪ್ರದೇಶಗಳ ಜನರ ರಾಷ್ಟ್ರೀಯತೆಯನ್ನು ಗೌರವಿಸಿ ಸ್ವಾಯತ್ತತೆ ನೀಡಿದ್ದೇ ತಪ್ಪು ಎಂದು ರಷ್ಯದ ಈಗೀನ ನಿರಂಕುಶಾಧ್ಯಕ್ ಪುತೀನ್ ಹೇಳುತ್ತಿದ್ದಾರೆ.

ಸೋವಿಯತ್ ಸಮಾಜವಾದಿ ಕ್ರಾಂತಿಯ ಕಾಲದಲ್ಲಿ (1917 ) ರಷ್ಯಾವನ್ನು ಆಳುತ್ತಿದ್ದ ಝಾರ್ ದೊರೆಯನ್ನು ಎದುರಿಸಿ ಉಕ್ರೇನ್ ಮಾತ್ರವಲ್ಲ ಉಜ್ಬೆಕಿಸ್ತಾನ್,ಜಾರ್ಜಿಯಾ ಮತ್ತು ರಷ್ಯದ ದುಡಿಯುವ ಜನ ಹೆಗಲಿಗೆ ಹೆಗಲು ಕೊಟ್ಟು ಹೋರಾಡಿದ್ದರು.ಈಗ ಪುತೀನ್ ಕೈಯಲ್ಲಿ ಸಿಕ್ಕ ರಷ್ಯಾ ಉಕ್ರೇನ್ ಮೇಲೆ ಭಯಾನಕ ದಾಳಿ ನಡೆಸಿದೆ.

ನ್ಯಾಟೋ ಕೂಟವೆಂದರೆ ಎರಡನೇ ಮಹಾಯುದ್ಧದ ಮುಕ್ತಾಯದ ನಂತರ ಅಮೆರಿಕ, ಬ್ರಿಟನ್,ಕೆನಡಾ,ಮತ್ತು ಫ್ರಾನ್ಸ್, ಸೇರಿದಂತೆ ಹನ್ನೆರಡು ಬಂಡವಾಳಶಾಹಿ ದೇಶಗಳು ಜೊತೆ ಸೇರಿ ಮಾಡಿಕೊಂಡ ಸೇನಾ ಮೈತ್ರಿಕೂಟ.(ನ್ಯಾಟೊ ಅಂದರೆ ನಾರ್ಥ್ ಅಟ್ಲಾಂಟಿಕ್ ಟ್ರೀಟಿ ಆರ್ಗನೈಸೇಶನ್) ಪ್ರಸ್ತುತ ಇದರಲ್ಲಿ ಮೂವತ್ತು ದೇಶಗಳು ಸದಸ್ಯತ್ವ ಹೊಂದಿವೆ.



ಇದರ ಸದಸ್ಯ ರಾಷ್ಟ್ರಗಳ ಮೇಲೆ ವೈರಿ ದೇಶಗಳು ದಾಳಿ ಮಾಡಿದರೆ ಪರಸ್ಪರ ನೆರವಿಗೆ ಬರುತ್ತವೆ. ಇದು ಮೇಲ್ನೋಟದ ಸರಳ ವ್ಯಾಖ್ಯಾನ. ಇದರಾಚೆ ನ್ಯಾಟೋ ಕೂಟದ ನಿಜವಾದ ಉದ್ದೇಶ ಅಂದಿನ ಸೋವಿಯತ್ ರಷ್ಯಾದ ಮತ್ತು ಪೂರ್ವ ಯುರೊಪಿನ ಸಮಾಜವಾದಿ ದೇಶಗಳ ನ್ನು ಮತ್ತು ಅವುಗಳ ಜೊತೆ ಸ್ನೇಹ ಹೊಂದಿರುವ ದೇಶಗಳನ್ನು ಹೊಸಕಿ ಹಾಕುವದಾಗಿತ್ತು.ಇದು ಜಗತ್ತಿನ ಅಭಿವೃದ್ಧಿ ಶೀಲ ದೇಶಗಳ ಮೇಲೆ ಹಿಡಿತ ಸಾಧಿಸಿ ಅಲ್ಲಿನ ಸಂಪತ್ತನ್ನು ಕೊಳ್ಳೆ ಹೊಡೆಯುವದಾಗಿತ್ತು.ಇದಕ್ಕೆ ಪ್ರತಿಯಾಗಿ ಸೋವಿಯತ್ ರಷ್ಯ ಮತ್ತು ಪೂರ್ವ ಯುರೋಪಿನ ಕಮ್ಯುನಿಸ್ಟ್ ದೇಶಗಳು ವಾರ್ಸಾ ಮೈತ್ರಿ ಕೂಟ ರಚಿಸಿದವು. ಆದರೆ ಸೋವಿಯತ್ ಸಮಾಜವಾದಿ ವ್ಯವಸ್ಥೆಯ ಪತನದೊಂದಿಗೆ ವಾರ್ಸಾ ಕೂಟ ದಿಕ್ಕಾಪಾಲಾಯಿತು.ವಾರ್ಸಾ ಕೂಟದಲ್ಲಿ ಇದ್ದ ಅನೇಕ ದೇಶಗಳು ನ್ಯಾಟೋ ಕೂಟಕ್ಕೆ ಶರಣಾದವು.

ಪುತೀನ್ ದಾಳಿಗೆ ಆತ ಮಾತ್ರ ಕಾರಣವಲ್ಲ .ಸೋವಿಯತ್ ಪತನದ ನಂತರ ಯುರೊಪಿನಲ್ಲಿ ಕೈ ಯಾಡಿಸಲು ಮುಂದಾದ ಅಮೆರಿಕದ ನೇತೃತ್ವದ ನ್ಯಾಟೋ ಕೂಡ ಕಾರಣ. ಹಿಂದೆ ಸೋವಿಯತ್ ಒಕ್ಕೂಟದ ಭಾಗವಾಗಿದ್ದ ಉಕ್ರೇನ್ ನಂಥ ದೇಶಗಳನ್ನು ನ್ಯಾಟೋ ಕೂಟಕ್ಕೆ ಸೇರಿಸಿಕೊಳ್ಳಲು ಮುಂದಾದ ಅಮೆರಿಕೆಯ ಹುನ್ನಾರ ರಷ್ಯದ ಅಸಮಾಧಾನ ಕ್ಕೆ ಕಾರಣ. ಈಗ ಅಮೆರಿಕ ಹಾಗೂ ನ್ಯಾಟೋ ಪಡೆಗಳು ರಷ್ಯದ ಸುತ್ತುವರಿದಿರುವದು ಮತ್ತು ಉಕ್ರೇನ್ ಮುಂತಾದ ದೇಶಗಳನ್ನು ಬುಟ್ಟಿಗೆ ಹಾಕಿಕೊಳ್ಳಲು ಯತ್ನಿಸುತ್ತಿರುವದು ಪರಿಸ್ಥಿತಿ ಬಿಗಡಾಯಿಸಲು ಕಾರಣ.

ಇರಾಕಿನಲ್ಲಿ ಸದ್ಧಾಮ ಹುಸೇನ್ ಪರಮಾಣು ಅಸ್ತ್ರ ಗಳನ್ನು ಅಡಗಿಸಿಟ್ಟಿದ್ದಾರೆಂಬ ಸುಳ್ಳು ಆರೋಪಗಳನ್ನು ಹೊರಿಸಿ ಆ ದೇಶದ ಮೇಲೆ ಬಾಂಬ್ ದಾಳಿ ಮಾಡಿ ಸರ್ವನಾಶ ಮಾಡಿತು.ಆದರೆ ಇರಾಕ್ ಅಣ್ವಸ್ತ್ರಗಳನ್ನು ಅಡಗಿಸಿಟ್ಟಿರಲಿಲ್ಲ ಎಂಬ ಸಂಗತಿ ನಂತರ ಜಗತ್ತಿಗೆ ಗೊತ್ತಾಯಿತು.ಲಿಬಿಯಾದಲ್ಲೂ ತೈಲ ಸಂಪತ್ತನ್ನು ತನ್ನ ಪ್ರಜೆಗಳ ಏಳಿಗೆಗೆ ಬಳಸಿದ ಗಡಾಫಿಯನ್ನು ಹತ್ಯೆ ಮಾಡಲಾಯಿತು.ಅಲ್ಲಿ ಮುಂದೇನಾಯುತೆಂಬುದು ಎಲ್ಲರಿಗೂ ಗೊತ್ತಿದೆ.

ಈ ಪುತೀನ್ ಸಂಪನ್ನ ನೇನಲ್ಲ.ಆತ ತನಗೆ ಪ್ರತಿರೋಧ ವೇ ಇಲ್ಲದ ಗುಲಾಮಗಿರಿ ವ್ಯವಸ್ಥೆ ಯನ್ನು ಬಯಸುತ್ತಾನೆ.ಇದಕ್ಕೆ ಉಕ್ರೇನ್ ಮೇಲೆ ದಿಡೀರ ಆರಂಭಿಸಿರುವ ಬಾಂಬ್ ದಾಳಿಯೇ ಒಂದು ಉದಾಹರಣೆ.ಆದರೆ ಇದಕ್ಕೆ ಕಾರಣವಾಗಿದ್ದು ಉಕ್ರೇನ್ ನನ್ನ ತನ್ನ ಬುಟ್ಟಿಗೆ ಹಾಕಿಕೊಂಡು ಅಲ್ಲಿ ಮಿಲಿಟರಿ ನೆಲೆಯನ್ನು ಭದ್ರಗೊಳಿಸಲು ಹೊರಟ ಅಮೆರಿಕ ನೇತೃತ್ವದ ನ್ಯಾಟೋ ಕೂಟ ಎಂಬುದನ್ನು ಮರೆಯಲಾಗದು.

ಮುಸ್ಲಿಂ ಸಮುದಾಯದಲ್ಲಿ ಆಧುನಿಕತೆಯಿಲ್ಲ,ಸುಧಾರಣೆಯಿಲ್ಲ ಎಂದು ವಾದಿಸುವ ಆ ಸಮುದಾಯದ ಮಹಿಳೆಯರ ಪರಿಸ್ಥಿತಿ ಬಗ್ಗೆ ಒಣ ಅನುಕಂಪದ ಮಾತುಗಳನ್ನಾಡುವ ಜನ ನಮ್ಮಲ್ಲೂ ಇದ್ದಾರೆ.ಅಮೆರಿಕ ಕೂಡ ಅದೇ ಮಾತನ್ನು ಆಡುತ್ತದೆ. ಆದರೆ ಇರಾಕ್ ಮತ್ತು ಲಿಬಿಯಾಗಳಲ್ಲಿ ಸದ್ದಾಮ್ ಹುಸೇನ್ ಮತ್ತು ಕರ್ನಲ್ ಗಡಾಫಿ ಮಹಿಳೆಯರಿಗೆ ಎಲ್ಲ ಸ್ವಾತಂತ್ರ್ಯವನ್ನು ನೀಡಿದ್ದರು.ಅಲ್ಲಿ ಮಹಿಳೆಯರು ವೈದ್ಯರಾಗಿ, ವಿಜ್ಞಾನಿಗಳಾಗಿ,ವಿಮಾನ ಚಾಲಕರಾಗಿ ,ಉಪನ್ಯಾಸ ಕರಾಗಿ ಹೀಗೆ ನಾನಾ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿದ್ದರು. ಆದರೂ ಆ ದೇಶಗಳನ್ನು ತೈಲ ಸಂಪತ್ತಿಗಾಗಿ ಧ್ವಂಸ ಗೊಳಿಸಿದ ವಾಷಿಂಗ್ಟನ್ ಈಗ ಉಕ್ರೇನ್ ಪ್ರಜೆಗಳಿಗೆ ನ್ಯಾಯ ಒದಗಿಸುವ ಹೆಸರಿನಲ್ಲಿ ಯುದ್ಧಕ್ಕೆ ಕಾರಣವಾಗಿದೆ.ರಷ್ಯದ ಮತ್ತೊಬ್ಬ ಝಾರ್ ದೊರೆಯಾಗಲು ಹೊರಟ ಪುತೀನ್ ಇದನ್ನೇ ನೆಪ ಮಾಡಿಕೊಂಡು ಉಕ್ರೇನ್ ಮೇಲೆ ದಾಳಿ ನಡೆಸಿದ್ದಾನೆ.

ಇನ್ನು ಭಾರತದ ಪಾತ್ರ.ಉಕ್ರೇನ್ ಮೇಲೆ ದಾಳಿ ನಿಲ್ಲಿಸುವಂತೆ ಪ್ರಧಾನಿ ನರೇಂದ್ರ ಮೋದಿಯವರು ರಷ್ಯದ ಅಧ್ಯಕ್ಷ ವ್ಲಾಡಿಮಿರ್ ಪುತೀನ್ ಗೆ ದೂರವಾಣಿ ಮೂಲಕ ಮನವಿ ಮಾಡಿದ್ದಾರೆ.ಇದಕ್ಕಿಂತ ಹೆಚ್ಚಿಗೆ ಇನ್ನೇನನ್ನೂ ಮಾಡುವ ಸ್ಥಿತಿಯಲ್ಲಿ ಅವರೂ ಇಲ್ಲ. ಬಿಜೆಪಿ ಒಕ್ಕೂಟ ಸರ್ಕಾರದ ಅಧಿಕಾರ ಸೂತ್ರ ಹಿಡಿದಾಗಲೇ( 2014) ಭಾರತದ ವಿದೇಶಾಂಗ ನೀತಿ ಹಳ್ಳ ಕೂಡಿದೆ.ದೇಶದೊಳಗಿನ ಹಿಂದು_ಮುಸ್ಲಿಂ ರಾಜಕೀಯದಲ್ಲೇ ಮುಳುಗಿದ ಸರ್ಕಾರ ನೆಹರು ಕಾಲದ ಅಲಿಪ್ತ ವಿದೇಶಾಂಗ ನೀತಿಗೆ ಬಹುತೇಕ ಎಳ್ಳುನೀರು ಬಿಟ್ಟಿದೆ.ಹೀಗಾಗಿ ಹೆಚ್ಚಿನ ಪ್ರಭಾವ ಬೀರುವ ಸ್ಥಿತಿಯಲ್ಲಿ ಇಲ್ಲ.

ಎರಡನೇ ಮಹಾಯುದ್ಧ ಸಂದರ್ಭದಲ್ಲಿ ಚರ್ಚಿಲ್,ಸ್ಟಾಲಿನ್, ರೂಸ್ವೆಲ್ಟ್ ಅವರಂಥ ಜಾಗತಿಕ ನಾಯಕರಿದ್ದರು.ಆಗ ಅನೇಕ ಸಾವು ನೋವುಗಳಾದರೂ ಅಪಾಯ ತಪ್ಪಿತು.ಆದರೆ ಈಗ ಉಕ್ರೇನ್_ ರಷ್ಯಾ ಸಮರದಲ್ಲಿ ಇಡೀ ವಿಶ್ವ ನಾಯಕರಿಲ್ಲದೇ ಕಂಗಾಲಾಗಿದೆ.ಪರಮಾಣು ಅಸ್ತ್ರಗಳ ಜಮಾವಣೆ,ಪುತಿನ್ ಅಟಾಟೋಪ,ನ್ಯಾಟೋ ಕೂಟದ ಯುದ್ಧೋನ್ಮಾದ,ದಿಗಿಲುಗೊಂಡ ಉಕ್ರೇನ್, ಮುಂದೇನು ಗೊತ್ತಿಲ್ಲ. ಯುದ್ದದ ಪರಿಣಾಮ ಜಗತ್ತಿನ ಎಲ್ಲ ದೇಶಗಳ ಮೇಲೂ ಆಗಬಹುದು.ಸದ್ಯಕ್ಕಂತೂ ಒಳ್ಳೆಯ ದಿನಗಳಿಲ್ಲ

ವಿಶ್ವಸಂಸ್ಥೆ ಎಂದು ಕರೆಯಲ್ಪಡುವ ಸಂಯುಕ್ತ ರಾಷ್ಟ್ರ ಸಂಸ್ಥೆ ಈಗ ಹೆಸರಿಗೆ ಮಾತ್ರ ಇದೆ.ಇರಾಕ್ ಮತ್ತು ಲಿಬಿಯಾದ ಮೇಲೆ ಅಮೆರಿಕ ದುರಾಕ್ರಮಣ ನಡೆಸಿದಾಗ ಅದು ಶ್ವೇತಭವನದ ಕಣ್ಸನ್ನೆಯಂತೆ ಕಣ್ಣು ಮುಚ್ಚಿಕೊಂಡು, ಕಿವಿಯಲ್ಲಿ ಅರಳೆ ಇಟ್ಟುಕೊಂಡು ,ಬಾಯಿಯಲ್ಲಿ ಬೆಣೆ ಬಡಿದುಕೊಂಡು ಕುಳಿತಿತ್ತು.

ಈ ಯುದ್ಧ ಮುಂದುವರಿದರೆ ಅದರ ಪರಿಣಾಮ ರಷ್ಯಾ, ಉಕ್ರೇನ್ ಗಳಿಗೆ ಮಾತ್ರ ಸೀಮಿತ ವಾಗಿ ಉಳಿಯುವುದಿಲ್ಲ. ಇದರಿಂದ ಜಗತ್ತಿನ ಸಾಂಪತ್ತಿಕ ಸ್ಥಿತಿ ಹದಗೆಡುತ್ತದೆ.ಜಗತ್ತು ಈಗಾಗಲೇ ಕೊವಿಡ್ ಹೊಡೆತ ದಿಂದ ತತ್ತರಿಸಿದೆ.ಈ ಯುದ್ಧದ ಪರಿಣಾಮವಾಗಿ ಹಣದುಬ್ಬರ ಹೆಚ್ಚಾಗುತ್ತದೆ.ಎಲ್ಲ ದೇಶಗಳಲ್ಲಿ ಜೀವನಾವಶ್ಯಕ ಪದಾರ್ಥಗಳ ಬೆಲೆ ಏರಿಕೆಯಾಗುತ್ತದೆ.ಭಾರತದಲ್ಲೂ ಪೆಟ್ರೋಲಿಯಂ ಉತ್ಪನ್ನಗಳ ಬೆಲೆಗಳು ಗಗನಕ್ಕೇರಲಿವೆ.ಇದರ ಪರಿಣಾಮ ಎಲ್ಲಾ ಪದಾರ್ಥಗಳ ಬೆಲೆಗಳಲ್ಲಿ ಹೆಚ್ಚಳವಾಗಲಿದೆ.

ಉಕ್ರೇನ್ ನಲ್ಲಿ ವೈದ್ಯಕೀಯ ವ್ಯಾಸಂಗ ಮಾಡುತ್ತಿರುವ ಭಾರತದ ಸುಮಾರು ಇಪ್ಪತ್ತು ಸಾವಿರ ವಿದ್ಯಾರ್ಥಿ ಗಳಿದ್ದಾರೆ.ಅವರಲ್ಲಿ ಕರ್ನಾಟಕದ ಅನೇಕ ವಿದ್ಯಾರ್ಥಿಗಳು ಸೇರಿದ್ದಾರೆ.ಯುದ್ಧ ಆರಂಭವಾಗಿರುವದರಿಂದ ಸ್ವದೇಶಕ್ಕೆ ವಾಪಸಾಗಲು ಅವರು ಹಾತೊರೆಯುತ್ತಿದ್ದಾರೆ.ಆದರೆ ಅವರನ್ನು ವಾಪಸು ಕರೆತರಲು ಸರ್ಕಾರ ಯಾವುದೇ ಕ್ರಮ ಕೈಗೊಳ್ಳಲಿರುವದು ವಿಷಾದದ ಸಂಗತಿಯಾಗಿದೆ. ಅಲ್ಲಿ ವ್ಯಾಸಂಗ ಮಾಡುವ ಅಮೆರಿಕ, ಬ್ರಿಟನ್, ಫ್ರಾನ್ಸ್, ನೆದರ್ಲೆಂಡ್ ಮುಂತಾದ ದೇಶಗಳ ಸಾವಿರಾರು ವಿದ್ಯಾರ್ಥಿಗಳನ್ನು ಆ ದೇಶಗಳು ಸರಕಾರಗಳುಅಪಾಯದ ಸುಳಿವು ಸಿಕ್ಕು ಜನವರಿ 24 ರಂದೇ ವಾಪಸು ಕರೆಸಿಕೊಂಡವು.ಆದರೆ ಭಾರತ ಸರ್ಕಾರ ಸಕಾಲದಲ್ಲಿ ಕ್ರಮ ಕೈಗೊಳ್ಳಲಿಲ್ಲ.ಸರಕಾರಿ ವಿಮಾನ ಸಂಸ್ಥೆಯನ್ನು ಈಗಾಗಲೇ ಖಾಸಗಿ ಯವರಿಗೆ ಮಾರಾಟ ಮಾಡಿರುವದರಿಂದ ಪರಿಸ್ಥಿತಿ ಇನ್ನಷ್ಟು ಬಿಗಡಾಯಿಸಿದೆ.ಯುದ್ಧ ನಡೆದಿರುವದು ಗೊತ್ತಿದ್ದರೂ ಉಕ್ರೇನ್ ನಿಂದ ಭಾರತದ ವಿಮಾನ ಪ್ರಯಾಣ ದರವನ್ನು ಒಮ್ಮಿಂದೊಮ್ಮೆಲೇ ಒಂದೂವರೆ ಲಕ್ಷ ಕ್ಕಿಂತ ಜಾಸ್ತಿ ಮಾಡಲಾಗಿದೆ.ಇದಲ್ಲದೇ ನಿರಂತರ ಬಾಂಬ್ ದಾಳಿ .ಹೀಗಾಗಿ ನಮ್ಮ ವಿದ್ಯಾರ್ಥಿಗಳು ಜೀವ ಕೈಯಲ್ಲಿ ಹಿಡಿದುಕೊಂಡು ಅಲ್ಲಿ ಕಾಲ ನೂಕುತ್ತಿದ್ದಾರೆ.

ಉಕ್ರೇನ್ ವಿದ್ಯಮಾನಗಳಿಂದ ಭಾರತದ ನಾವು ಪಾಠ ಕಲಿಯಬೇಕಾಗಿದೆ.ವಿಭಿನ್ನ ಭಾಷೆ.ಸಂಸ್ಕೃತಿಗಳ ಜನರನ್ನು ,ಪ್ರದೇಶಗಳನ್ನು ಕೂಡಿಸಿ ಲೆನಿನ್ ಸೋವಿಯತ್ ಒಕ್ಕೂಟ ರಚಿಸಿದರು. ಆದರೆ ಅಲ್ಲಿ ಸಮಾಜವಾದಿ ವ್ಯವಸ್ಥೆ ಕುಸಿತದ ನಂತರ ಪುತೀನ್ ರಂಥವರು ಅಧಿಕಾರಕ್ಕೆ ಬಂದರು.ರಷ್ಯದ ಅಂಧ ರಾಷ್ಟ್ರೀಯ ವಾದದ ದುರಭಿಮಾನಿಗಳಾದ ಇವರು ಉಕ್ರೇನ್ ನಂಥ ದೇಶಗಳ ಆಸ್ಮಿತೆಯನ್ನು ನಾಶ ಮಾಡಲು ಹೊರಟರು.ಹೀಗಾಗಿ ಉಕ್ರೇನ್ ತಿರುಗಿ ಬಿತ್ತು.ನಮ್ಮದು ಕೂಡ ಒಕ್ಕೂಟ ವ್ಯವಸ್ಥೆ ."ಒಂದೇ ಧರ್ಮ, ಒಂದೇ ಭಾಷೆ,ಒಂದೇ ಸಂಸ್ಕೃತಿ ಹೆಸರಿನಲ್ಲಿ ವಿಭಿನ್ನ ರಾಜ್ಯಗಳ ಆಸ್ಮಿತೆಯನ್ನು ಹಾಳು ಮಾಡುವ ತಪ್ಪನ್ನು ಮಾಡಬಾರದು.

ಜಗತ್ತಿನಲ್ಲಿ ನೈಸರ್ಗಿಕ ವಿಕೋಪಕ್ಕಿಂತ ಹೆಚ್ಚು ಜನ ಸತ್ತಿದ್ದು ಯುದ್ಧ ಮತ್ತು ಪರಸ್ಪರ ಹೊಡೆದಾಟದಿಂದ .ಸಂಪತ್ತಿನ ಸಂಗ್ರಹದ ಬಂಡವಾಳಶಾಹಿ ದುರಾಸೆ ,ಮತ್ತು ಲಾಭಖೋರ ಮಾರುಕಟ್ಟೆಯ ವಿಸ್ತರಣಾವಾದ ಯುದ್ಧ ಮತ್ತು ಅಶಾಂತಿ ಗೆ ಕಾರಣ.ಎಂಬತ್ತರ ದಶಕದ ಕೊನೆಯ ವರೆಗೆ ವಿಶ್ವದಾದ್ಯಂತ ಪ್ರಬಲವಾಗಿದ್ದ ಶಾಂತಿ ಆಂದೋಲನವೂ ಈಗ ದುರ್ಬಲವಾಗಿದೆ.ಇಂಥ ಸನ್ನಿವೇಶದಲ್ಲಿ ಉಕ್ರೇನ್ ಮತ್ತು ರಷ್ಯದ ನಡುವಿನ ಯುದ್ಧ ಜಾಗತಿಕ ಯುದ್ದವಾಗದಂತೆ,ಮೂರನೇ ಮಹಾಯುದ್ಧವಾಗದಂತೆ ಎಚ್ಚರಿಕೆ ವಹಿಸುವದು ಅಗತ್ಯವಾಗಿದೆ.

ರಷ್ಯಾದ ಸರ್ವಾಧಿಕಾರಿ ಪುತೀನ್ ನಡೆಸಿದ ದಾಳಿ ಯನ್ನು ಸಮರ್ಥಿಸಲು ಸಾಧ್ಯ ವೇ ಇಲ್ಲ.ಈ ದುರಾಕ್ರಮಣದ ಪರಿಣಾಮವಾಗಿ ಉಕ್ರೇನ್ ನ ಸುಮಾರು ಐವತ್ತು ಸಾವಿರ ಜನ ದೇಶ ತೊರೆದು ಪೋಲಂಡ್, ರೊಮೇನಿಯಾ ,ಸ್ಲೋವಾಕಿಯಾ ಮುಂತಾದ ದೇಶಗಳಿಗೆ ಪಲಾಯನ ಮಾಡಿದ್ದಾರೆ. ಮನುಕುಲದ ಉಳಿವಿಗಾಗಿ ತಕ್ಷಣ ಈ ಯುದ್ಧ ನಿಲ್ಲಬೇಕಾಗಿದೆ.

ಉಕ್ರೇನ್ ನ ಪ್ರಕ್ಷುಬ್ಧ ಪರಿಸ್ಥಿತಿಯನ್ನು ತಿಳಿಗೊಳಿಸಲು ರಷ್ಯಾ ತುರ್ತಾಗಿ ದಾಳಿಯನ್ನು ನಿಲ್ಲಿಸಬೇಕು. ಅದಕ್ಕಿಂತ ಮೊದಲು ರಷ್ಯದ ಭದ್ರತೆಗೆ ಗಂಡಾಂತರಕಾರಿಯಾದ ನ್ಯಾಟೋ ಪಡೆಗಳು ಆ ಪ್ರದೇಶದಿಂದ ತೊಲಗಬೇಕು.

ಯುದ್ಧ ಜನರ ಆಯ್ಕೆ ಯಲ್ಲ.ಪುತೀನ ದುಡುಕಿನ ತೀರ್ಮಾನವನ್ನು ವಿರೋಧಿಸಿ ರಷ್ಯದ ಜನಸಾಮಾನ್ಯರು ಪ್ರತಿಭಟನೆ ನಡೆಸಿದ್ದಾರೆ.ಆದರೆ ಶಸ್ತ್ರಾಸ್ತ್ರ ಉತ್ಪಾದಕರಿಗೆ,ಮಾರುಕಟ್ಟೆ ವಿಸ್ತರಿಸುವ ದಗಾಕೋರರಿಗೆ ಯುದ್ಧ ಬೇಕು.

ಯುದ್ಧ ಮುಗಿದ ನಂತರ ಪುತೀನ್,ನ್ಯಾಟೋ ಸೂತ್ರ ಧಾರರು ಖುಷಿಯಿಂದ ಇರುತ್ತಾರೆ.ಆದರೆ ಮನೆಯನ್ನು ನಡೆಸುವ ಅಪ್ಪನನ್ನು ಕಳೆದುಕೊಂಡ ಮಕ್ಕಳ ಆಕ್ರಂದನ,ಪತಿಯನ್ನು ಕಳೆದುಕೊಂಡ ಹೆಣ್ಣು ಮಕ್ಕಳ ಸಂಕಟ,ಮಕ್ಕಳ ನ್ನು ಕಳೆದುಕೊಂಡ ತಂದೆ,ತಾಯಂದಿರ ಶೋಕಗಳನ್ನು ಭರಿಸುವ ದು ಯಾರಿಂದಲೂ ಸಾಧ್ಯವಿಲ್ಲ.

ಈ ಹಿಂದೆ ಹುಬ್ಬಳ್ಳಿಯಲ್ಲಿ ನಡೆದ ರಾಷ್ಟ್ರೀಯ ಕಾರ್ಯಕಾರಣಿ ಸಭೆಯಲ್ಲಿ ಮುಂದಿನ ಚುನಾವಣೆ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಅವರ ನೇತೃತ್ವದಲ್ಲಿ ನಡೆಯುತ್ತದೆ ಎಂದಾಗ ಬಿಎಸ್‌ವೈ ಮುಗಳ್ನಕ್ಕು ಸುಮ್ಮನಾಗಿದ್ದರು..ಮೌನವಾಗಿಯೇ ರಾಜಕೀಯ ಲೆಕ್ಕಚಾರಗಳನ್ನು ಹಾಕುತ್ತಿದ್ದರು. ಆದರೆ ಈಗ ಚುನಾವಣೆ ಸಮೀಪವಾಗುತ್ತಿದೆ ಇಂತ ಹೊತ್ತಿನಲ್ಲಿ ಪುತ್ರ ವಿಜಯೇಂದ್ರ ಭವಿಷ್ಯ ಮುಖ್ಯ ಈಗಾಗಿ ಒಂದು ಪಕ್ಷವನ್ನು ಅಧಿಕಾರಕ್ಕೆ ತರುವ ಮೂಲಕ ವಿಜಯೇಂದ್ರಗೆ ಭವಿಷ್ಯ ಸೃಷ್ಟಿಯಾಗಬೇಕು  ಹಾಗಾಗಿ ಯಡಿಯೂರಪ್ಪ ಇಂತ ಮತುಗಳನ್ನಾಡುತ್ತಿದ್ದಾರೆ ಆದರೆ ಪಕ್ಷಕ್ಕಾಗಿ ರಾಜ್ಯಾದ್ಯಂತ ಪ್ರವಾಸ ಮಾಡುವ ಮುನ್ನ ಬಿಎಸ್‌ವೈ ವಿಜಯೇಂದ್ರ ಪಾತ್ರ ಏನು ಎನ್ನುವುದು ಸ್ಪಷ್ಟವಾಗಬೇಕಿದೆ ಆ ಸ್ಪಷ್ಟತೆ ವರಿಷ್ಠರಿಂದ ಸಿಗುತ್ತದೆಯೇ ಎನ್ನುವ ಪ್ರಶ್ನೆ ಇದೆ ಅದಕ್ಕೆ ಹೇಗೆ ಉತ್ತರ ಸಿಗುತ್ತದೆ ಎನ್ನುವುದರ ಮೇಲೆ ಯಡಿಯೂರಪ್ಪ ಮುಂದಿನ ಪ್ರವಾಸ ನಿಂತಿದೆ.

# ಬಿಎಸ್‌ವೈ ಸಂದೇಶ ರವಾನೆಯಾಗಿದ್ದು ಯಾರಿಗೆ?



● ತುರುವನೂರು ಮಂಜುನಾಥ

ಮೊನ್ನೆ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಜನ್ಮದಿನದ ಪ್ರಯುಕ್ತ ಹಲವಾರು ಬಿಜೆಪಿ ನಾಯಕರು ಭೇಟಿ ಮಾಡಿ ಶುಭಕೋರಿದರು ಈ ವೇಳೆ ಮುಂದಿನ ಚುನಾವಣೆಯಲ್ಲಿ ಪಕ್ಷವನ್ನು ಅಧಿಕಾರಕ್ಕೆ ತರಲು ರಾಜ್ಯಾದ್ಯಂತ ಪ್ರವಾಸ ಮಾಡುವುದಾಗಿ ಹೇಳಿದರು. ಈ ಹೇಳಿಕೆ ತಮ್ಮದೇ ಪಕ್ಷದ ಹೈಕಮಾಂಡ್‌ಗೆ ಕಳಿಸಿದ ಸಂದೇಶ. ನಾನಿನ್ನು ಗಟ್ಟಿಯಾಗಿದ್ದೇನೆ ಈ ರಾಜ್ಯದಲ್ಲಿ ನನ್ನ ಹೊರೆತು ಪಡಿಸಿ ಬೇರೆ ಯಾರಿಂದಲೂ ಬಿಜೆಪಿ ಅಧಿಕಾರಕ್ಕೆ ಬರಲು ಸಾಧ್ಯವಿಲ್ಲ ಹಾಗಾಗಿಯೇ ಹಲವಾರು ನಾಯಕರು ನನ್ನ ಮನೆಗೆ ಬಂದು ಶುಭಾಷಯ ಕೋರಿದ್ದಾರೆ ಇದು ನನ್ನ ತಾಕತ್ತು ನನ್ನ ಮಾಸ್ ಲೀಡರ್‌ನ ಕ್ಯಾಪಾಸಿಟಿ ಎನ್ನುವ ಸಂದೇಶವನ್ನು ರವಾನಿಸಿದ್ದಾರೆ.

ಬಿಎಸ್‌ವೈ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಿದ ತಕ್ಷಣ ಅವರು ತರೆಮರೆಗೆ ಸರಿಯುತ್ತಾರೆ ಅವರ ಯುಗ ಮುಗಿಯುತು ಎನ್ನುವ ಮಾತುಗಳನ್ನು ಕೆಲವರು ಆಡಿದರು . ಬಿಜೆಪಿ ಹೈಕಮಾಂಡ್ ನೀವಿನ್ನು ವಿಶ್ರಾಂತಿ ತಗೆದುಕೊಳ್ಳಿ ಎನ್ನುವ ಅರ್ಥದಲ್ಲಿ ಮಾತನಾಡಿದರು ಆದರೆ ಕೆಲವು ದಿನಗಳ ಕಾಲ ಮೌನವಾಗಿಯೇ ಇದ್ದ ಬಿಎಸ್‌ವೈ ಈಗ ಮತ್ತೇ ಸಿಡಿದೆದಿದ್ದಾರೆ ಕಳೆದ ಸ್ಥಳೀಯ  ಚುನಾವಣೆಗಳು, ಉಪ ಚುನಾವಣೆಗಳಲ್ಲಿ ಬಿಜೆಪಿ ಅಂತಹ ಗೆಲವು ಸಾಧಿಸಲಿಲ್ಲಿ .ಕಾರಣ ಅಲ್ಲಿ ಬಿಎಸ್‌ವೈ ಪ್ರಚಾರ ಇರಲಿಲ್ಲ ಅವರ ಪಾತ್ರವೂಇರಲಿಲ್ಲ ಹಾಗಾಗಿಯೇ ಆ ಎಲ್ಲಾ ಉಪ ಚುನಾವಣೆ ಮತ್ತು ಸ್ಥಳೀಯ ಚುನಾವಣೆಗಳಲ್ಲಿ ಬಿಜೆಪಿ ಮಕಾಡೆ ಮಲಗಿತ್ತು ಇದನ್ನು ಸಂತೋಷದಿಂದಲೇ ಸ್ವೀಕರಿಸಿದ್ದ ಅವರು ಹೈಕಮಾಂಡ್‌ಗೆ ಮತ್ತೊಂದು ಮೆಸೇಜ್ ಕೂಡ ಹೋಗಿತ್ತು ಅದು ಯಡಿಯೂರಪ್ಪ ಇಲ್ಲದ ಚುನಾವಣೆಗಳು ಗೆಲುವು ಸಾಧ್ಯವಿಲ್ಲ ಎನ್ನುವುದು.

ಹೌದು ಬಿಎಸ್‌ವೈ ಪಕ್ಷವನ್ನು ಅಧಿಕಾರಕ್ಕೆ ತರಲು ನಡೆಸಿದ ಪ್ರಯತ್ನಗಳು ಹೋರಾಟಗಳು ಅಷ್ಟಿಷ್ಟಲ್ಲ ಬಿಜೆಪಿ ಈ ಮಟ್ಟಕ್ಕೆ ಬರಬೇಕು ಎಂದರೆ ಅದರಲ್ಲಿ ಮುಕ್ಕಾಲು ಪಾಲು ಅವರ ಪಾತ್ರವೂ ಇದೆ ಅಷ್ಟ್ ಸುಲಭವಾಗಿ ಬಿಎಸ್‌ವೈಸೋಲನ್ನು ಒಪ್ಪಿಕೊಳ್ಳಲಾರರು. ಹಾಗಾಗಿಯೇ  ಮೊನ್ನೆ ತಮ್ಮ ಜನ್ಮದಿನ ಸಂದರ್ಭದಲ್ಲಿ ಹೈಕಮಾಂಡ್‌ಗೆ ಎರಡು ಸಂದೇಶಗಳನ್ನು ರವಾನಿಸಿದ್ದಾರೆ.

ಒಂದು ನಾನಿಲ್ಲದ ಬಿಜೆಪಿ ಅಧಿಕಾರಕ್ಕೆ ಬರುವಷ್ಟರ ಸ್ಥಾನಗಳು ಸಾಧ್ಯವಿಲ್ಲ ಎನ್ನುವುದು ಒಂದು ವೇಳೆ ನನ್ನನ್ನು ತಿರಸ್ಕರಿಸಿದರೆ ನಾನು ಮತ್ತೊಮ್ಮೆ ಪ್ರಾದೇಶಿಕ ಪಕ್ಷವನ್ನು ಕಟ್ಟಬಲ್ಲೇ ಎನ್ನುವ ಸಂದೇಶಗಳು ರವಾನಿಯಾಗಿವೆ ಸಹಜವಾಗಿಯೇ ಬಿಜೆಪಿಗೆ ಈಗ ಬಿಎಸ್‌ವೈ ಅನಿವಾರ್ಯವಾಗಿದ್ದಾರೆ ಅಷ್ಟರ ಮಟ್ಟಿಗೆ ಅವರು ತನ್ನ ತಾಕತ್ತನ್ನು ಪ್ರದರ್ಶಿಸಿದ್ದಾರೆ.

ಯಡಿಯೂರಪ್ಪ ಅವರದ್ದು ಮಾಗಿದ ರಾಜಕಾಕಾರಣ ದಶಕಗಳ ಹಿಂದೆ ಸಿಡಿದೇಳುತ್ತಿದ್ದ ಅವರು ಈಗ ಹುಡುಕಿದರೂ ಸಿಗುವುದಿಲ್ಲ ಆದತೆ ಮಾತು ಮಾತಿಗೂ ಮುಂದಿನ ವಿಧಾನಸಭಾ ಚುನಾವಣೆಗೆ ಪಕ್ಷ ಬಲಗೊಳೀಸಲು ಪ್ರವಾಸ ಮಾಡುತ್ತೇನೆ ಎನ್ನುತ್ತಿದ್ದಾರೆ. ಬಿಜೆಪಿಯನ್ನು ಮತ್ತೇ ಅಧಿಕಾರಕ್ಕೆಕ ತರುತ್ತೇನೆ ಎನ್ನುತ್ತಿದ್ದಾರೆ ಆ ಮೂಲಕ ಬಿಎಸ್‌ವೈ ರಾಜಕೀಯದಾಟ ಮುಗಿದಲ್ಲ ಎನ್ನುವ ಎಂಬ ಸಂದೇಶಗಳನ್ನು ಮುಖಂಡರಿಗೆ ರವಾನಿಸುತ್ತಿಲೇ ಇದ್ದಾರೆ.

ಹಾಗೇ ನೋಡಿದರೆ ಯಡಿಯೂರಪ್ಪ ಮೊದಲಿನಂತೆ ವೀರಾವೇಶದ ಮಾತನಾಡುತ್ತಿಲ್ಲ ಮೌನದಲ್ಲಿಯೇ ರಾಜಕೀಯ ದಾಳ ಉರುಳಿಸುತ್ತಿರುವುದೇ ಪಕ್ಷದ ವರಿಷ್ಠರಿಗೂ ಒಳಗೊಳಗೆ ಅಳಕು ಇದ್ದಂತಿದೆ. ರಜಕೀಯದಲ್ಲಿ ಹೇಳುವುದಕ್ಕಿಂತ ಹೇಳದೇ ಇರುವುದಕ್ಕೇ ಹೆಚ್ಚು ಮಹತ್ವ ಇರುತ್ತದೆ ಎಂಬುದನ್ನು ಬಿಎಸ್‌ವೈ ಚನ್ನಾಗಿ ಬಲ್ಲರು ಹೀಗಾಗಿಯೇ ಅವರ ಅಧ್ಯಾಯ ರಾಜ್ಯ ರಾಜಕಾರಣದಲ್ಲಿ ಇನ್ನೂ ಇದೇ ಎನ್ನುವುದು ಅವರನ್ನು ಚನ್ನಾಗಿ ಬಲ್ಲವರಿಗೆ ಅರ್ಥವಾಗದೇ ಇರಲಾರದು.

## ಪದಚ್ಯುತಿ ಬಳಿಕೆ ಏಕಾಂಗಿ ಪ್ರವಾಸಕ್ಕೆ ಅಡ್ಡಿ

ಕಳೆದ ಜುಲೈನಲ್ಲಿ ಅವರ ಪದಚ್ಯುತಿಯ ಬಳಿಕ ಕೂಡ ಯಡಿಯೂರಪ್ಪ ರಾಜ್ಯಪ್ರವಾಸ ಮಾಡುವುದಾಗಿಯೂ ಮತ್ತು ರಾಜ್ಯದಲ್ಲಿ ಮತ್ತೊಮ್ಮೆ ಪಕ್ಷವನ್ನು ಅಧಿಕಾರಕ್ಕೆ ತರುವುದಾಗಿಯೂ ಹೇಳಿದ್ದರು. ಅಷ್ಟೇ ಅಲ್ಲ; ಸುಮಾರು ಮೂರು ತಿಂಗಳ ಕಾಲ ನಿರಂತರವಾಗಿ ರಾಜ್ಯ ಪ್ರವಾಸದ ಕುರಿತು ಪದೇಪದೆ ಹೇಳಿಕೆ ನೀಡುತ್ತಲೇ ಇದ್ದರು. ಮತ್ತೊಂದು ಕಡೆ ಯಡಿಯೂರಪ್ಪ ರಾಜ್ಯಪ್ರವಾಸಕ್ಕೆ ತಯಾರಿಗಳು ನಡೆಯುತ್ತಿದ್ದವು ಕೂಡ.

ಆದರೆ, ಅವರು ಏಕಾಂಗಿಯಾಗಿ ರಾಜ್ಯಪ್ರವಾಸ ಮಾಡುವುದಕ್ಕೆ ಬಿಜೆಪಿ ವರಿಷ್ಠರು ಅಡ್ಡಗಾಲು ಹಾಕಿದ್ದರು. ಪ್ರವಾಸ ಮಾಡುವುದೇ ಆದರೆ ಪಕ್ಷದ ರಾಜ್ಯ ನಾಯಕರೊಂದಿಗೆ ಸಮಾಲೋಚಿಸಿ, ಎಲ್ಲರನ್ನೂ ವಿಶ್ವಾಸಕ್ಕೆ ಪಡೆದು ಪಕ್ಷದ ಅಧಿಕೃತ ಕಾರ್ಯಕ್ರಮವಾಗಿ ಮಾಡಲಿ ಎನ್ನುವ ಮೂಲಕ ಅವರು ರಾಜಕೀಯವಾಗಿ ಸಕ್ರಿಯವಾಗಿರುವುದು ಪಕ್ಷಕ್ಕೆ ಅಗತ್ಯವಿಲ್ಲ ಎಂಬ ಸಂದೇಶವನ್ನು ದೆಹಲಿಯ ವರಿಷ್ಠರು ರವಾನಿಸಿದ್ದರು. ವರಿಷ್ಠರು ತಮ್ಮ ಯೋಜನೆಗೆ ಹಸಿರು ನಿಶಾನೆ ತೋರಿಸುತ್ತಾರೆ ಎಂಬ ನಿರೀಕ್ಷೆಯಲ್ಲಿದ್ದ ಯಡಿಯೂರಪ್ಪ ಅವರಿಗೆ, ಅವರ ಆಪ್ತರ ಮೇಲೆ ಇಡಿ–ಐಟಿ ದಾಳಿಯ  ಮೂಲಕ ದೆಹಲಿಯ ವರಿಷ್ಠರು ಬೇರೆಯದೇ ಸಂದೇಶ ರವಾನಿಸಿದ್ದರು. ಆ ಸಂದೇಶ ಬರುತ್ತಲೇ ತಮ್ಮ ರಾಜ್ಯಪ್ರವಾಸವನ್ನಷ್ಟೇ ಅಲ್ಲದೆ, ಪಕ್ಷದೊಂದಿಗಿನ ಒಡನಾಟವನ್ನೂ ಮೊಟಕುಗೊಳಿಸಿ ಕಳೆದ ಮೂರ್ನಾಲ್ಕು ತಿಂಗಳುಗಳಿಂದ ಯಡಿಯೂರಪ್ಪ ತೆರೆಮರೆಗೆ ಸರಿದಿದ್ದರು. ಅಷ್ಟೇ ಅಲ್ಲ, ಅವರ ಪುತ್ರ ಬಿ ವೈ ವಿಜಯೇಂದ್ರ  ಕೂಡ ಪಕ್ಷದೊಳಗೆ ಸಕ್ರಿಯವಾಗಿರಲಿಲ್ಲ.

● 6ನೇ ಪುಟಕ್ಕೆ...

# ಭ್ರಷ್ಟರ ಕೂಪ ಬಿಬಿಎಂಪಿಯಲ್ಲಿ ಉಂಡವನೇ ಜಾಣ

● ಲಿಂಗರಾಜು ಡಿ. ನೊಣವಿನಕೆರೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರಾಜ್ಯ ರಾಜಧಾನಿಯ ಆಡಳಿತ ಸೌಧ. ಬಿಬಿಎಂಪಿ ಮೇಲ್ನೋಟಕ್ಕೆ ಸ್ಥಳೀಯ ಸಂಸ್ಥೆಯಂತೆ ಕಂಡರೂ ಒಂದರ್ಥದಲ್ಲಿ ಇದು 'ತಿಮ್ಮಪ್ಪನ ಹುಂಡಿ'ಯೇ ಸರಿ. ಈ ಹುಂಡಿಗೆ ಬೀಳುವ ಹಣದ ಲೆಕ್ಕ ಈವರೆಗೂ ಸಿಕ್ಕಿಲ್ಲ, ಈ ಹುಂಡಿ ಹಣ ಹಾಕುವವರ ಗುರುತೂ ಕೂಡಾ ದೊರೆತಿಲ್ಲ. ಹಾಗಾಗಿ "ತಿಮ್ಮಪ್ಪನ ಹುಂಡಿ" ಲೂಟಿಗೆ ದಾಂಗುಡಿ ಇಡುವವರ ಲೆಕ್ಕವೇ ಇಲ್ಲ.ಬಿಬಿಎಂಪಿ ಕಳೆದ ಮೂರ್ನಾಲ್ಕು ದಿನಗಳಲ್ಲಿ ಭಾರೀ ಸುದ್ದಿಯಲ್ಲಿದೆ. ಭ್ರಷ್ಟರ ಹೆಡೆಮುಡಿ ಕಟ್ಟಲು ಟೊಂಕಕಟ್ಟಿ ನಿಂತಿರುವ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಕಳೆದ ಶುಕ್ರವಾರ ತನ್ನ 200ಕ್ಕೂ ಹೆಚ್ಚು ಅಧಿಕಾರಿ, ಸಿಬ್ಬಂದಿಗಳೊಂದಿಗೆ ಬಿಬಿಎಂಪಿ ಕೇಂದ್ರ ಕಚೇರಿ, ವಲಯ ಕಚೇರಿಗಳು ಸೇರಿದಂತೆ ಏಕಕಾಲಕ್ಕೆ 27 ಕಡೆಗಳಲ್ಲಿ ದಾಳಿ ನಡೆಸಿ ಕೋಟ್ಯಂತರ ರೂ.ಗಳ ಹಗರಣಗಳನ್ನು ಬಯಲಿಗೆಳೆದಿದ್ದಾರೆ. ಒಂದು ಅಂದಾಜಿನ ಪ್ರಕಾರ ಸುಮಾರು 500 ಕೋಟಿಗೂ ಹೆಚ್ಚಿನ ಪ್ರಮಾಣದಲ್ಲಿ ಭ್ರಷ್ಟಾಚಾರ ನಡೆಸಿರುವುದನ್ನು ಎಸಿಬಿ ಪತ್ತೆ ಹೆಚ್ಚಿದೆ.

ಬಿಬಿಎಂಪಿಯಲ್ಲಿ ಹೆಚ್ಚು ಆದಾಯ ಅಂದರೆ ಎಗ್ಗಿಲ್ಲದೆ ನುಂಗುವ ಇಲಾಖೆಗಳೆಂದರೆ ಅದು ನಗರ ಯೋಜನೆ ಅರ್ಥಾತ್ "ಟೌನ್‌ಪ್ಲಾನಿಂಗ್", ಆರೋಗ್ಯ ಇಲಾಖೆ, ಕಂದಾಯ ಇಲಾಖೆ, ಮೇಜರ್ ರೋಡ್ಸ್, ಟಿಡಿಆರ್ ಹೀಗೆ ಅನೇಕಾನೇಕ ಇಲಾಖೆಗಳಲ್ಲಿ ದಿನನಿತ್ಯ ನಡೆಯುವ ಭ್ರಷ್ಟಾಚಾರದ ಬಗ್ಗೆ ಯಾರೂ ತಲೆಕೆಡಿಸಿಕೊಂಡಿಲ್ಲ. ಒಮ್ಮೆಯಾದರೂ ಬಿಬಿಎಂಪಿ ಸದಸ್ಯನಾದರೆ ಸಾಕು 'ಬಾಳು ಬೆಳಕಾಯಿತು' ಎಂದೇ ಅರ್ಥ. ಅದಕ್ಕಾಗಿ ಚುನಾವಣೆಯಿಂದ ಚುನಾವಣೆಗೂ ಬಿಬಿಎಂಪಿ ಪ್ರವೇಶಿಸುವವರೆಲ್ಲರೂ'ಕೋಟಿ ಕುಳಗಳೇ' ಆಗಿರುತ್ತಾರೆ. ಬೆಂಗಳೂರು ಮಹಾನಗರವನ್ನು ಪ್ರತಿನಿಧಿಸುವ ಶಾಸಕರುಗಳಿಗಂತೂ ಬಿಬಿಎಂಪಿ 'ಹಲ್ವಾ' ಇದ್ದಂತೆ. ಬೇಕು ಬೇಕೆಂದಾಗಲೆಲ್ಲ ಯೋಜನೆಗಳ ಹೆಸರಿನಲ್ಲಿ 'ಹಲ್ವಾ' ತಯಾರಿಸಿಕೊಂಡು ತಿನ್ನುತ್ತಲೇ ಬಂದಿದ್ದಾರೆ. ಹೀಗಾಗಿ ಈ ಶಾಸಕರುಗಳಿಗೆ ಬಿಬಿಎಂಪಿ ಚುನಾವಣೆಯ ಉಸಬಾರಿಯೇ ಇದ್ದಂತಿಲ್ಲ.

ಮೊನ್ನೆ ಅಂದರೆ ಫೆ. 25ರಂದು ಬಿಬಿಎಂಪಿಗೆ ಭ್ರಷ್ಟಾಚಾರ ನಿಗ್ರಹ ದಳದ ತಂಡವು ದಾಳಿ ನಡೆಸಿತ್ತು. ಅಪಾರ ಪ್ರಮಾಣದಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ ಎಂಬ ಸಾರ್ವಜನಿಕರ, ಸಂಘ-ಸಂಸ್ಥೆಗಳ ದೂರಿನ ಹಿನ್ನೆಲೆಯಲ್ಲಿ ಈ ದಾಳಿ ನಡೆದಿತ್ತು. ಯಾರಿಗೂ ಈ ಬೆಳವಣಿಗೆ ಗೊತ್ತಿರಲಿಲ್ಲ. ಎಲ್ಲರೂ ಶುಕ್ರವಾರದ "ಕಮಾಯಿ"ಗೆ ಬೆಳಿಗ್ಗೆಯೇ ಆಫೀಸ್‌ಗೆ ಬಂದಿದ್ದರು. ಬಂದವರಿಗೆ ಈ ಬೆಳವಣಿಗೆ ದೊಡ್ಡ ಶಾಕ್ ಆಗಿತ್ತು. ಯಾರೊಬ್ಬರೂ ಮಿಸುಕಾಡದ ರೀತಿಯಲ್ಲಿ ಎಸಿಬಿ ಅಧಿಕಾರಿಗಳು 'ಲಾಕ್' ಹಾಕಿಕೊಂಡರು. ತಡವಾಗಿ ಬರುವ ಆಸಾಮಿಗಳಿಗೆ ಮಾಧ್ಯಮಗಳ ಮೂಲಕ ಬಿತ್ತರಗೊಂಡ ಸುದ್ದಿಯ ಹಿನ್ನೆಲೆಯಲ್ಲಿ ಮನೆಗೋ ಅಥವಾ ಇನ್ನೆಲ್ಲಿಗೋ ದೌಡಾಯಿಸಿದರು. ಆದರೂ ಎಸಿಬಿ ಅಧಿಕಾರಿಗಳು ಫೋನ್ ಮಾಡಿ ಕಡ್ಡಾಯ ಹಾಜರಾತಿಗೆ ಸೂಚನೆ ನೀಡಿದ್ದರಿಂದ ಮಧ್ಯಾಹ್ನದ ವೇಳೆಗೆ ಬಹುತೇಕ ಅಧಿಕಾರಿಗಳು ಹಾಜರಾಗಿ ತಮ್ಮ ಕಸ್ಟಡಿಯಲ್ಲಿದ್ದ ಕಡತಗಳನ್ನು ಒಂದೊಂದಾಗಿ ಕೊಟ್ಟು ತನಿಖೆಗೆ ಸಹಕರಿಸಿದ್ದಾರೆ.

ಎಸಿಬಿ ಅಧಿಕಾರಿಗಳು ಇತ್ತೀಚೆಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ(ಬಿಡಿಎ) ಕಚೇರಿ ಮೇಲೂ ದಾಳಿ ನಡೆಸಿ ಭ್ರಷ್ಟಾಚಾರದ ಕರ್ಮಕಾಂಡವನ್ನು ಬಯಲಿಗೆಳೆದಿದ್ದರು. ಬಿಬಿಎಂಪಿ ಮೇಲೆ ಲೋಕಾಯುಕ್ತ ದಾಳಿ ಮಾಡಿರುವ ನಿದರ್ಶನ ಇಲ್ಲವೇ ಇಲ್ಲ. ಇದ್ದರೂ ಕೂಡಾ ಕಾಟಾಚಾರದ ದಾಳಿ ಆಗಿತ್ತು. ಹೀಗಾಗಿ ಬಿಬಿಎಂಪಿಯ ಅಧಿಕಾರಿಗಳು ನಮ್ಮನ್ನು ಹಿಡಿಯಲು ಯಾರಿಗೆ ಧೈರ್ಯ ಇದೆ ಎಂದು 'ಉಂಡೂ ಉಂಡೂ ಹೆಗ್ಗಣ' ಗಳಾಗಿದ್ದರು. ಎಸಿಬಿ ರಚನೆಯಾದಾಗಿನಿಂದ ಇದೇ ಮೊದಲ ಬಾರಿಗೆ ಬಿಬಿಎಂಪಿ ಮೇಲೆ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ದಾಳಿ ನಡೆದಿದೆ. ರಸ್ತೆ ಕಾಮಗಾರಿ, ಕಂದಾಯ, ಆರೋಗ್ಯ, ಜಾಹೀರಾತು, ಖಾತಾ ವಿಭಾಗ ಹೀಗೆ ಈ ಎಲ್ಲ ವಿಭಾಗಗಳಲ್ಲಿ ಸಂಜೆಯ ವೇಳೆಗೆ 'ಲಕ್ಷ್ಮೀಕಟಾಕ್ಷ' ಗ್ಯಾರಂಟಿ. ಈ ವಿಭಾಗಗಳಲ್ಲಿ ಕೆಲಸಗಳು ಆರಂಭ ಆಗುವುದೇ ಮಧ್ಯಾಹ್ನದ ನಂತರ. ಸಾರ್ವಜನಿಕರು ವಿರಳ ಆಗುತ್ತಿದ್ದಂತೆ ಇಲ್ಲಿ ಮಧ್ಯವರ್ತಿಗಳ ಆರ್ಭಟ ಆರಂಭವಾಗುತ್ತದೆ. ಜೊತೆಗೆ ಭ್ರಷ್ಟ ಅಧಿಕಾರಿಗಳ ರಕ್ಷಣೆಗೆಂದು ಒಂದಷ್ಟು ಜನ 'ಬೌನ್ಸರ್' ಮಾದರಿಯ ವ್ಯಕ್ತಿಗಳು ಅಲ್ಲಲ್ಲೇ ಸುತ್ತಾಡುತ್ತಿರುತ್ತಾರೆ. ಇನ್ನು ಬಿಲ್‌ಗಳ ನೆಪದಲ್ಲೋ ಅಥವಾ ತಮ್ಮ ಕೆಲಸದ ಅವಶ್ಯಕತೆಗೆಂದು ಕಂಟ್ರ್ಯಾಕ್ಟರ್‌ಗಳಂತೂ ಇಲ್ಲಿ ಇದ್ದೇ ಇರ್ತಾರೆ.

ಕೇಂದ್ರ ಕಚೇರಿ ಸೇರಿದಂತೆ ಬಿಬಿಎಂಪಿಯ ಎಲ್ಲ ವಲಯ ಕಚೇರಿಗಳಲ್ಲಿ ಹೆಚ್ಚು ಗಮನಸೆಳೆಯುತ್ತಿರುವುದುದು 'ಟೌನ್‌ಪ್ಲಾನಿಂಗ್' ವಿಭಾಗ. ಕೇಂದ್ರ ಕಚೇರಿಯಲ್ಲಿರುವ ಜಂಟಿ ನಿರ್ದೇಶಕರ ಹುದ್ದೆಗಾಗಿ ಹೊಡೆದಾಟವೇ ನಡೆದಿತ್ತು. ಆದರೂ ಈಗಿರುವ ಜಾಯಿಂಟ್ ಡೈರೆಕ್ಟರ್



ಮಂಜೇಶ್‌ರ ವಿರುದ್ಧ ದೊಡ್ಡ ಸಮೂಹವೇ ಕಾದು ಕುಳಿತಿದೆ. ಅಸ್ತ್ರ, ಶಸ್ತ್ರ, ಮಂತ್ರ, ತಂತ್ರಗಳೆಲ್ಲವನ್ನೂ ಈ ಅಧಿಕಾರಿ ವಿರುದ್ಧ ಪ್ರಯೋಗಿಸಿ ಯಶಸ್ವಿಯಾಗದ ಕೆಲ ಅತೃಪ್ತರು ಇದೀಗ 'ಎಸಿಬಿ ಪ್ರಯೋಗಾಸ್ತ್ರ' ಬಳಸಿದ್ದಾರೆ. ಪಾಲಿಕೆಯಲ್ಲಿ ಇವರೊಬ್ಬರೇ ಟಾರ್ಗೆಟ್ ಅಲ್ಲ. ಆರೋಗ್ಯ ಇಲಾಖೆಯ ಉನ್ನತಾಧಿಕಾರಿ ಸರ್ಫರಾಜ್ ಖಾನ್ ಆಗಿರಬಹುದು, ಟಿಡಿಆರ್ ವಿಭಾಗದ ಮುಖ್ಯಸ್ಥರಾಗಿರಬಹುದು, ಮೇಜರ್ ರೋಡ್ಸ್‌ನ ಮುಖ್ಯಸ್ಥ ಪ್ರಹ್ಲಾದ್ ಆಗಿರಬಹುದು ಎಲ್ಲರೂ "ಅಪ್ರಮಾಣಿಕರ' ಪಟ್ಟಿ 'ಸೆಲೆಬ್ರೆಟಿ' ಗಳಾಗಿದ್ದಾರೆ. ಇವುರುಗಳಿಲ್ಲದೆ ಪಾಲಿಕೆಯ ಆಡಳಿತವೇ ನಡೆಯದಂತ ವಾತಾವರಣಕ್ಕೆ ಸ್ವತಃ ಮುಖ್ಯ ಆಯುಕ್ತ ಗೌರವ್ ಗುಪ್ತ ಹಾಗೂ ಆಡಳಿತಾಧಿಕಾರಿ ರಾಕೇಶ್ ಸಿಂಗ್ ಸಾಕ್ಷಿಗಳಾಗಿದ್ದಾರೆ.

ಪಾಲಿಕೆಯಲ್ಲಿ ಚುನಾಯಿತ ಆಡಳಿತ ಕೊನೆಗೊಂಡು ಬರ್ರೋಬರ್ರಿ ಹದಿನೆಂಟು ತಿಂಗಳು ಸಮೀಪಿಸುತ್ತಿದೆ. ಚುನಾವಣೆ ಮಾಡುವ ಬದ್ಧತೆ ಸರ್ಕಾರಕ್ಕೂ ಇಲ್ಲ, ಬೆಂಗಳೂರು ನಗರವನ್ನು ಪ್ರತಿನಿಧಿಸುತ್ತಿರುವ 28 ಶಾಸಕರುಗಳಿಗೂ ಇಲ್ಲ. ಹೀಗಾಗಿ ಅಧಿಕಾರಿಗಳು 'ಆಡಿದ್ದೇ ಆಟ'ಎಂಬಂತಾಗಿದೆ ಬಿಬಿಎಂಪಿ ಆಡಳಿತ.

ಕಂದಾಯ ವಿಭಾಗದ ಭ್ರಷ್ಟಾಚಾರ ಇತರೆ ವಿಭಾಗಗಳಿಗಿಂತಲೂ ದೊಡ್ಡದೇ ಆಗಿದೆ. ಮನೆ, ವಾಣಿಜ್ಯ ಕಟ್ಟಡಗಳು ಹಾಗೂ ಅಪಾರ್ಟ್‌ಮೆಂಟ್‌ಗಳ ಮಾಲೀಕರುಗಳಿಂದ 'ಲಂಚ' ಪಡೆದು ತೆರಿಗೆ ನಿಗದಿಪಡಿಸುವ ಸಂದರ್ಭದಲ್ಲಿ ಮಾಲೀಕರುಗಳಿಗೆ ಅನುಕೂಲ ಮಾಡಿಕೊಟ್ಟಿರುವುದರಿಂದ ಕೋಟ್ಯಂತರ ರೂ.ಗಳ ತೆರಿಗೆಗೆ ಖೋತಾ ಆಗಿದೆ. ಇನ್ನು ಮಾಲಿಕತ್ವ ಇಲ್ಲದ ಖರಾಬು ಜಾಗಗಳನ್ನು ಖಾಸಗಿ ವ್ಯಕ್ತಿಗಳು, ಖಾಸಗಿ ಸಂಸ್ಥೆಗಳಿಗೆ ಖಾತೆ ಮಾಡಿಕೊಟ್ಟು ಲಕ್ಷಾಂತರ, ಕೋಟ್ಯಂತರ ರೂ.ಗಳನ್ನು ತಮ್ಮ ಜೇಬಿಗೆ ಇಳಿಸಿಕೊಂಡಿರುವವರಿಗೇನೂ ಕಮ್ಮಿ ಇಲ್ಲ.

ಬಿಬಿಎಂಪಿ ಎಂದರೆ ಅದೊಂದು 'ಲಕ್ಷ್ಮೀ' ನಿವಾಸ ಎಂದಂತೆ ಭಾವಿಸಿರುವ ಅಧಿಕಾರಿಗಳು 'ಡೆಪ್ಯುಟೇಷನ್' ಹೆಸರಿನಲ್ಲಿ ರಾಜಕಾರಣಿಗಳ ಕೃಪಾಕಟಾಕ್ಷದ ಮೂಲಕ 'ಎಂಟ್ರಿ' ತೆಗೆದುಕೊಂಡು ಆರಂಭದಿಂದಲೇ ಭ್ರಷ್ಟ ನಾಲಿಗೆಯನ್ನು ಚಾಚಿಕೊಂಡು ಹೋಗುವಷ್ಟರಲ್ಲಿ ಡೆಪ್ಯುಟೇಷನ್‌ಗೆ ಕೊಟ್ಟಿರುವ ಹಣದ ಹತ್ತು ಪಟ್ಟು ಸಂಪಾದಿಸಿಕೊಂಡೇ ಹೋಗುವ ಬದ್ಧ ಅಧಿಕಾರಿಗಳು ಇದ್ದಾರೆ. ಇಂತಹವರನ್ನು ಅದೆಷ್ಟು ಬೇಕಾದ್ರು ವರ್ಗಾಯಿಸಿದರೂ ರಾಜಕೀಯ ಅಥವಾ ದುಡ್ಡಿ ಪ್ರಭಾವಗಳನ್ನು ಬಳಸಿಕೊಂಡು ಎರಡೇ ತಿಂಗಳಲ್ಲಿ ತಮ್ಮ ಸ್ವಸ್ಥಾನಕ್ಕೆ ಬರುತ್ತಾರೆ. ಇಂತಹ ವ್ಯವಸ್ಥೆಗೆ ಸ್ವತಃ ಚೀಫ್ ಕಮೀಷನರ್ ಹಾಗೂ ಅಡ್ಮಿನಿಸ್ಟ್ರೇಟರ್ ರವರುಗಳೂ ಕೂಡಾ ಮೌನಕ್ಕೆ ಶರಣಾಗಿದ್ದಾರೆ. ಬಿಬಿಎಂಪಿ ಮೇಲೆ ಎಸಿಬಿ ದಾಳಿಯ ಬಗ್ಗೆ ಯಾವೊಬ್ಬ ಶಾಸಕನಿಗೂ ಚಿಂತೆ ಇದ್ದಂತೆ ಕಾಣುತ್ತಿಲ್ಲ. ದಾಳಿಯ ಸುಳಿವು ನೀಡಿ ಎಷ್ಟೋ ಅಧಿಕಾರಿಗಳನ್ನು ಶಾಸಕರುಗಳು ತಮ್ಮ ಮನೆಗಳಿಗೆ ಕರೆಸಿಕೊಂಡು ಆತಿಥ್ಯ ನೀಡಿರುವುದು ಗುಟ್ಟಾಗಿ ಉಳಿದಿಲ್ಲ. ಭ್ರಷ್ಟ ಅಧಿಕಾರಿಗಳನ್ನು ರಕ್ಷಿಸುವ ಜನಪ್ರತಿನಿಧಿಗಳು ಇರುವವರೆಗೂ ಭ್ರಷ್ಟರ ಕೂಪವಾಗಿರುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ 'ಉಣ್ಣು'ವ ಜಾಣರು ಹೆಚ್ಚುತ್ತಲೇ ಇರ್ತಾರೆ.

# ಬಿಎಸ್‌ವೈ ಸಂದೇಶ ರವಾನೆಯಾಗಿದ್ದು ಯಾರಿಗೆ?

● 5ನೇ ಪುಟದಿಂದ..

ಆ ಹಿನ್ನೆಲೆಯಲ್ಲಿ ಮುಂದಿನ ಚುನಾವಣೆಗೆ ಮುನ್ನ ಯಡಿಯೂರಪ್ಪ ತಮ್ಮ ಬೆಂಬಲಿಗರೊಂದಿಗೆ ಪಕ್ಷ ತೊರೆದು ಹೊಸ ಪ್ರಾದೇಶಿಕ ಪಕ್ಷ ಕಟ್ಟಲಿದ್ದಾರೆ. ಮುಖ್ಯಮಂತ್ರಿಯಾಗಿರುವಾಗಲೇ ಪಕ್ಷದ ಒಂದು ಬಣ ಆರ್ ಎಸ್ ಎಸ್ ಹಿನ್ನೆಲೆಯ ವರಿಷ್ಠ ನಾಯಕರೊಬ್ಬರ ಚಿತಾವಣೆಯಿಂದ ತಮ್ಮನ್ನು ಕೆಳಗಿಳಿಸಲು ನಿರಂತರ ಯತ್ನ ನಡೆಸುತ್ತಿರುವ ಹಿನ್ನೆಲೆಯಲ್ಲಿ ಆಗಲೇ ಪರ್ಯಾಯ ರಾಜಕೀಯ ವೇದಿಕೆ ಕಟ್ಟುವ ನಿಟ್ಟಿನಲ್ಲಿ ವಿಜಯೇಂದ್ರ ಮೂಲಕ ವೇದಿಕೆ ಸಜ್ಜುಗೊಳಿಸಿದ್ದರು. ಆದರೆ, ಇಡಿ ದಾಳಿ, ಐಟಿ ದಾಳಿ ಮತ್ತು ಪಿಎ ಸಂತೋಷ್ ಆತ್ಮಹತ್ಯೆ ಯತ್ನ ಪ್ರಕರಣದಂತಹ ಅಸ್ತ್ರಗಳನ್ನು ಪ್ರಯೋಗಿಸಿ ಬಿಜೆಪಿ ವರಿಷ್ಠರು ಯಡಿಯೂರಪ್ಪ ಮತ್ತು ವಿಜಯೇಂದ್ರ ವೇಗಕ್ಕೆ ಕಡಿವಾಣ ಹಾಕಿದ್ದರು.

ಆ ಹಿನ್ನೆಲೆಯಲ್ಲಿಯೇ ವರಿಷ್ಠರ ತಂತ್ರಗಳಿಗೆ ಮಣಿದ ಯಡಿಯೂರಪ್ಪ ತೆರೆಮರೆಗೆ ಸರಿದಿದ್ದರು ಮತ್ತು ಪ್ರಾದೇಶಿಕ ಪಕ್ಷ ಕಟ್ಟುವ ನಿಟ್ಟಿನಲ್ಲಿ ಕಾದುನೋಡುವಂತೆ ತಮ್ಮ ಪುತ್ರ ವಿಜಯೇಂದ್ರ ಅವರಿಗೂ ಸೂಚಿಸಿದ್ದರು. ಆ ಹಿನ್ನೆಲೆಯಲ್ಲಿ ಕಳೆದ ತಿಂಗಳು ಸಂಪುಟ ಪುನರ್ ರಚನೆಯ ಪ್ರಸ್ತಾಪದ ಮೂಲಕ ಯಡಿಯೂರಪ್ಪ ಬೆಂಬಲಿಗ ಶಾಸಕರು ಬಿಜೆಪಿ ವರಿಷ್ಠರ ಪ್ರತಿಕ್ರಿಯೆ ನೋಡುವ ಪ್ರಯತ್ನ ಮಾಡಿದ್ದರು. ಆ ವೇಳೆ ದೆಹಲಿಗೆ ಭೇಟಿ ನೀಡಿದ್ದ ಬೆಂಬಲಿಗರಿಗೆ ಉತ್ತರಪ್ರದೇಶ ಸೇರಿದಂತೆ ಐದು ರಾಜ್ಯಗಳ ಚುನಾವಣೆ ಮುಗಿಯುವವರೆಗೆ ಕಾಯುವಂತೆ ಸೂಚಿಸಿದ್ದರು ಎನ್ನಲಾಗಿದೆ.

ಆ ಹಿನ್ನೆಲೆಯಲ್ಲಿಯೇ ಬಿಟ್ ಕಾಯಿನ್ ಹಗರಣ ಮತ್ತು ಶೇ.40ರಷ್ಟು ಲಂಚದ ವಿಷಯದಲ್ಲಿ ನೇರವಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಹೆಸರೇ ಕೇಳಿಬಂದಾಗಲಾಗಲೀ, ಅದೇ ವಿಷಯವನ್ನು ಮುಂದಿಟ್ಟುಕೊಂಡು ಪ್ರತಿಪಕ್ಷಗಳು ನಿರಂತರ ಆರೋಪಗಳನ್ನು ಮಾಡಿದಾಗಲಾಗಲೀ ಯಡಿಯೂರಪ್ಪ ತುಟಿ ಬಿಚ್ಚಿರಲಿಲ್ಲ. ಕೆಂಪುಕೋಟೆಯಲ್ಲಿ ಕೇಸರಿ ಧ್ವಜ ಹಾರಿಸುತ್ತೇವೆ ಎಂಬ ಕೆ ಎಸ್ ಈಶ್ವರಪ್ಪ ಹೇಳಿಕೆಯ ವಿಷಯದಲ್ಲಾಗಲೀ, ಅಥವಾ ತಮ್ಮ ತವರು ಜಿಲ್ಲೆಯ ಶಿವಮೊಗ್ಗ ಕೋಮುದಳ್ಳುರಿಯಲ್ಲಿ ಹೊತ್ತಿ ಉರಿದ ಬಗ್ಗೆಯಾಗಲೀ, ಸಿಎಂ ಬೊಮ್ಮಾಯಿ ಮತ್ತು ಗೃಹ ಸಚಿವರ ಆಡಳಿತ ವೈಫಲ್ಯದಿಂದಾಗಿ ನಿರಂತರವಾಗಿ ರಾಜ್ಯಾದ್ಯಂತ ಮರುಕಳಿಸುತ್ತಲೇ ಇರುವ ಕಾನೂನು ಮತ್ತು ಸುವ್ಯವಸ್ಥೆಯ ಬಿಕ್ಕಟ್ಟಿನ ಬಗ್ಗೆಯಾಗಲೀ ಯಡಿಯೂರಪ್ಪ ಮಾತನಾಡಿರಲೇ ಇಲ್ಲ!

ಆದರೆ, ಇದೀಗ ದಿಢೀರನೆ ಯಡಿಯೂರಪ್ಪ ರಾಜ್ಯಪ್ರವಾಸದ ಮಾತನಾಡಿದ್ದಾರೆ. ಈ ನಡುವೆ, ಇಷ್ಟು ದಿನ ಸಾರ್ವಜನಿಕವಾಗಿ ಕಾಣಿಸಿಕೊಳ್ಳುವುದನ್ನು ಕಡಿಮೆ ಮಾಡಿದ್ದ ವಿಜಯೇಂದ್ರ ಮೊನ್ನೆ ತಾನೇ ಶಿವಮೊಗ್ಗದ ಮೃತ ಹರ್ಷನ ಮನೆಗೆ ಭೇಟಿ ಮಾಡಿ ನೊಂದ ಕುಟುಂಬಕ್ಕೆ ಸಾಂತ್ವನ ಹೇಳಿದ್ದರು. ಅದಾದ ಬೆನ್ನಲ್ಲೇ ಯಡಿಯೂರಪ್ಪ ರಾಜ್ಯ ಪ್ರವಾಸ ಮಾಡಿ ಬಿಜೆಪಿಯನ್ನು ಮತ್ತೆ ಅಧಿಕಾರಕ್ಕೆ ತರುವ ಮಾತನಾಡಿದ್ದಾರೆ.


ಆದರೆ, ಈ ಬಾರಿ ತಮ್ಮ ಪುತ್ರನ ರಾಜಕೀಯ ಭವಿಷ್ಯ ಭದ್ರ ಮಾಡುವ ನಿಟ್ಟಿನಲ್ಲಿ ನಿಜವಾಗಿಯೂ ಬಿಜೆಪಿಯೊಂದಿಗೆ ಹೆಜ್ಜೆ ಹಾಕಲು ಯೋಚಿಸಿದ್ದಾರೆಯೇ? ಅಥವಾ ಪುತ್ರನ ರಾಜಕೀಯ ಮಹತ್ವಾಕಾಂಕ್ಷೆಯಾದ ಪರ್ಯಾಯ ರಾಜಕೀಯ ವೇದಿಕೆಗೆ ಅಡಿಪಾಯ ಹಾಕಲು ಯೋಜಿಸಿದ್ದಾರೆಯೇ ಎಂಬುದು ಮುಖ್ಯ.

ಈ ಹಿಂದೆ ಹುಬ್ಬಳ್ಳಿಯಲ್ಲಿ ನಡೆದ ರಾಷ್ಟ್ರೀಯ ಕಾರ್ಯಕಾರಣಿ ಸಭೆಯಲ್ಲಿ ಮುಂದಿನ ಚುನಾವಣೆ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಅವರ ನೇತೃತ್ವದಲ್ಲಿ ನಡೆಯುತ್ತದೆ ಎಂದಾಗ ಬಿಎಸ್‌ವೈ ಮುಗಳ್ನಕ್ಕು ಸುಮ್ಮನಾಗಿದ್ದರು..ಮೌನವಾಗಿಯೇ ರಾಜಕೀಯ ಲೆಕ್ಕಚಾರಗಳನ್ನು ಹಾಕುತ್ತಿದ್ದರು. ಆದರೆ ಈಗ ಚುನಾವಣೆ ಸಮೀಪವಾಗುತ್ತಿದೆ ಇಂತ ಹೊತ್ತಿನಲ್ಲಿ ಪುತ್ರ ವಿಜಯೇಂದ್ರ ಭವಿಷ್ಯ ಮುಖ್ಯ ಈಗಾಗಿ ಒಂದು ಪಕ್ಷವನ್ನು ಅಧಿಕಾರಕ್ಕೆ ತರುವ ಮೂಲಕ ವಿಜಯೇಂದ್ರಗೆ ಭವಿಷ್ಯ ಸೃಷ್ಟಿಯಾಗಬೇಕು ಹಾಗಾಗಿ ಯಡಿಯೂರಪ್ಪ ಇಂತ ಮತುಗಳನ್ನಾಡುತ್ತಿದ್ದಾರೆ ಆದರೆ ಪಕ್ಷಕ್ಕಾಗಿ ರಾಜ್ಯಾದ್ಯಂತ ಪ್ರವಾಸ ಮಾಡುವ ಮುನ್ನ ಬಿಎಸ್‌ವೈ ವಿಜಯೇಂದ್ರ ಪಾತ್ರ ಏನು ಎನ್ನುವುದು ಸ್ಪಷ್ಟವಾಗಬೇಕಿದೆ ಆ ಸ್ಪಷ್ಟತೆ ವರಿಷ್ಠರಿಂದ ಸಿಗುತ್ತದೆಯೇ ಎನ್ನುವ ಪ್ರಶ್ನೆ ಇದೆ ಅದಕ್ಕೆ ಹೇಗೆ ಉತ್ತರ ಸಿಗುತ್ತದೆ ಎನ್ನುವುದರ ಮೇಲೆ ಯಡಿಯೂರಪ್ಪ ಮುಂದಿನ ಪ್ರವಾಸ ನಿಂತಿದೆ.

**ಕೆಪಿಸಿಸಿ ಅಧ್ಯಕ್ಷ ಶಿವಕುಮಾರ್ ಮೇಕೆದಾಟು ಯೋಜನೆಗೆ ಆಗ್ರಹಿಸಿ ಪಾದಯಾತ್ರೆ ನಡೆಸಿದ್ದಾರೆ. ಅದೇ ಪಕ್ಷದ ಕಾರ್ಯಾಧ್ಯಕ್ಷ ಸತೀಶ ಜಾರಕಿಹೊಳಿ, ಮಹದಾಯಿ ನೀರಿಗೆ ಒತ್ತಾಯಿಸಿ ಪಾದಯಾತ್ರೆ ಮಾಡುತ್ತಾರಂತೆ. ಚುನಾವಣೆ ಹತ್ತಿರವಾಗುತ್ತಿದೆ ಎನ್ನುವುದಕ್ಕೆ ಇಂಥವೇ ಪ್ರಹಸನಗಳು ಪುರಾವೆ. ಪಕ್ಷ ಯವುದೇ ಇರಲಿ ಅದಕ್ಕೆ ರಾಜಕಾರಣ ಮುಖ್ಯವೇ ಹೊರತೂ ಜನಹಿತವಲ್ಲ. ಹಿಂದೆ ಕಾಂಗ್ರೆಸ್ಸು ಅಧಿಕಾರದಲ್ಲಿದ್ದಾಗ ಬಿಜೆಪಿ ಇಂಥದೇ ನಾಟಕ ಮಾಡಿತ್ತು ಎನ್ನುವುದನ್ನು ಜನ ಮರೆತರೆ ಹೇಗೆ...?**

# ರಾಜಕಾರಣ: ನೀರು ಕಾರಣ

ರಾಜಸೂತ್ರ



ಎಂ.ಕೆ. ಭಾಸ್ಕರ ರಾವ್
ಹಿರಿಯ ಪತ್ರಕರ್ತರು

ಮಹದಾಯಿಯಲ್ಲೂ ಅಷ್ಟೆ ಕಾವೇರಿ ನದಿಯಲ್ಲೂ ಅಷ್ಟೆ ಹೆಚ್ಚುವರಿಯಾಗಿ ಹರಿದು ಸಮುದ್ರ ಸೇರುವ ಜಲರಾಶಿಯನ್ನು ಕರ್ನಾಟಕದಲ್ಲಿ ಬಾಯಾರುತ್ತಿರುವ ಜನರ ಕುಡಿಯುವ ನೀರಾಗಿ ಬಳಸಿಕೊಳ್ಳುವುದಕ್ಕೆ ನೂರೆಂಟು ವಿಘ್ನಗಳು ಎದುರಾಗುತ್ತಿರುವುದು ವಿಪರ್ಯಾಸದ ಸಂಗತಿ. ಶತ್ರುವೇ ಆಗಿದ್ದರೂ ಕುಡಿಯುವ ನೀರನ್ನು ನಿರಾಕರಿಸಬಾರದು ಎಂಬ ಆರ್ಶೇಯ ತತ್ವ ಮೂಲವಾದ ನಮ್ಮ ಸಂಸ್ಕೃತಿಗೆ ವಿರುದ್ಧವಾಗಿ ಗೋವಾ ಮತ್ತು ತಮಿಳುನಾಡು ವರ್ತಿಸುತ್ತಿರುವ ರೀತಿ ಒಂದಾಗಿ ಬಾಳು ಎಂಬ ನೀತಿಗೆ ಖಂಡಿತವಾಗಿಯೂ ಮಾರಕವಾಗಿದೆ. ಹನಿ ನೀರನ್ನೂ ಮಹದಾಯಿ ನದಿಯಿಂದ ಕರ್ನಾಟಕಕ್ಕೆ ಕೊಡೆವು ಎಂಬ ಸಮಾನ ನಿಲುವನ್ನು ಬಿಜೆಪಿ, ಕಾಂಗ್ರೆಸ್ ಸೇರಿದಂತೆ ಗೋವಾದ ಎಲ್ಲ ಪಕ್ಷಗಳೂ ತಾಳಿವೆ. ತಮಿಳುನಾಡಿನಲ್ಲಿ ಇರುವುದೆ ಎರಡು ಪಕ್ಷ. ಡಿಎಂಕೆ ಮತ್ತು ಅಣ್ಣಾಡಿಎಂಕೆ. ಪರಸ್ಪರ ವಿರೋಧ ಜಗದಗಲಮುಗಿಲಗಲ ಇದ್ದಾಗ್ಯೂ ಆ ಪಕ್ಷಗಳದು ಮೇಕೆದಾಟು ಯೋಜನೆ ವಿಚಾರದಲ್ಲಿ ಮಾತ್ರ ಏಕತ್ರ ನಿಲುವು. ಆ ರಾಜ್ಯದಲ್ಲಿ ಇನ್ನೂ ಕಣ್ಣುಬಿಡುತ್ತಿರುವ (ಕಣ್ಣುಕಣ್ಣು ಬಿಡುತ್ತಿರುವ ಪಕ್ಷ ಎಂದರೆ ಹೇಗೆ?) ಬಿಜೆಪಿ ಕೂಡಾ ಕರ್ನಾಟಕ ಕೈಗೆತ್ತಿಕೊಳ್ಳಲು ಹೊರಟಿರುವ ಮೇಕೆದಾಟು ಯೋಜನೆಗೆ ಕಟು ವಿರೋಧ ದಾಖಲಿಸಿದೆ.




ಮಹದಾಯಿಯಿಂದ ಬಹಳ ನೀರನ್ನೇನೂ ಕರ್ನಾಟಕ ಕೇಳುತ್ತಿಲ್ಲ. 7.56 ಟಿಎಂಸಿ ಮಾತ್ರ; ಮೇಕೆದಾಟು ಯೋಜನೆಯಿಂದಲೂ ಹತ್ತು ಟಿಎಂಸಿ ನೀರನ್ನು ಮಾತ್ರವೇ ನಾವು ಬಯಸಿದ್ದೇವೆ. ಕಾವೇರಿಯಲ್ಲಿ ವ್ಯರ್ಥ ಹರಿದು ಸಮುದ್ರ ಸೇರುವ ನೀರನ್ನು ಹಿಡಿದಿಟ್ಟು ಬೆಂಗಳೂರಿಗೆ ಹಾಯಿಸುವುದು; ಮೇಕೆದಾಟು ಅಣೆಯ ಕೆಳಭಾಗದಲ್ಲಿ ಜಲವಿದ್ಯುತ್ ಉತ್ಪಾದಕ ಘಟಕ ಸ್ಥಾಪಿಸಿ ಉತ್ಪಾದಿಸಿದ ವಿದ್ಯುತನ್ನು ಎರಡೂ ರಾಜ್ಯಗಳು ಸಮಭಾಗವಾಗಿ ಹಂಚಿಕೊಳ್ಳುವ ಪ್ರಸ್ತಾಪವೊಂದು ಹಿಂದೆ ಕರುಣಾನಿಧಿ ತಮಿಳುನಾಡು ಮುಖ್ಯಮಂತ್ರಿ ಮತ್ತು ಇಲ್ಲಿ ಜೆ. ಎಚ್.ಪಟೇಲರು ಸಿಎಂ ಆಗಿದ್ದಾಗ ಬಂದಿತ್ತು. ಉಭಯ ರಾಜ್ಯಗಳ ಸಮಾನ ಹೂಡಿಕೆಯುಳ್ಳ ಯೋಜನೆಯಾಗಿ ಇದನ್ನು ಕೈಗೆತ್ತಿಕೊಳ್ಳುವುದು ಸೂಕ್ತ ಎಂಬ ಸಲಹೆಯೂ ಬಂದಿತ್ತು. ಆದರೆ ಆ ಪ್ರಸ್ತಾಪ ಕಾವೇರಿಯ ನೀರಿನೊಂದಿಗೆ ಸೇರಿ ಬಂಗಾಳ ಕೊಲ್ಲಿ ಸಮುದ್ರದಲ್ಲಿ ನೀರಾಗಿ ಹೋಯಿತು. ಈ ಹೊತ್ತು ತಮಿಳುನಾಡಿನಲ್ಲಿ ಕಾವೇರಿ ವಿಚಾರವೇ ಅಲ್ಲಿಯ ಪಕ್ಷಗಳ ಪಾಲಿನ ಸಂಜೀವಿನಿ. ಹನಿ ಹನಿ ಕಾವೇರಿ ನೀರಿಗಾಗಿ "ಜೀವ ಕೊಡುವ" ತುಟಿಯಂಚಿನ ಮಾತನ್ನು ಆ ರಾಜಕೀಯ ಪಕ್ಷಗಳು ಆಗಾಗ ಆಡುತ್ತಲೇ ಇರುತ್ತವೆ. ಚುನಾವಣೆ ಸಮೀಪಕ್ಕೆ ಬಂದಾಗ ಆ ಮಾತು ಕೂಗಿನ ರೂಪ ತಾಳಿ ಆಕಾಶವನ್ನು ಸೀಳುತ್ತದೆ.



ಆಗಿನ್ನೂ ಚೆನ್ನೈ ಮದರಾಸು ಆಗಿದ್ದ ಕಾಲ. ಇಂದಿರಾಗಾಂಧಿ ಪ್ರಧಾನ ಮಂತ್ರಿ. ಮದರಾಸಿನಲ್ಲಿ ಕುಡಿಯುವ ನೀರಿಗೆ ನಿತ್ಯ ಹಾಹಾಕಾರದ ಸ್ಥಿತಿ. ಇಂದಿರಾ ಸಮ್ಮುಖದಲ್ಲಿ ಮಹಾರಾಷ್ಟ್ರ, ಕರ್ನಾಟಕ, ಆಂಧ್ರ ಪ್ರದೇಶ (ತೆಲಂಗಾಣ ರಾಜ್ಯ ಆಗಿನ್ನೂ ಅಸ್ತಿತ್ವಕ್ಕೆ ಬಂದಿರಲಿಲ್ಲ) ಮತ್ತು ತಮಿಳುನಾಡಿನ ಮುಖ್ಯಮಂತ್ರಿಗಳ ಸಭೆ ನಡೆಯಿತು. ಕೃಷ್ಣಾ ಕೊಳ್ಳದ ನೀರಿನ ಹಂಚಿಕೆ ಕುರಿತಂತೆ ಬಚಾವತ್ ತೀರ್ಪು ಬಂದಿತ್ತು. ನಮಗೆ 734 ಟಿಎಂಸಿ ನೀರಿನ ಪಾಲು ಮೊದಲ ಹಂತದಲ್ಲಿ ಬಂದಿತ್ತು. ಇಂದಿರಾ ಗಾಂಧಿ ಮುಂದಿಟ್ಟ ಸೂತ್ರದಂತೆ ಮಹಾರಾಷ್ಟ್ರ, ಕರ್ನಾಟಕ ಮತ್ತು ಆಂಧ್ರಪ್ರದೇಶಗಳು ತಲಾ ಐದು ಟಿಎಂಸಿ ನೀರನ್ನು ಮದ್ರಾಸಿನ ಕುಡಿಯುವ ನೀರಿನ ಅಗತ್ಯ ಪೂರೈಸಲು ಕೊಡಲು ಒಪ್ಪಿದವು. ಒಟ್ಟಾರೆ ಹದಿನೈದು ಟಿಎಂಸಿ ನೀರು ಮದ್ರಾಸಿಗೆ ಹರಿಯುವುದು ನಂತರದಲ್ಲಿ ತಡವಾಗಲಿಲ್ಲ. ನೀರನ್ನು ಕೊಡಲು ಒಪ್ಪಿದ ಮೂರು ರಾಜ್ಯಗಳ ಪೈಕಿ ಯಾವುದೆ ರಾಜ್ಯದ ಮುಖ್ಯಮಂತ್ರಿ, ಅಧಿಕಾರಸ್ಥ ಪಕ್ಷ ವಿರೋಧ ಸೂಚಿಸಲಿಲ್ಲ. ಮಾತ್ರವಲ್ಲ ಈ ಮೂರೂ ರಾಜ್ಯಗಳ ವಿರೋಧ ಪಕ್ಷಗಳು ನೆಪ ಮಾತ್ರದ ವಿರೋಧಕ್ಕಾಗಿಯಾದರೂ ವಿರೋಧ ಸೂಚಿಸಲಿಲ್ಲ. ಅಲ್ಲಿ ಕೆಲಸ ಮಾಡಿದ ಒಪ್ಪಿತ ಸೂತ್ರವೆಂದರೆ "ಶತ್ರುವೇ ಆಗಿದ್ದರೂ ಕುಡಿಯುವ ನೀರನ್ನು ನಿರಾಕರಿಸಬಾರದು" ಎಂಬ ಸಂಸ್ಕೃತಿ.

ತಮಿಳುನಾಡಿನ ರಾಜಕೀಯ ಪಕ್ಷಗಳ ನಾಯಕರಿಗೆ ಇದು ಈಗ ನೆನಪಿನಲ್ಲಿಲ್ಲ ಅಥವಾ ಮರೆತವರಂತೆ ವರ್ತಿಸುತ್ತಿದ್ದಾರೆ. ಮೇಕೆದಾಟು ಯೋಜನೆಯೆಂದರೆ ವರ್ಷವಿಡೀ ಹರಿಯುವ ಕಾವೇರಿ ನೀರಿನ ಹನಿಯನ್ನೂ ತಮಿಳುನಾಡಿಗೆ ಬಿಡದಿರುವ ಯೋಜನೆ ಎಂದೇ ಆ ರಾಜ್ಯದಲ್ಲಿ ಬಿಂಬಿಸಲಾಗುತ್ತಿದೆ. ಅಣ್ಣಾಡಿಎಂಕೆ, ಡಿಎಂಕೆ ಹೇಳಿಕೇಳಿ ಪಕ್ಕಾ ಪ್ರಾದೇಶಿಕ ಪಕ್ಷಗಳು.



ಪ್ರಾದೇಶಿಕವಾಗಿಯೆ ಯೋಚಿಸುವುದು ಅವು ಉದ್ದಕ್ಕೂ ಮಾಡಿಕೊಂಡು ಬಂದಿರುವ ರಾಜಕಾರಣಕ್ಕೆ ಬೇಕು. ಆದರೆ ತಥಾಕಥಿತ ರಾಷ್ಟ್ರೀಯ ಪಕ್ಷಗಳಾದ ಬಿಜೆಪಿ, ಕಾಂಗ್ರೆಸ್‌ಗೆ...? ಬಿಜೆಪಿ ಇಂದು ದೇಶದಲ್ಲಿ ಮಾತ್ರವೇ ಅಲ್ಲ ಜಗತ್ತಿನಲ್ಲೇ ಅತ್ಯಂತ ದೊಡ್ಡ ಪಕ್ಷ. ಅದಕ್ಕಿರುವ ಸದಸ್ಯಬಲ ಬೇರೆ ಯಾವ ದೇಶದ ಯಾವ ಪಕ್ಷಕ್ಕೂ ಇಲ್ಲ ಎನ್ನುವುದು ಅದರ ಅಗ್ಗಳಿಕೆ. ಗೋವಾದಲ್ಲಿ ನಡೆದಿರುವ ಚುನಾವಣಾ ಫಲಿತಾಂಶ ಬರುವುದಕ್ಕೆ ಮಾರ್ಚ್ ಹತ್ತರವರೆಗೂ ಕಾಯಬೇಕು. ಇದುವರೆಗೆ ಅಲ್ಲಿ ಬಿಜೆಪಿ ನೇತೃತ್ವದ ಸರ್ಕಾರವೇ ಇತ್ತು. ಕೇಂದ್ರದಲ್ಲಿಯೂ ಕರ್ನಾಟಕದಲ್ಲಿಯೂ ಬಿಜೆಪಿ ಸರ್ಕಾರವೇ. ಮಹದಾಯಿ ನೀರು ಹಂಚಿಕೆ ವಿಚಾರದಲ್ಲಿ ಕಾಂಗ್ರೆಸ್ ತನ್ನ ನಿಲುವನ್ನು ಸ್ಪಷ್ಟಪಡಿಸಬೇಕೆಂದು 2018ರಷ್ಟು ಹಿಂದೆಯೇ ಬಿಜೆಪಿ ನಾಯಕ ಬಿ. ಎಸ್.ಯಡಿಯೂರಪ್ಪ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿಯವರನ್ನು ಕೇಳಿದ್ದರು.



ಬಿಎಸ್‌ವೈ ಕೇಳಿದ್ದಕ್ಕೆ ಕಾರಣವಿದೆ. ದಶಕದ ಹಿಂದೆ ಗೋವಾದ ಚುನಾವಣಾ ರ‍್ಯಾಲಿಯೊಂದಲ್ಲಿ ಮಾತನಾಡಿದ್ದ ಸೋನಿಯಾ ಗಾಂಧಿ "ಕರ್ನಾಟಕಕ್ಕೆ ಮಹದಾಯಿ ನದಿ ನೀರಿನ ಒಂದು ಹನಿಯನ್ನೂ ಬಿಡುವುದಿಲ್ಲ" ಎಂದು ಹೇಳಿ ಚಪ್ಪಾಳೆ ಗಿಟ್ಟಿಸಿಕೊಂಡಿದ್ದರು. ಗೋವಾ ಪ್ರದೇಶ ಕಾಂಗ್ರೆಸ್ಸು ತನ್ನ ಚುನಾವಣಾ ಪ್ರಣಾಳಿಕೆಯಲ್ಲೂ ಇದನ್ನು ನೇರಾನೇರ ಹೇಳಿತ್ತು. ಕಾಲ ಕಾಲಕ್ಕೆ ಗೋವಾ ಕಾಂಗ್ರೆಸ್ ನಾಯಕರು ಸೋನಿಯಾ ಗಾಂಧಿ ಬಾಯಲ್ಲಿ ತಾವು ಹೇಳಿಸಿದ್ದನ್ನೇ ಮತ್ತೆ ಮತ್ತೆ ಹೇಳಿಕೊಂಡು ಬರುತ್ತಿದ್ದಾರೆ. ಇತ್ತೀಚೆಗಿನ ರಾಜ್ಯ ವಿಧಾನ ಸಭಾ ಚುನಾವಣೆಯಲ್ಲೂ ಕಾಂಗ್ರೆಸ್ ಇದೇ ವಾದವನ್ನು ಪುನರುಚ್ಚರಿಸಿತ್ತು. ಹಾಗಾಗಿ ಬಿಎಸ್‌ವೈ ರಾಹುಲ್‌ರನ್ನು ಕೆಣಕಿದ್ದರು. ಆದರೆ ಬಿಎಸ್‌ವೈ ಅವರದೇ ಪಕ್ಷ ಏನು ಕಡಿದು ಗುಡ್ಡೆ ಹಾಕಿತು ಎನ್ನುವುದನ್ನು ಯಡಿಯೂರಪ್ಪ ಹೇಳಲಿಲ್ಲ. ಏತನ್ಮಧ್ಯೆ ಮಹದಾಯಿ ನೀರಿಗಾಗಿ ತಮ್ಮ ಪಕ್ಷ ಪಾದಯಾತ್ರೆ ಮಾಡುತ್ತದೆಂದು ಕೆಪಿಸಿಸಿ ಕಾರ್ಯಾಧ್ಯಕ್ಷರಲ್ಲಿ ಒಬ್ಬರಾಗಿರುವ ಸತೀಶ ಜಾರಕಿಹೊಳಿ ಹೇಳಿದ್ದಾರೆ. ಅಧಿಕಾರದಲ್ಲಿ ಇರದ ಪಕ್ಷಗಳಿಗೆ ಕಾವೇರಿ, ಮಹದಾಯಿ ಎನ್ನುವುದು ಚುನವಣೆ ಗೆಲ್ಲುವ ಏಣಿಯ ಮೆಟ್ಟಿಲಲ್ಲದೆ ಇನ್ನೇನೂ ಅಲ್ಲ. ಜನಕ್ಕೆ ಮೂರು ತಿಂಗಳಲ್ಲಿ ಯಾರು ಏನೆಲ್ಲ ಹೇಳಿದರೆನ್ನುವುದು ಮರೆತು ಹೋಗಿರುತ್ತದೆ. ಮತ್ತೊಂದು ಸುಳ್ಳು ಭರವಸೆಯನ್ನು ಕೊಡುವುದಕ್ಕೆ ರಾಜಕಾರಣಿಗಳಿಗೆ ಮುಹೂರ್ತ ಸಿಗುತ್ತದೆ.

ಧಾರವಾಡ, ಬೆಳಗಾವಿ, ಬಾಗಲಕೋಟೆ, ಗದಗ ಜಿಲ್ಲೆಗಳ 13 ನಗರ ಪಟ್ಟಣಗಳ ಕುಡಿಯುವ ನೀರಿನ ಅಗತ್ಯ ಪೂರೈಸುವುದಕ್ಕೆ ಮಹದಾಯಿ ನೀರು ಬೇಕೆನ್ನುವುದು ಕರ್ನಾಟಕದ ವಾದ. 7.56 ಟಿಎಂಸಿ ನೀರನ್ನು ಕೊಡಿರೆಂದು ಗೋವಾಕ್ಕೆ ಗೋಗರೆಯುತ್ತ ದಶಕಗಳು ಉರುಳಿವೆ. ಏತನ್ಮಧ್ಯೆ ನ್ಯಾಯಮಂಡಳಿ ಐತೀರ್ಪಿನ ಪ್ರಕಾರ ಕರ್ನಾಟಕಕ್ಕೆ ಮಹದಾಯಿಯಿಂದ ಒಟ್ಟಾರೆ 13.42 ಟಿಎಂಸಿ ನೀರು ಮಂಜೂರಾಗಿದೆ. ಅದರಲ್ಲಿ 7.56 ಟಿಎಂಸಿ ನೀರನ್ನು ಕುಡಿಯುವುದಕ್ಕೆ ಬಳಸಿಕೊಂಡು ಉಳಿದುದನ್ನು ವಿದ್ಯುತ್ ಉತ್ಪಾದನೆಗೆ ಬಳಸಿಕೊಳ್ಳುವಂತೆ ಕರ್ನಾಟಕ ವಿದ್ಯುತ್ ನಿಗಮಕ್ಕೆ (ಕೆಪಿಸಿ) ಮಂಡಳಿ ಸೂಚಿಸಿದೆ. ಕರ್ನಾಟಕದಲ್ಲಿ ಹುಟ್ಟುವ ಮಹದಾಯಿ ಈ ರಾಜ್ಯದಲ್ಲಿ 35 ಕಿಮೀ ಹರಿದು ಗೋವಾ ರಾಜ್ಯದ ಮೂಲಕ ಅರಬ್ಬಿ ಸಮುದ್ರ ಸೇರುತ್ತದೆ. ಒಂದು ಲೆಕ್ಕಾಚಾರದ ಪ್ರಕಾರ ಅಜಮಾಸು 70 ಟಿಎಂಸಿ ನೀರು ವ್ಯರ್ಥ ಸಮುದ್ರ ಸೇರುತ್ತದೆ. ಅದರಲ್ಲಿ ಒಂದಿಷ್ಟನ್ನು ಬಳಸಿಕೊಳ್ಳಲು ಅನುಮತಿ ಬೇಕೆನ್ನುವುದು ಗೋವಾದ ಮುಂದೆ ಕರ್ನಾಟಕದ ವರಾತ. ಸ್ವತಃ ಎಐಸಿಸಿ ಅಧ್ಯಕ್ಷೆ ಸೋನಿಯಾ ಗಾಂಧಿ ಸೇರಿದಂತೆ ಗೋವಾದ ಎಲ್ಲ ಕಾಂಗ್ರೆಸ್ಸಿಗರೂ ಪಶ್ಚಿಮ ಘಟ್ಟದ ಪರಿಸರದ ಮೇಲೆ ಪ್ರತಿಕೂಲ ಪರಿಣಾಮವಾಗುತ್ತದೆಂಬ ನೆಪವೊಡ್ಡಿ ನೀರನ್ನು ನಿರಾಕರಿಸುತ್ತಿದ್ದಾರೆ. ಆ ರಾಜ್ಯದ ಬಿಜೆಪಿಯೂ ಕಾಂಗ್ರೆಸ್‌ನ ರಾಗತಾಳಕ್ಕೆ ಹೆಜ್ಜೆ ಹಾಕುತ್ತಿದೆ. ಇನ್ನು ಪ್ರಾದೇಶಿಕ ಪಕ್ಷಗಳ ವಿಚಾರದಲ್ಲಿ ಏನನ್ನೂ ಹೇಳದೇ ಇರುವುದೇ ಒಳಿತು. ಕಾವೇರಿ ನದಿಯಿಂದ ಹತ್ತು ಟಿಎಂಸಿ ನೀರನ್ನು ಬೆಂಗಳೂರಿಗೆ ತರುವ ಮೇಕೆದಾಟು ಯೋಜನೆಗೆ ನಡೆದಿರುವ ಒತ್ತಾಯ ಇದೀಗ ಕಾಂಗ್ರೆಸ್ ಪಕ್ಷದ ಪಾಲಿಗೆ ಒಂಥರಾ ಓಟ್ ಬ್ಯಾಂಕ್ ಸ್ವರೂಪ ಪಡೆಯುತ್ತಿದೆ. ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಯೋಜನೆಯನ್ನು ಮುಂದಿಟ್ಟುಕೊಂಡು ಬಿಜೆಪಿ, ಜೆಡಿಎಸ್‌ಗಳೆರಡನ್ನೂ ಹಿಂದಕ್ಕೆ ತಳ್ಳುವ ರಾಜಕೀಯವನ್ನು ಕೈಗೆತ್ತಿ ಕೊಂಡಿದ್ದಾರೆ. ವೀರಾವೇಶದಿಂದ ಶುರು ಮಾಡಿದ್ದ ನಮ್ಮ ನೀರು ನಮ್ಮ ಹಕ್ಕು ಹೋರಾಟ ಕೊರೋನಾ ಕಾರಣವಾಗಿ ಮುಗ್ಗರಿಸಿದ್ದು ಇನ್ನೂ ಎಲ್ಲರ ನೆನಪಲ್ಲಿರುವ ಸಂಗತಿ. ಕೊರೋನಾ ಇದ್ದರೇನಂತೆ ಪಾದಯಾತ್ರೆ ಮಾಡಿಯೇ ಸಿದ್ಧ ಎನ್ನುತ್ತಿದ್ದ ಡಿಕೆಶಿ, ಹೈಕೋರ್ಟ್ ಛೀಮಾರಿ ಹಾಕಿದ ನಂತರ ತಣ್ಣಗಾದರು ಎನ್ನುವುದು ಕೂಡಾ ಜನ ಬಲ್ಲ ಸಂಗತಿ. ಬಿಜೆಪಿ ಇಲ್ಲವೆ ಜೆಡಿಎಸ್ ಅನ್ನು ಹಿಂದಿಕ್ಕುವ ಡಿಕೆಶಿ ಯೋಚನೆಯಲ್ಲಿ ಸಿಎಂ ಗಾದಿಗೆ ತಾವು ಏಕೈಕ ವಾರಸುದಾರ ಎಂಬ ಅರ್ಥವಿದೆ. ಆದರೆ ಈ ಯತ್ನದಲ್ಲಿ ಸಿದ್ದರಾಮಯ್ಯನವರಾದಿಯಾಗಿ ಹಲವು ಕಾಂಗ್ರೆಸ್ ಮುಖಂಡರನ್ನು ಹಿಂದೆ ಹಾಕಿ ಮುಂದೆ ಓಡುವ ಅವರ ಯತ್ನ ಮಾತ್ರ ಅವರ ಪಕ್ಷದಲ್ಲೇ ಇನ್ನಿಲ್ಲದ ಕುತೂಹಲಕ್ಕೆ ಗ್ರಾಸವಾಗಿದೆ.



# ಗುಬ್ಬಚ್ಚಿ ಮೇಲೆರಗಿದ



## ಅಣುಯುದ್ಧ ನಿಶ್ಚಿತ, ಮೂರನೇ ಮಹಾಯುದ್ಧಕ್ಕೆ ಮುನ್ಸೂಚನೆ

ಪುಟ್ಟ ದೇಶ ಉಕ್ರೇನ್ ಮೇಲೆ ದೈತ್ಯ ರಕ್ಕಸ ದಾಳಿ ಮಾಡಿ ವಾರವೇಕಳಿದಿದೆ ಯುದ್ಧ ನಿಲ್ಲುವ ಮುನ್ಸೂಚನೆಗಳೇನೂ ಕಾಣುತ್ತಿಲ್ಲ ದಿನದಿಂದ ದಿನಕ್ಕೆ ರಷ್ಯಾ ಎಲ್ಲಾ ಕದನ ನಿಯಮಗಳನ್ನು ಉಲ್ಲಂಘಿಸಿ ಜನವಸತಿಯ ಮೇಲೆ ವ್ಯಾಕ್ಯೂಮ್ ಬಾಂಬ್‌ಗಳ ಮೂಲಕ, ಕ್ಷಿಪಣಿಗಳ ಮೂಲಕ ದಾಳಿ ನಡೆಸಿ ಸಾವಿರಾರು ಮಂದಿಯನ್ನು ಕಗ್ಗೊಲೆ ಮಾಡುತ್ತಿದೆ. ಕರ್ನಾಟಕದ ಯುವ ಚೇತನ ಒಂದು ಈ ಬಾಂಬ್ ದಾಳಿಯಲ್ಲಿ ಅಸುನೀಗಿದೆ ನಮ್ಮೆಲ್ಲರಿಗೆ ಇದು ಒಂದು ದೊಡ್ಡ ಅಘಾತ! ಇನ್ನೆರಡು ವರ್ಷಗಳಲ್ಲೇ ವೈದ್ಯನಾಗಬೇಕಿದ್ದ ಯುವಕ ನವೀನ್ ಕನ್ನಡದ ಹುಡಗೆರಲ್ಲರಿಗೂ ಊಟ ತರಲು ಹೋಗಿ ಸೂಪರ್ ಬಜಾರ್ ಮುಂದೆ ಸಾಲಿನಲ್ಲಿ ನಿಂತಿದ್ದಾಗ ನಡೆದಿರುವ ಈ ಹತ್ಯೆ ಖಂಡನಾರ್ಹ. ಇದಕ್ಕೆ ನೇರವಾಗಿ ನಮ್ಮ ಕೇಂದ್ರ ಸರ್ಕಾರವೇ ಹೊಣೆಯಾಗಬೇಕು. ರಷ್ಯಾ ಅಧ್ಯಕ್ಷ ಪುಟಿನ್ ಮತ್ತು ಉಕ್ರೇನಿನ ಅಧ್ಯಕ್ಷ ಝೆಲನ್ ಸ್ಕೀ ಈ ಪಾಪದ ಪಾಲುದಾರರಾಗುತ್ತಾರೆ. ಜಗತ್ತಿನ ಅತೀದೊಡ್ಡ ಮಹಾಯುದ್ಧವಾಗುವ ಎಲ್ಲಾ ಮುನ್ಸೂಚನೆಗಳು ನಮ್ಮೆದರಿಗಿವೆ.

● ಡಾ.ವೈ.ಸಿ.ಪಾಟೀಲ್
ಹಿರಿಯ ಪತ್ರಕರ್ತರು

ಇತ್ತೀಚಿನ ಬೆಳವಣಿಗೆಗಳಂತೆ ಭಾರತ ಸರ್ಕಾರ ಉಕ್ರೇನ್ ರಾಜಧಾನಿ ಕೀವ್ ನಗರವನ್ನು ತೊರೆಯುವಂತೆ ತುರ್ತು ಸೂಚನೆಯನ್ನು ನೀಡಿದೆ. ಸುಮಾರು ಇಪ್ಪತ್ತು ಸಾವಿರ ಭಾರತೀಯರು ಅದರಲ್ಲೂ ಮುಖ್ಯವಾಗಿ ವಿದ್ಯಾರ್ಥಿಗಳು ಈ ರಣಕೂಪದೊಳಗೆ ಸಿಕ್ಕಿ ನೀರು–ಅಹಾರವಿಲ್ಲದೆ ನರಳುತ್ತಿದ್ದಾರೆ.ಭಾರತ ಸರ್ಕಾರ ಇಂದು ಮಾಡುವ ಕೆಲಸವನ್ನು ಬೇರೆ ಎಲ್ಲಾ ದೇಶಗಳು ಮಾಡಿದಂತೆ ಕನಿಷ್ಠ ಹದಿನೈದು ದಿನಗಳ ಹಿಂದಾದರೂ ಮಾಡಿದ್ದರೆ ಸಾವಿರಾರು ಭಾರತೀಯರು ಈ ನರಕದಿಂದ ಹೊರಬರುತ್ತಿದ್ದರು. ಆದರೆ ಮೋದಿ ಸರ್ಕಾರ ದಿವ್ಯ ನಿರ್ಲಕ್ಷ್ಯದಿಂದಾಗಿ ಏನು ಆಗುವುದೇ ಇಲ್ಲ ಎಂಬ ಭ್ರಮೆ ಕೊಚ್ಚಿಹೋಗಿ ಉಕ್ರೇನ್‌ನಲ್ಲಿರುವ ಭಾರತೀಯರು ಕಗತ್ತಲ ಕೂಪದಲ್ಲಿ ಬಿದ್ದಿದೆ .ಈಗೇನೋ ಸರ್ಕಾರ ನಾಲ್ಕು ಕೇಂದ್ರ ಸಚಿವರನ್ನು ಉಕ್ರೇನ್ ನೆರೆಯ ದೇಶಗಳಿಗೆ ಕಳುಹಿಸಿ ಭಾರತೀಯರನ್ನು ಅಲ್ಲಿಗೆ ಕರೆಸಿಕೊಂಡು ಅಲ್ಲಿಂದ ಅವರನ್ನು ಸ್ವದೇಶಕ್ಕೆ ಕಳುಹಿಸುವ ವ್ಯವಸ್ಥೆಯನ್ನು ಮಾಡತೊಡಗಿದೆ. ವಾಯು ಪಡೆಯ ಜಿ–17 ವಿಮಾನವನ್ನು' ಆಪರೇಷನ್ ಗಂಗಾ'ದಲ್ಲಿ ಬಳಸಲು ಪ್ರಧಾನಿ ಸೂಚನೆ ಮೇರೆಗೆ ಒಪ್ಪಿಗೆ ದೊರಕಿದೆ. ಈಗ ತೋರಿದ ಮುತುವರ್ಜಿ ಕಳೆದ ಕೆಲ ವಾರಗಳ ಹಿಂದೆಯೇ ಎಲ್ಲಿ ಹೋಗಿತ್ತು ಎನ್ನುವುದೇ ಪ್ರಶ್ನೆಯಾಗಿದೆ.

ಒಂದನೇ ಸುತ್ತಿನ ಮಾತುಕತೆ ವಿಫಲವಾಗಿದ್ದು ಉಕ್ರೇನ್ ಮತ್ತು ರಷ್ಯಾ ನಡುವಿನ ಉದ್ದೇಶಿತ ಎರಡನೇ ಸುತ್ತಿನ ಮಾತುಕತೆಗಳು ವಿಫಲಗೊಳ್ಳುವ ಸಂಭವವೇ ಹೆಚ್ಚಾಘಿದೆ. ಏಕೆಂದರೆ, ರಷ್ಯಾ ಹಾಕಿರುವ ಷರತ್ತಿಗೆ ಉಕ್ರೇನ್ ಒಪ್ಪಿದರೆ ಮಾತ್ರ ಕದನ ವಿರಾಮವಾಗುತ್ತದೆ ಇಲ್ಲದಿದ್ದರೆ ಹೈಬ್ರಿಡ್ ಯುದ್ಧವಾಗಿರುವ ಈ ಕದನ ಶೀಘ್ರದಲ್ಲೇ ಅಣು ಯುದ್ಧವಾಗಿ ಪರಿವರ್ತನೆಯಾಗಿ ಮೂರನೇ ಪ್ರಪಂಚದ ಮತ್ತೊಂದು ಮಹಾ ಯುದ್ಧವಾಗುವ ಸಂಭವ ಸನಿಹದಲ್ಲೇ ಇದೆ.ಉಕ್ರೇನ್ ಹಾಕಿರುವ ಷರತ್ತುಗಳನ್ನು ರಷ್ಯಾ ಒಪ್ಪುವುದು ಸಾಧ್ಯವೇ ಇಲ್ಲ ಏಕೆಂದರೆ, ಕ್ರಿಮಿಯಾ ದೇಶವನ್ನು ಪ್ರತ್ಯೇಕ ರಾಷ್ಟ್ರ ಎಂದು ರಷ್ಯಾ ಘೋಷಿಸಿರುವುದನ್ನು ವಾಪಾಸ್ ಪಡೆಯುವಂತೆ ಉಕ್ರೇನ್ ಒತ್ತಾಯಿಸುತ್ತಿದೆ, ಆದರೆ ಇದನ್ನು ರಷ್ಯಾ ಸುತಾರಾಂ ಒಪ್ಪುತ್ತಿಲ್ಲ ಬದಲಿಗೆ ಉಕ್ರೇನ್ ನ್ಯಾಟೋ ರಾಷ್ಟ್ರವಾಗಬಾರದೆಂಬ ಷರತ್ತನ್ನು ವಿಧಿಸಿದೆ. ಈ ಎರಡು ಷರತ್ತುಗಳನ್ನು ಕೈಗೊಡುವುದು ಇಬ್ಬರಿಗೂ ಸಾಧ್ಯವಿಲ್ಲ ಉಕ್ರೇನ್ ಐರೋಪಿಯನ್ ಯೂನಿಯನ್‌ಗೆ ಕೂಡಲೇ ತಮ್ಮನ್ನು ಸೇರ್ಪಡೆ ಮಾಡಿಕೊಡಬೇಕೆಂದು ಒತ್ತಾಯಿಸುತ್ತಿದೆ. ಆದರೆ, ಐರೋಪಿಯನ್ ಯೂನಿಯನ್ ಅದನ್ನು ತಳ್ಳಿ ಹಾಕಿ ತುರ್ತಾಗಿ ಅದನ್ನು ತಮ್ಮ ಯೂನಿಯನ್‌ಗೆ ಸೇರಿಸಿಕೊಳ್ಳುವುದನ್ನು ಸಾಧ್ಯವಿಲ್ಲ ಎಂದು ಹೇಳಿದೆ. ಈ ಪ್ರಕ್ರಿಯೆಯು ವರ್ಷಗಳೇ ಬೇಕಾಗುತ್ತದೆ ಎಂದು ಅದು ಹೇಳಿದೆ. ಅದ್ದರಿಂದ ಉಕ್ರೇನ್ ತಾನೊಂದು ಐರೋಪ್ಯ ರಾಷ್ಟ್ರವಾಗುವ ಕನಸನ್ನು ಮುರಿದು ಹಾಕಿದೆ.

ಕೀವ್ ಮತ್ತು ಎರಡನೇ ಪ್ರಮುಖ ನಗರವಾದ ಖಾರ್ಕಿವ್‌ನಲ್ಲಿ ಭಾರಿ ವಾಯು ದಾಳಿ ನಡೆಯುತ್ತಿದ್ದು ಈ ನಗರಗಳ ಸನಿಹದಿಂದ ಸರಿ ಸುಮಾರು ಐವತ್ತು ಮೈಲಿ ದೂರಕ್ಕೆ ರಷ್ಯಾ ಮಿಲಿಟರಿ ಯುದ್ಧ ವಾನಗಳು ಒಂದರ ಹಿಂದೆ ಒಂದರಂತೆ ಸಜ್ಜಾಗಿ ನಿಂತಿವೆ; ಅತೀ ಶೀಘ್ರದಲ್ಲೇ ಈ ಎರಡು ನಗರಗಳು ರಷ್ಯಾದ ತೆಕ್ಕೆಗೆ ಬೀಳಲಿದೆ.ಏಕೆಂದರೆ ರಷ್ಯಾ ಕ್ಷಿಪಣಿಗಿಳ ಮೂಲಕ ಈ ಎರಡೂ ನಗರಗಳ ಜನವಾಸಿಸುವ ಪ್ರದೇಶದತ್ತ ದಾಳಿ ನಡೆಯುತ್ತಿದೆ ಉಕ್ರೇನ್ ಜನ ಶಸ್ತ್ರಾಸ್ತ್ರ ಹೊಂದಿದ್ದರೂ ಈ ರಕ್ಕಸ ರಷ್ಯಾ ಪಡೆಯನ್ನು ಎದುರಿಸುವುದು ಕಷ್ಟ ಸಾಧ್ಯ.

ಈ ಮಧ್ಯೆ ಉಕ್ರೇನ್ ಯುದ್ಧ ಅಪರಾಧಗಳ ತನಿಖೆಗೆ ಒತ್ತಾಯಿಸಿ ಅಂತರಾಷ್ಟ್ರೀಯ ಅಪರಾಧ ನ್ಯಾಯಾಲಯಕ್ಕೆ ಮನವಿ ಸಲ್ಲಿಸಿದೆ.ರಷ್ಯಾ ಮಾಡಿರುವ ಎಲ್ಲಾ ನರಮೇಧವನ್ನು ತನಿಖೆಗೆ ಒಳಪಡಿಸುವಂತೆ ಉಕ್ರೇನ್ ಆಗ್ರಹಿಸಿದೆ.ಆದರೆ ಅದು ಸದ್ಯಕ್ಕೆ ಆಗುವ ಕೆಲಸವಲ್ಲ ಈಗಾಗಲೇ ರಷ್ಯಾ ಯುದ್ಧ ವಿಮಾನಗಳು ಮಾಡಿದ ಕ್ಷಿಪಣಿ ದಾರಿಯಲ್ಲಿ ಕನಿಷ್ಠ ಹತ್ತು ಜನ ನಾಗಿರಕರು



ಮತ್ತು ಮಕ್ಕಳು ಖಾರ್ಕಿವ್ ನಲ್ಲಿ ಹತರಾಗಿದ್ದಾರೆ. ಅನೇಕ ಬಹುಮಹಡಿ ಕಟ್ಟಡಗಳು ಉರುಳಿ ಬಿದ್ದಿವೆ ಇದೇ ಸಂದರ್ಭದಲ್ಲಿ ರಷ್ಯಾದ ಐದು ಜೆಟ್ ಯುದ್ಧ ವಿಮಾನಗಳನ್ನು ಹೊಡೆದುರುಳಿಸಿರುವುದಾಗಿ ಉಕ್ರೇನ್ ಹೇಳಿಕೊಂಡಿದೆ.

ಇದರಿಂದಾಗಿ 50ಕ್ಕೂ ಹೆಚ್ಚು ರಷ್ಯಾ ವಿಮಾನಗಳು ಹೆಲಿಕ್ಯಾಪ್ಟರ್‌ಗಳು ಉಕ್ರೇನ್‌ನಲ್ಲಿ ಪತನಗೊಂಡಿವೆ.

### ರಷ್ಯಾ ಏಕೇ ಈ ದಾರಿ ಮಾಡೀತು?

ಯು ಎಸ್‌ಎಸ್ ಆರ್ ಇದ್ದಾಗ ಅದರ ಭಾಗವಾಗಿದ್ದ ಉಕ್ರೇನ್ ಅದು ಛಿದ್ರಗೊಂಡಾಗ 90ರ ದಶಕದಲ್ಲಿ ಪ್ರತ್ಯೇಕ ರಾಷ್ಟ್ರವಾಯಿತು ರಷ್ಯಾ ಕಮ್ಯೂನಿಷ್ಟ್ ರಾಷ್ಟ್ರವಾದರೆ ಉಕ್ರೇನ್ ಪ್ರಜಾಪ್ರಭುತ್ವವನ್ನು ಆರಿಸಿಕೊಂಡಿತ್ತು ಹೀಗಾಗಿ ರಾಜಕೀಯವಾಗಿ ಒಂದಕ್ಕೊಂದು ವಿರೋಧ ಉಂಟಾಗಿವೆ ಈಗಿರುವ ಉಕ್ರೇನಿನ ಅಧ್ಯಕ್ಷ ಝೆನೆಸ್ಕಿ ಭ್ರಷ್ಟಾಚಾರದ ವಿರುದ್ಧ ಹೋರಾಡಿದ ಹಿನ್ನೆಲೆಯಿಂದ ಬಂದವ ಆತ ಟಿವಿ ಕಾರ್ಯಕ್ರಮದಲ್ಲಿ ಹಾಸ್ಯ ನಿರೂಪಕವಾಗಿದ್ದವನು ಹೀಗಾಗಿ ಉಕ್ರೇನ್ ಜನತೆ ಭ್ರಷ್ಟಾಚಾರದ ವಿರುದ್ಧ ಈ ಯುವಕನಿಗೆ ಅಧ್ಯಕ್ಷ ಪಟ್ಟ ಕಟ್ಟಿದ್ದಾರೆ ಆದರೆ ಪುಟಿನ್ ಮೊದಲಿನಿಂದಲೂ ಕಮ್ಯೂನಿಷ್ಟಿ ಸಾಮ್ರಾಜ್ಯ ಶಾಹಿಯಾಗಿ ಪ್ರಪಂಚದ ಮೇಲೆ ತನ್ನ ಹಿಡಿತವನ್ನು ಸಾಧಿಸಿದ ದುಷ್ಟ ಕುತಂತ್ರಿ. ಒಡೆದು ಹೋಗಿರುವ ಯುಎಸ್‌ಎಸ್‌ಆರ್ ಅನ್ನು ಒಂದು ಗೂಡಿಸಿ ಮತ್ತೇ ಜಗತ್ತಿನಲ್ಲಿ ತಾನೇ ದೊಡ್ಡವನು ಎಂದು ಮೆರೆಯಲು ಹೊರಟಿರುವ ಪುಟಿನ್ ಈಗ ಮಾಸ್ಕೋ ಪಕ್ಕದಲ್ಲೇ ಇರುವ ಉಕ್ರೇನಿನ ಮೇಲೆ ಪ್ರಥಮ ಪ್ರಯೋಗ ನಡೆಸಿದ್ದಾನೆ.ಈ ಯುದ್ಧದ ಸಮಯದಲ್ಲಿ ಮಾನವೀಯ ಮನವಿಗಳು ಕೆಲಸಕ್ಕೆ ಬರುವುದಿಲ್ಲ ಯಾರಾದರೂ ಸಾಯಲಿ ತಾನೂ ಮಾತ್ರ ಗೆಲ್ಲಬೇಕು ಎನ್ನುವುದೇ ಕುಟಿನ್ ಕುಟಿಲತೆಯಾಗಿದೆ. ಇದಕ್ಕೆ ತುಪ್ಪ ಸುರಿದಂತೆ ಉಕ್ರೇನ್ ಟ್ಯಾಟೋ ರಾಷ್ಟ್ರವಾಗಲು ಹೊರಟಿದ್ದು ಪುಟಿನ್‌ಅನ್ನು ಕೆಣಕಿತು ಈಸಣ್ಣ ದ್ವೇಷ ತನ್ನ ಮಾತು ಮೀರಿ ನ್ಯಾಟೋ ರಾಷ್ಟ್ರವಾಗಲು ಹೊರಟಿರುವುದನ್ನು ಸಹಿಸದ ಪುಟಿನ್ ಅನೇಕ ಬಾರಿ ಜನೆಸ್ಕಿಗೆ ಹೆದರಿಕೆ ಹಾಕಿದ್ದಾರೆ. ಆದರೆ ಉಕ್ರೇನ್ ಅಧ್ಯಕ್ಷ ಪುಟಿನ್

# ಗಿಡುಗ!



## ಕೇಂದ್ರದ ನಿರ್ಲಕ್ಷ್ಯಕ್ಕೆ ಕನ್ನಡಿಗ ಯುವಕನ ಜೀವ ಬಲಿ



ಉಕ್ರೇನ್ ಮತ್ತು ರಷ್ಯಾ ನಡುವಿನ ಬಿಗುವಿನ ವಾತಾವರಣ ಅಕ್ಷರಶಃ ಯುದ್ಧದ ಆಯಾಮ ತೆಗೆದುಕೊಂಡು ರಷ್ಯಾ ಪಡೆಗಳು ನಾಗರಿಕ ಪ್ರದೇಶಗಳ ಮೇಲೂ ಅಮಾನುಷ ದಾಳಿ ನಡೆಸಲು ಆರಂಭಿಸಿದಂದಿನಿಂದಲೇ ಶಿಕ್ಷಣಕ್ಕಾಗಿ ಅಲ್ಲಿ ಹೋದ ಭಾರತೀಯ ವಿದ್ಯಾರ್ಥಿಗಳ ಸುರಕ್ಷತೆ ಮತ್ತು ಅವರನ್ನು ವಾಪಸು ಕರೆಸಿಕೊಳ್ಳುವ ಕುರಿತು ದೇಶಾದ್ಯಂತ ವ್ಯಾಪಕ ಆತಂಕ ವ್ಯಕ್ತವಾಗಿತ್ತು. ಅದೇ ಹೊತ್ತಿಗೆ ಕೆಲವು ವಿದ್ಯಾರ್ಥಿಗಳನ್ನು ಆಪರೇಷನ್ ಗಂಗಾ ಹೆಸರಿನಲ್ಲಿ ಭಾರತಕ್ಕೆ ವಾಪಸು ಕರೆತರಲಾಗಿದೆ. ಒಟ್ಟು ಉಕ್ರೇನಿನಲ್ಲಿರುವ 19 ಸಾವಿರ ಭಾರತೀಯ ವಿದ್ಯಾರ್ಥಿಗಳ ಪೈಕಿ ಈವರೆಗೆ ಕೇವಲ 1500 ಮಂದಿಯನ್ನು ಆಪರೇಷನ್ ಗಂಗಾ ದ ಅಡಿಯಲ್ಲಿ ವಾಪಸು ಕರೆತರಲಾಗಿದೆ. ಇನ್ನುಳಿದ ಸಾವಿರಾರು ಮಂದಿ ವಿದ್ಯಾರ್ಥಿಗಳು ಅಲ್ಲಿನ ಯುದ್ಧದ ಭೀಕರ ಪರಿಸ್ಥಿತಿಯ ನಡುವೆ ಸಹಾಯಕ್ಕಾಗಿ ಅಂಗಾಲಾಚುತ್ತಿದ್ದಾರೆ. ಭೀಕರ ಬಾಂಬ್ ದಾಳಿ ಮತ್ತು ಕ್ಷಿಪಣಿ ದಾಳಿಗಳ ನಡುವೆ ವಿದ್ಯಾರ್ಥಿಗಳು ಬಂಕರು, ಭೂಗತ ರೈಲು ನಿಲ್ದಾಣಗಳಲ್ಲಿ ಜೀವ ಕೈಯಲ್ಲಿ ಹಿಡಿದುಕೊಂಡು ದಿನ ಕಳೆಯುತ್ತಿದ್ದರೆ, ಇನ್ನೂ ಕೆಲವರು ನೆರೆಯ ದೇಶಗಳಿಗೆ ವಲಸೆ ಹೋಗಿದ್ದಾರೆ. ಬಹುತೇಕ ದೇಶಗಳು ರಷ್ಯಾದ ಸರ್ವಾಧಿಕಾರಿ ಧೋರಣೆಯ ವಿರುದ್ಧ ನಿಲವು ತೆಗೆದುಕೊಂಡು ಅಮೆರಿಕ ಮತ್ತಿತರ ಪಾಶ್ಚಿಮಾತ್ಯ ರಾಷ್ಟ್ರಗಳ ಬಿಗಿ ಕ್ರಮಗಳಿಗೆ ಬೆಂಬಲವಾಗಿ ನಿಂತಿರುವಾಗ ತಟಸ್ಥ ನಿಲುವು ತೆಗೆದುಕೊಳ್ಳುವ ಮೂಲಕ ಭಾರತ, ಪರೋಕ್ಷವಾಗಿ ದಾಳಿಕೋರ ರಷ್ಯಾದ ಪರ ನಿಂತಿದೆ ಎಂಬ ಉಕ್ರೇನಿ ಯೋಧರು ಮತ್ತು ಸಾರ್ವಜನಿಕರ ಆಕ್ರೋಶಕ್ಕೂ ಭಾರತೀಯ ವಿದ್ಯಾರ್ಥಿಗಳು ಈಡಾಗುತ್ತಿದ್ದು, ಜನಾಂಗೀಯ ನಿಂದನೆ, ಕಿರುಕುಳಕ್ಕೂ ಈಡಾಗುತ್ತಿದ್ದಾರೆ ಎಂದು ವರದಿಗಳು ಹೇಳುತ್ತಿವೆ. ಅಂದರೆ ಭಾರತ ಸರ್ಕಾರ ಉಕ್ರೇನ್ ಮತ್ತು ರಷ್ಯಾ ಯುದ್ಧದ ವಿಷಯದಲ್ಲಿ ತೆಗೆದುಕೊಂಡ ರಾಜತಾಂತ್ರಿಕ ನಿಲುವು ಮತ್ತು ಅಮೆರಿಕ ಸೇರಿದಂತೆ ನ್ಯಾಟೋ ರಾಷ್ಟ್ರಗಳು ರಷ್ಯಾದ ಮೇಲೆ ಹೇರಿರುವ ಆರ್ಥಿಕ ದಿಗ್ಬಂಧನಕ್ಕೆ ಕೈಜೋಡಿಸದೇ ಇರುವ ನಿರ್ಧಾರಗಳು ಇದೀಗ ಯುದ್ಧ ಭೂಮಿಯಲ್ಲೂ ಮತ್ತು ಅಂತಾಷ್ಟ್ರೀಯ ಸಮುದಾಯದ ನಡುವೆಯೂ ತೀವ್ರ ಆತಂಕ ಮತ್ತು ಆಕ್ರೋಶಕ್ಕೆ ಕಾರಣವಾಗಿವೆ. ಒಂದು ಕಡೆ ಯುದ್ಧಗ್ರಸ್ತ ದೇಶದಿಂದ ತನ್ನ ನಾಗರಿಕರನ್ನು ವಾಪಸು ಕರೆಸಿಕೊಳ್ಳುವ ವಿಷಯದಲ್ಲಿ ಭಾರತ ಸರ್ಕಾರ ಉದಾಸೀನ ಧೋರಣೆಗೆ ವಿದ್ಯಾರ್ಥಿಗಳ ಜೀವ ಬಲಿಯಾಗುತ್ತಿದ್ದರೆ ಮತ್ತೊಂದು ಕಡೆ ತಟಸ್ಥ ನಿಲುವಿನ ಕಾರಣಕ್ಕೆ ದೇಶ ಭವಿಷ್ಯದಲ್ಲಿ ಎದುರಿಸಬೇಕಾಗುವ ಬಿಕ್ಕಟ್ಟುಗಳ ಕುರಿತ ಚರ್ಚೆಯೂ ನಡೆಯುತ್ತಿದೆ. ಈ ಬಿಕ್ಕಟ್ಟಿನ ಸಂದರ್ಭದಲ್ಲಿ ಭಾರತೀಯರ ರಕ್ಷಣೆಯ ವಿಷಯದಲ್ಲಿ ಸಕಾಲಿಕ ಮತ್ತು ಜಾಣ್ಮೆಯ ಕ್ರಮಗಳನ್ನು ತೆಗೆದುಕೊಳ್ಳುವಲ್ಲಿ ಎಡವಿದ ಮತ್ತು ಅಂತಹ ಯಡವಟ್ಟಿನ ಕಾರಣಕ್ಕೆ ಅಮಾಯಕ ವಿದ್ಯಾರ್ಥಿಗಳು ಜೀವ ಕಳೆದುಕೊಳ್ಳುತ್ತಿರುವ ಬಗ್ಗೆ ಜಾಲತಾಣದಲ್ಲಿ ವ್ಯಾಪಕ ಟೀಕೆಗಳು ಕೇಳಿಬರುತ್ತಿವೆ. ಹಾಗೇ ಚುನಾವಣಾ ಪ್ರಚಾರದಲ್ಲಿ ಮೈಮರೆತ ಮೋದಿ ಮತ್ತು ಅವರ ಸರ್ಕಾರವೇ ಈ ವಿದ್ಯಾರ್ಥಿಗಳ ಸಾವು ಮತ್ತು ನೋವಿಗೆ ಕಾರಣ. ಆದರೆ, ಅಂತಹ ತನ್ನ ಹೊಣೆಗೇಡಿತನವನ್ನು ಮರೆಮಾಚಲು ಒಂದೆರಡು ಸಾವಿರ ವಿದ್ಯಾರ್ಥಿಗಳನ್ನು ವಾಪಸು ಕರೆತಂದಿರುವುದನ್ನೇ ಐತಿಹಾಸಿಕ ಸಾಧನೆ ಎಂಬಂತೆ ಬಿಂಬಿಸುವ ನಾಚಿಕೆಗೇಡಿನ ಪ್ರಚಾರಪ್ರಿಯತೆ ತೋರುತ್ತಿರುವ ಬಗ್ಗೆಯೂ ಪ್ರಶ್ನೆಗಳು ಮೂಡಿವೆ.

ಮಾತಿಗೆ ಬೆಲೆ ಕೊಡದೆ ಸ್ವತಂತ್ರ ರಾಷ್ಟ್ರವಾಗಿ ಬೆಳೆಯುವದರಲ್ಲಿ ಉತ್ಸಾಹ ತೋರಿಸಿತು. ಆದರೆ ರಷ್ಯಾದ ಅಧ್ಯಕ್ಷರಿಗೆ ಇದು ಅಸಹನೀಯವಾಯಿತು .ಉಕ್ರೇನ್ ಐರೋಪ್ಯರಾಷ್ಟ್ರಗಳತ್ತ ವಾಲಿದರೆ ರಷ್ಯಾ ಏಷ್ಯಾಖಂಡಳತ್ತ ವಾಲಿದೆ .ತನ್ನನ್ನು ಏಷ್ಯಾಕಂಡದ ದಿಗ್ಗಜ ಎಂದೇ ಭಾವಿಸಿರುವ ರಷ್ಯಾ ಮತ್ತು ಚೀನಾ ಪರಸ್ಪರ ಸಹಕಾರವನ್ನು ಹೊಂದಿದೆ.ಉಕ್ರೇನ್ ಏಕಾಂಗಿಯಾಗಿದೆ.ಅದು ನ್ಯಾಟೋ ರಾಷ್ಟ್ರವಾಗಲೂ ಇಲ್ಲ ಐರೋಪ್ಯ ಒಕ್ಕೂಟಕ್ಕೂ ಸೇರಿಲ್ಲ, ಹೀಗೆ ಅತಂತ್ರದಲ್ಲಿರುವ ಉಕ್ರೇನ್ ಅನ್ನು ನುಂಗಿ ಹಾಕಲು ರಷ್ಯಾ ಅಧ್ಯಕ್ಷರು ಸರಿಯಾದ ಸಮಯವನ್ನೇ ಹುಡುಕಿದ್ದಾರೆ.

ದುರಾದೃಷ್ಟಕ್ಕೆ ಪ್ರಭಲ ಅಣ್ವಸ್ತ್ರ ರಾಷ್ಟ್ರವಾಗಿದ್ದ ಉಕ್ರೇನ್ ತಾನೂ ನ್ಯಾಟೋ ಸೇರುವ ಹೆಬ್ಬಯಕೆಯಲ್ಲಿ ಸಾವಿರಾರು ಅಣ್ವಸ್ತ್ರವನ್ನು ನಾಶ ಮಾಡಿದ್ದಲ್ಲದೆ ತಾನು ಬಳಸದ ಅಣು ಶಸ್ತ್ರಾಸ್ತ್ರ್ಗಳನ್ನು ರಷ್ಯಾಗೆ ಕೊಟ್ಟಿದೆ.ಈಗ ಅದೇ ಅಣ್ವಸ್ತ್ರಗಳನ್ನು ಬಳಸಿ ರಷ್ಯಾ ಉಕ್ರೇನ್ ಮೇಲೆ ದಾಳಿಗೆಮುಂದಾಗಿದೆ. ಇಂತಹ ದುರವಸ್ತೆಯಲ್ಲಿರುವ ಉಕ್ರೇನ್ ತನ್ನನ್ನು ತಾನು ರಕ್ಷಿಸಿಕೊಳ್ಳಲು ಅಲ್ಲಿನ ನಾಗರಿಕರ ನೆರವು ಪಡೆಯುತ್ತಿದೆ. ರಷ್ಯಾಗೆ ಹೋಲಿಸದರೆ ಅತ್ಯಂತ ಕಡಿಮೆ ಸೇನಾ ಸಾಮರ್ಥ್ಯದ ಉಕ್ರೇನ್ ಈಗ ತನ್ನ ಜನರನ್ನೇ ಉರಿದುಂಬಿಸಿ ರಷ್ಯಾ ಸೈನಿಕರೊಂದಿಗೆ ಹೋರಾಡಲು ಪ್ರಚೋದನೆ ನೀಡಿದೆ.

ಉಕ್ರೇನ್ ನಾಗರಿಕರು ಸಹ ಸೈನಿಕರಂತೆ ರಷ್ಯನ್ ಸೇನೆಯ ಮೇಲೆ ತಿರುಗಿಬಿದ್ದಿರುವುದರಿಂದ ರಷ್ಯಾಕ್ಕೆ ಒಂದಿಷ್ಟು ಹಿನ್ನಡೆಯುಂಟಾಗಿದೆ.ನಾಗರಿಕರ ನೆರವಿಲ್ಲದಿದ್ದರೆ ಮೊದಲೆರಡು ದಿನಗಳಲ್ಲೇ ಉಕ್ರೇನ್ ರಷ್ಯಾದ ಕೈವಶವಾಗುತ್ತಿತ್ತು.ಈಗ ಆಜನರ ಪ್ರತಿರೋಧದ ನಡುವೆ ರಷ್ಯಾ ಸೈನಿಕರು ಹೊಡೆದಾಡಬೇಕಾಗಿದೆ,ಇದರಿಂದಾಗಿ ಈ ಎರಡು ನಗರಗಳು ಇನ್ನೂ ರಷ್ಯಾದ ಕೈವಶವಾಗಿಲ್ಲ. ರಷ್ಯಾ ಸೇನೆಗೆ ಇದೊಂದು ದೊಡ್ಡ ಮುಖಬಂಗವಾಗಿದ್ದು ಉಕ್ರೇನ್ ವಶಪಡಿಸಿಕೊಳ್ಳುವುದು ಕಬ್ಬಿಣದ ಕಡಲೆಯಂತಾಗಿದೆ. ರಷ್ಯಾದ 5 ಸಾವಿರ ಸೈನಿಕರನ್ನು ಉಕ್ರೇನ್ ಕೊಂದು ಹಾಕಿದೆ ಹಾಗೂ ನೂರಾರು ಸೈನಿಕರನ್ನು ಸೆರೆ ಹಿಡಿದಿದೆ ,ಇದರಲ್ಲಿ ರಷ್ಯಾದ ಸೇನೆಯ ಮೇಜರ್ ಜನರಲ್ ಒಬ್ಬರೂ ಸೇರಿದ್ದಾರೆ.

### ಮಾಧ್ಯಮಗಳ ಪರ–ವಿರೋಧ

ರಷ್ಯಾ ತನಗೆ ವಿರುದ್ಧವಾದ ಅನೇಕ ಟಿವಿ ಚಾನೆಲ್‌ಗಳು ಹಾಗೂ ಪತ್ರಿಕೆಗಳನ್ನು ನಿಬಂಧಿಸಿದೆ. ಇಲ್ಲೂ ಸಹ ವರ್ಣಬೇದ ನೀತಿ ಮುನ್ನೆಲೆಗೆ ಬಂದಿದೆ ಏಷ್ಯಾದವರನ್ನು ಕರಿಯರೆಂದೂ ಯುರೋಪಿಯನ್ನರನ್ನು ಬಿಳಿಯರೆಂದೂ ಎರಡು ಭಾಗಗಳನ್ನಾಗಿ ಮಾಡಿ ರಷ್ಯಾವನ್ನು ಏಷ್ಯಾಕಡೆಗೂ ಉಕ್ರೇನ್ ಅನ್ನು ಯುರೋಪ್ ಕಡೆಗೂ ತಳ್ಳಲಾಗಿದೆ. ಆದ್ದರಿಂದ ಮಾಧ್ಯಮಗಳು ಯುರೋಪ್ ಪರವಾಗಿದ್ದು, ಉಕ್ರೇನ್‌ಗೆ ಪ್ರೋತ್ಸಹ ನೀಡುತ್ತಿವೆ ಎಂದು ಕೆಲವರು ವಾದಿಸುತ್ತಾರೆ. ರಷ್ಯಾಪರವಾದವರು ಬಹಳ ಕಡಿಮೆ ಮಾಧ್ಯಮಗಳಿವೆ ಎಂದು ವಾದಿಸಲಾಗುತ್ತಿದೆ. ಅಂತೂ ಇದೊಂದು ಬಿಳಿಯರ ಕರಿಯರ ಯುದ್ಧವಾಗಿ ಮಾಧ್ಯಮ ಮಾರ್ಪಡಿಸಿದೆ.

### ಉಕ್ರೇನ್‌ಗೆ ಬೆಂಬಲ

27 ನ್ಯಾಟೋ ರಾಷ್ಟ್ರಗಳು ಸಂಪೂರ್ಣವಾಗಿ ಉಕ್ರೇನ್‌ಗೆ ಬೆಂಬಲ ನೀಡಿದೆ. ಅದೆಲ್ಲದೆ ಇನ್ನೂ ಹತ್ತಿಪ್ಪತ್ತು ಪ್ರಭಲ ದೇಸಗಳು ಸಹ ಉಕ್ರೇನ್‌ಗೆ ಮದ್ದು ಗುಂಡುಗಳ ವಿಮಾನಗಳ ಹಣಕಾಸಿನ ನೆರವು ನೀಡುವುದಾಗಿ ಪ್ರಕಟಿಸಿದೆ. ಅನೇಕ ರಾಷ್ಟ್ರಗಳು ರಷ್ಯಾದ ವಿಮಾನಗಳು ಸಂಚರಿಸದಂತೆ ತಮ್ಮ ದೇಶದ ವಾಯು ಮಾರ್ಗಗಳನ್ನು ಪ್ರತಿಬಂಧಿಸಿ ಅಮೆರಿಕಾ 53 ಮಿನಿಯನ್ ಡಾಲರ್‌ಗಳ ಆರ್ಥಿಕ ನೆರವು ಪ್ರಕಟಿಸಿದೆ. ಈ ಎಲ್ಲಾ ದೇಶಗಳು ರಷ್ಯಾದ ಬ್ಯಾಂಕ್‌ಗಳ ವ್ಯವಹಾರವನ್ನು ನಿಬಂಧಿಸಿವೆ. ಇದರಿಂದಾಗಿ ರಷ್ಯಾದಲ್ಲಿ ಆರ್ಥಿಕ ಮುಗ್ಗಟ್ಟು ಉಂಟಾಗಬಹುದು. ಈಗಾಗಲೇ ರಷ್ಯನ್ ಬ್ಯಾಂಕುಗಳ ಮೇಲೆ ಭಾರೀ ಒತ್ತಡ ಬಿದ್ದಿದ್ದು ರಷ್ಯನ್‌ನಲ್ಲಿ ಹಣ ವಾಪಾಸ್ ತಗೆದುಕೊಳ್ಳಲು ಜನರು ಉದ್ದನೆಯ ಸಾಲಿನಲ್ಲಿ ನಿಲ್ಲುತ್ತಿದ್ದಾರೆ. ಇದೇ ವೇಳೆ ಉಕ್ರೇನ್ ರಷ್ಯಾವನ್ನು ವಿಶ್ವಸಂಸ್ಥೆಯ ಭದ್ರತಾ ಮಂಡಳಿ ಸದಸ್ಯತ್ವದಿಂದ ವಜಾ ಮಾಡುವಂತೆ ಆಗ್ರಹಿಸಿದೆ.ಈ ನಡುವೆ ಉಕ್ರೇನ್‌ನ ಸುಮಾರು 5 ಲಕ್ಷ ಜನ ನೆರೆ ದೇಶಗಳಲ್ಲಿ ನಿರಾಶ್ರಿತರಾಗಿ ಆಶ್ರಯ ಪಡೆದಿದ್ದಾರೆ. ಗಡಿಗೆ ತೆರಳಿದ ಜನರನ್ನು ಆ ದೇಶಗಳು ಸ್ವಾಗತಿಸಿ ಭಾರತದ ನಿಲುವು ಮೋದಿ ಸರ್ಕಾರ ಎರಡು ದೇಶಗಳ ನಡುವೆ ಮಾತುಕತೆ ನಡೆಸಿದೆ. ಶಾಂತಿ ಸ್ಥಾಪಿಸಲು ಪ್ರಯತ್ನಿಸಬೇಕೆಂದು ಪ್ರಧಾನಿ ಸೂಚಿಸಿರುವುದು ಒಳ್ಳೆಯ ಬೆಳವಣಿಗೆಯಾದರೂ ಅವರಿಬ್ಬರು ಮೋದಿಯ ಮಾತನ್ನು ಕೇಳುವ ಸ್ಥಿತಿಯಲ್ಲಿ ಇಲ್ಲ. ಏಕೆಂದರೆ ಪುಟಿನ್ ಸರ್ವಾಧಿಕಾರರಿಯಂತೆ ವರ್ತಿಸುತ್ತಿರುವುದು ಎಲ್ಲರಿಗೂ ಗೊತ್ತಿರುವು ವಿಚಾರ ಆದರೆ



ಉಕ್ರೇನ್ ಭಾರತ ತನ್ನ ಬೆಂಬಲಕ್ಕೆ ಬರಬಹುದೆಂದು ನಿರಿಕ್ಷಿಸಿತ್ತು ಆದರೆ ಭಾರತ ಮನವಿಯನ್ನು ಪುಟಿನ್ ಕಿವಿಗೆ ಹಾಕಿಕೊಳ್ಳಲು ತಯಾರಿ ಇಲ್ಲ ಅಮೆರಿಕಾ ಸಹ ಭಾರತಕ್ಕೆ ವಿಶ್ವಸಂಸ್ಥೆಯಲ್ಲಿ ರಷ್ಯಾ ವಿರುದ್ಧ ಮತಚಲಾಯಿಸುವಂತೆ ಸೂಚಿಸಿದ್ದರೂ ಭಾರತ ಮತದಾನದಲ್ಲಿ ಭಾಗವಹಿಸದೆ ತಟಸ್ಥವಾಯಿತು. ಇದರಿಂದಾಗಿ ತಿಳಿದು ಬರುವ ಅಂಶವೆಂದರೆ ಭಾರತ ರಷ್ಯಾ ಮಾತನ್ನು ಉಲ್ಲಂಘಿಸುವುದಿಲ್ಲ ಎಂಬುದು. ಏಕೆಂದರೆ ಭಾರತ ಮತ್ತು ರಷ್ಯಾ ನಡುವೆ ಬಹು ದೊಡ್ಡ ರಕ್ಷಣಾ ಒಪ್ಪಂದವಿದೆ ಭಾರತಕ್ಕೆ ಸೇನಾ ಸಲಕರಣೆಗಳನ್ನು ಯುದ್ಧ ವಿಮಾನಗಳನ್ನು ಪೂರೈಸುವಲ್ಲಿ ಅರ್ಧಕ್ಕಿಂತಲೂ ಹೆಚ್ಚು ಪಾಲನ್ನು ರಷ್ಯಾ ಒದಗಿಸುತ್ತಿದೆ. ಹೀಗಾಗಿ ರಷ್ಯಾಕ್ಕೆ ಭಾರತ ಇರಿಸು–ಮುರಿಸು ಉಂಟು ಮಾಡುವುದು ಸಲ್ಲದು.

ಇದೆಲ್ಲದಕ್ಕಿಂತಲು ಹೆಚ್ಚಾಗಿ ಚೀನಾ ಮತ್ತು ರಷ್ಯಾ ಕಮನೂಷ್ಟ್ ರಾಷ್ತ್ರಗಳಾಗಿದ್ದು ಅತ್ಯಂತ ಸನಿಹದಲ್ಲಿದೆ ಭಾರದ ಗಡಿಯಲ್ಲಿ ಪದೇ ಪದೇ ಚೀನಾ ತನ್ನ ಸಾಹಸವನ್ನು ತೋರಿಸುತ್ತಲೇ ಇರುವಾಗ ಭಾರತಕ್ಕೆ ರಷ್ಯಾದಂತಹ ಪ್ರಭಲ ಮಿತ್ರನನ್ನೊಬ್ಬನನ್ನು ಕಳೆದುಕೊಳ್ಳುವುದು ಸಾಧ್ಯವಿಲ್ಲ ಚೀನಾ ಎಲ್ಲಿಯವರೆಗೆ ರಷ್ಯಾದ ಮಾತು ಕೇಳುತ್ತದೋ ಅಲ್ಲಿಯವರೆಗೆ ನಮಗೆ ಅವರಿಂದ ಯುದ್ಧ ಭಯ ಕಡಿಮೆ ಜೊತೆಗೆ ಪಾಕಿಸ್ತಾನವನ್ನು ಚೀನಾ ಕೈಗೊಂಬೆ ಮಾಡಿಕೊಂಡಿದೆ, ಒಂದು ವೇಳೆ ರಷ್ಯಾ ಭಾರತದ ಹಿತಕಾಯದಿದ್ದರೆ ಈ ಮೂರು ದೇಶಗಳು ಒಂದಾಗಿ ಭಾರತದ ಮೇಲೆ ಮುಗಿಬಿದ್ದರೆ ಊಹಿಸಲಸಾಧ್ಯವಾದ ಸಂದರ್ಭ ಏರ್ಪಡುತ್ತದೆ. ಇಂತಹ ಪರಿಸ್ಥಿತಿಯನ್ನು ಭಾರತ ಮೈ ಮೇಲೆ ಎಳೆದುಕೊಳ್ಳುವುದು ಬೇಡ ಎನ್ನುವುದಾದರೆ ರಷ್ಯಾ ಪರವಾಗಿಯೇ ನಿಲ್ಲಬೇಕಾಗುತ್ತದೆ.

● 12ನೇ ಪುಟಕ್ಕೆ...

# ರೈಸ್ ಫುಲ್ಲಿಂಗ್ ಆಸೆಗೆ ಹೆಣ ಉರುಳಿಸಿ ಜೈಲು ಪಾಲಾದ ಮಾಜಿ ಶಾಸಕರ ಪುತ್ರ!!

● ಪರಶಿವ ಧನಗೂರು









ಭೂಗತ ಮಾರುಕಟ್ಟೆಯಲ್ಲಿ ಆರ್.ಪಿ. ಎಂದೇ ಕೋಡ್ ವರ್ಡ್ ನಲ್ಲಿ ಪ್ರಚಲಿತವಿರುವ ರೈಸ್ ಫುಲ್ಲಿಂಗ್ ಎಂಬ ತಾಮ್ರದ ವಸ್ತುವಿನ ಹೆಸರಲ್ಲಿ ವಂಚಕರ ಜಾಲಗಳು ರಾಜಕಾರಣಿಗಳು, ಸಿನಿಮಾ ರಂಗದವರು, ಶ್ರೀಮಂತ ಬಿಸಿನೆಸ್ ಮ್ಯಾನ್ ಗಳನ್ನೇ ಟಾರ್ಗೆಟ್ ಮಾಡಿಕೊಂಡು ಬಲೆಬೀಸಿ ಕಾದಿದ್ದಾರೇ! ಈ ಬಲೆಗೆ, ರೈಸ್ ಫುಲ್ಲಿಂಗ್ ಆಸೆಯ ಸುಳಿಗೆ ಸಿಲುಕಿ ಮಾಜಿ ಶಾಸಕರ ಸುಪುತ್ರನೊಬ್ಬ ಕೊಲೆಮಾಡಿ ಜೈಲು ಪಾಲಾಗಿದ್ದಾನೆ! ಚಾಮರಾಜನಗರ ಚನ್ನಪ್ಪನಪುರದ ಚೋಳರ ಕಾಲದ ವೀರಭದ್ರೇಶ್ವರ ದೇವಾಲಯದ ಕಳಸದ ಮೆಲೆ ಕಣ್ಣು ಹಾಕಿ ರೈಸ್ ಫುಲ್ಲಿಂಗ್ ವೀಡಿಯೋ ಚಿತ್ರೀಕರಿಸಿದ್ದವರನ್ನು ಇತ್ತೀಚೆಗಷ್ಟೇ ಪೊಲೀಸರು ಬಂಧಿಸಿ ಜೈಲಿಗಟ್ಟಿದ್ದರು! ಆಗಲೇ ಕೊಳ್ಳೇಗಾಲ, ತಮಿಳುನಾಡಿನ ಗಡಿಪ್ರದೇಶಗಳಲ್ಲಿ ಚಾಮರಾಜನಗರ, ಮೈಸೂರು, ಮಂಡ್ಯ ಜಿಲ್ಲೆಯ ಸುತ್ತಮುತ್ತ ಈ ರೈಸ್ ಫುಲ್ಲಿಂಗ್ ದಂಧೆ ನಡೀತಿದೆ ಎಂಬುದು ಸಾಬೀತಾಗಿತ್ತು. ಒಂದು ಕಾಲದಲ್ಲಿ ಮಾಟಕೂಟ, ಜ್ಯೋತಿಷ್ಯಕ್ಕೆ ಹೆಸರುವಾಸಿ ಯಾಗಿದ್ದ ಕೊಳ್ಳೇಗಾಲದ ಮಾಂತ್ರಿಕರನ್ನು ನೆನೆದು ಕೆಲವರು ಈಗಲೂ ಹೆದರುತ್ತಾರೆ! ಕಣ್ ಕಟ್ ವಿದ್ಯೆಯ ವಾರಸುದಾರರು ನಾವೇ, ನಮಗೇ ದೈವೀ ಶಕ್ತಿಯ ಅನುಗ್ರಹವಾಗಿದೆ! ದುಷ್ಟಶಕ್ತಿಗಳು ನಮ್ಮ ಕೈವಶವಾಗಿವೆ! ಎಂದು ಮೂಢನಂಬಿಕೆಯ ಮಂದಿಯನ್ನು ಮರಳುಮಾಡುತ್ತಿದ್ದ ತಾಂತ್ರಿಕ ಸಾದಕರು ಈಗ ಕಡಿಮೆಯಾಗಿದ್ದಾರೆ. ಕೆಲವು ನಕಲಿ ಜ್ಯೋತಿಷಿಗಳ, ನಿಂಬೆಹಣ್ಣಿನ ಮಾಂತ್ರಿಕರ ಕೊಳ್ಳೆಗಾಲದ ಕಾಡುಗಳಲ್ಲಿ ನರ ಹಂತಕ ವೀರಪ್ಪನ್ ಇದ್ದಾಗ ನಡೆಯುತ್ತಿದ್ದ ಆನೆ ದಂತ ಮಾರಾಟ ಜಾಲ, ಗಂಧದ ಮರ ಕಳ್ಳಸಾಗಾಣಿಕೆ, ಜಿಂಕೆ ಕಡವೆ ಕೊಂಬು, ಹುಲಿ ಚರ್ಮ ಕಳ್ಳಸಾಗಾಣಿಕೆ, ಈಗಲೂ ಏನೂ ಸಂಪೂರ್ಣವಾಗಿ ನಿಂತಿಲ್ಲ!


ಮಾಜಿ ಶಾಸಕನ ಪುತ್ರ ಶ್ರೀಕಾಂತ್

## ರೈಸ್ ಪುಲ್ಲಿಂಗ್ ಎಂಬ ದೋ ನಂಬರ್ ದಂಧೆ ಜಾಲ

ಮರಿವೀರಪ್ಪನ್ ಗಳ ಹಾವಳಿಗೆ ಮುತ್ತತ್ತಿ ಕಾವೇರಿ ವನ್ಯಜೀವಿ ಅಭಯಾರಣ್ಯದಲ್ಲಿರುವ ರಕ್ತಚಂದನದ ಅಮೂಲ್ಯ ಮರಗಳೂ ನಾಪತ್ತೆಯಾಗುತ್ತಿವೆ! ಕೊಳ್ಳೇಗಾಲದ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇತ್ತೀಚೆಗೆ ಈ ಡಬಲ್ ಇಂಜಿನ್ (ಎರಡು ತಲೆ ಹಾವು)ಕಪ್ಪು ಹರಿಸಿನ, ಕೆಂಪು ಕತ್ತಾಳೆ, ರೈಸ್ ಫುಲ್ಲಿಂಗ್ ಹೆಸರಿನ ದೋ ನಂಬರ್ ದಂಧೆಯ ಜಾಲ ಅವ್ಯಾಹತವಾಗಿ ನಡೆಯುತ್ತಿರುವ ಗುಮಾನಿ ಇತ್ತು. ಈಗ ವಂಚಕ ಹನೂರಿನ ಸಲೀಂ ಕೊಲೆಯಿಂದ ಅದು ನಿಜವೆಂಬುದು ಸಾಬೀತಾಗಿದೆ. ಮಳವಳ್ಳಿ ತಾಲ್ಲೂಕಿನ ಪಂಡಿತಹಳ್ಳಿ ಬಳಿ ಫೆಬ್ರವರಿ 9 ರಂದು ಬೇರೆಕಡೆ ಕೊಲೆಮಾಡಿ ತಂದು ಟಾರ್ಪಾಲಿನ್ ನಲ್ಲಿ ಸುತ್ತಿಟ್ಟಿದ್ದ ಅಪರಿಚಿತ ಶವವನ್ನು ರಸ್ತೆ ಪಕ್ಕದಲ್ಲಿ ಕಂಡ ಗ್ರಾಮಸ್ಥರು ನೋಡಿ ಮಳವಳ್ಳಿ ಪೊಲೀಸರಿಗೆ ಸುದ್ದಿ ಮುಟ್ಟಿಸಿದ್ದರು. ಗ್ರಾಮಾಂತರ ಠಾಣೆಯ ಸರ್ಕಲ್ ಇನ್ಸ್ಪೆಕ್ಟರ್ ಎ.ಕೆ. ರಾಜೇಶ್ ಪ್ರಕರಣ ದಾಖಲಿಸಿಕೊಂಡು ತನಿಖೆ ಮಾಡಬೇಕೆನ್ನುವಷ್ಟರಲ್ಲಿ ಮೂವರು ವ್ಯಕ್ತಿಗಳು ಠಾಣೆಗೇ ಖುದ್ದು ಹಾಜರಾಗಿ ಆ ಶವವಾಗಿರುವ ವ್ಯಕ್ತಿಯನ್ನು ಕೊಂದವರು ನಾವೇ! ಕೊಲೆಯಾಗಿರುವಾತ ಕೊಳ್ಳೇಗಾಲ ಮೂಲದ ಸಲೀಂ, ರೈಸ್ ಫುಲ್ಲಿಂಗ್ ದಂಧೆಯಲ್ಲಿ ವ್ಯತ್ಯಾಸವಾಗಿ ಆಕಸ್ಮಿಕ ಹೊಡೆದಾಟದಲ್ಲಿ ಕೊಲೆಯಾಗಿ ಹೋದ! ಎಂದು ಹೇಳಿಕೆ ನೀಡಿ ಅಚ್ಚರಿ ಮೂಡಿಸಿದ್ದರು! ಆದರೇ ಪಂಡಿತನಹಳ್ಳಿ ಬಳಿ ಬಂದು ಬಿದ್ದಿದ್ದ ಶವದ ಕತೆ ಬೇರೆಯದೇ ನಿಗೂಢ ತಿರುವುಗಳನ್ನು ಪಡೆದು ಮಳವಳ್ಳಿ ಉಪ ವಿಭಾಗದ ಪೊಲೀಸ್ ವೃತ್ತನಿರೀಕ್ಷರ ಬುಡಕ್ಕೆ ಬಂದು ನಿಂತಿದೆ!


ತನಿಖಾಧಿಕಾರಿ ಇನ್ಸ್ಪೆಕ್ಟರ್ ರಾಜೇಶ್

## ಮಾಜಿ ಶಾಸಕ ಪುತ್ರನ ಅಸಲಿ ಮುಖವಾಡ ಬಯಲು

ಕೆ.ಆರ್.ಪೇಟೆಯ ಮಾಜಿ ಶಾಸಕ ಕೆ.ಬಿ.ಚಂದ್ರಶೇಖರ್ ಪುತ್ರ ದಂತವೈದ್ಯ ಶ್ರೀಕಾಂತ್ ನ ಅಸಲಿ ಮುಖವಾಡ ಕಳಚಿ ಬಿದ್ದಿದೆ! ನಾವೇ ರೈಸ್ ಫುಲ್ಲಿಂಗ್ ಡೀಲರ್, ವಂಚಕ ಸಲೀಂ ಕೊಲೆಗಡುಕರು ಎಂದು ಶರಣಾಗಿದ್ದ ಆನಂದ, ಮಂಜುನಾಥ, ವಜ್ರಮುನಿಯ ನಡವಳಿಕೆ, ವಿಚಾರಣಾ ಹೇಳಿಕೆಗಳ ಮೇಲೆ ಅನುಮಾನ ಬಂದು ಮಳವಳ್ಳಿಯ ಗ್ರಾಮಾಂತರ ಠಾಣೆಯ ಪೊಲೀಸ್ ಇನ್ಸ್ಪೆಕ್ಟರ್ ರಾಜೇಶ್ ಮಳವಳ್ಳಿ ಡಿವೈಎಸ್ಪಿಯವರ ಮಾರ್ಗದರ್ಶನದಲ್ಲಿ ಮಂಡ್ಯ ಎಸ್ಪಿ ಯತೀಶ್ ರವರ ನೇತೃತ್ವದಲ್ಲಿ ನಿಗೂಢ ಕೊಲೆ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ, ಕಾರ್ಯಾಚರಣೆ ನಡೆಸಿ, ಬೇಧಿಸಿ ಕೆ.ಆರ್.ಪೇಟೆ ಮಾಜಿ ಶಾಸಕ ಕೆ.ಬಿ.ಚಂದ್ರಶೇಖರ್ ಪುತ್ರ ದಂತವೈದ್ಯ ಶ್ರೀಕಾಂತ್ ನನ್ನು ಸೇರಿ ಒಟ್ಟು ಎಂಟು ಜನರನ್ನು(ಆನಂದ್, ಮಂಜುನಾಥ ಅಲಿಯಾಸ್ ಮಂಜು, ವಜ್ರಮುನಿ ಅಲಿಯಾಸ್ ವಿಕ್ಕಿ, ಅಭಿಷೇಕ್, ಕುಮಾರ, ಪುನೀತ್, ಶಿವ ಅಲಿಯಾಸ್ ಸೋಮಶೇಖರ್) ಇದುವರೆಗೂ ಬಂಧಿಸಿದ್ದಾರೆ. ಇನ್ನೂ ಎಂಟು ಜನರು ಈ ಕೊಲೆ ಪ್ರಕರಣದಲ್ಲಿ ಭಾಗಿಯಾಗಿರುವ ಸಾಧ್ಯತೆ ಇರುವುದರಿಂದ ಉಳಿದ ಅಪರಾಧಿಗಳ ಬಂಧನಕ್ಕೂ ಬಲೆಬೀಸಲಾಗಿದೆಯಂತೆ. ತಾಮ್ರದ (ರೈಸ್ ಫುಲ್ಲಿಂಗ್) ಚಂಬಿನ ಹಿಂದೆ ಬಿದ್ದು ಕೊಲೆಮಾಡಿ ಜೈಲು ಪಾಲಾಗಿರುವ ಮಾಜಿ ಶಾಸಕರ ಸುಪುತ್ರ ಹೇಳಿರುವುದೇನೆಂದರೇ ಕೊಲೆಯಾಗಿರುವ ಕೊಳ್ಳೇಗಾಲ ಮೂಲದ ಸಲೀಂ ಬಳಿಯಿದ್ದ ರೈಸ್ ಫುಲ್ಲಿಂಗ್ ಚಂಬನ್ನು ಪಡೆಯಲು 500ಕೋಟಿರೂಪಾಯಿಗಳ ವ್ಯವಹಾರದ ಒಪ್ಪಂದ, ಮಾತುಕತೆ ನಡೆದಿತ್ತಂತೆ, ಈಗಾಗಲೇ 5 ಲಕ್ಷ ರೂಪಾಯಿ ಅಡ್ವಾನ್ಸ್ ಹಣವನ್ನು ಶಾಸಕರ ಮಗ ಡಾಕ್ಟರ್ ಶ್ರೀಕಾಂತ್ ಬಳಿ ವಂಚಕ ಸಲೀಂ ಪಡೆದಿದ್ದನಂತೇ, ಫೆಬ್ರವರಿ 7ನೇ ತಾರೀಖು ಕೊಲೆಗಾರ ಶ್ರೀಕಾಂತ್ ರೈಸ್ ಫುಲ್ಲಿಂಗ್ ಡೀಲರ್ ಸಲೀಂ ನನ್ನು ಮೈಸೂರಿನ ಇಲವಾಲ ಬಳಿ ಕರೆಸಿ ರೈಸ್ ಫುಲ್ಲಿಂಗ್ ಚಂಬಿನ ಬಗ್ಗೆ ಚರ್ಚೆ ನಡೆಸುವ ವೇಳೆ ಮಾತಿಗೆ ಮಾತು ಬೆಳೆದು ಗಲಾಟೆಯಲ್ಲಿ ಸಲೀಂ ಸ್ಥಳದಲ್ಲಿ ಮೃತಪಟ್ಟನಂತೇ! ಹಾಗೇ ಕೊಲೆಯಾದ ಸಲೀಂ ನನ್ನು ಕಾರಿನ ಡಿಕ್ಕಿಯಲ್ಲಿ ತುಂಬಿಕೊಂಡು ದಿಕ್ಕೇತೋಚದೆ ಅಲೆಯುತ್ತಿದ್ದ ಶ್ರೀಕಾಂತನಿಗೆ ಅಚಾನಕ್ಕಾಗಿ ದೇವರಂತೆ ಥಟ್ ಅಂತ ನೆನಪಾದವರು ತಮ್ಮದೇ ಊರಿನಲ್ಲಿ ಈ ಹಿಂದೆ ಸಬ್ ಇನ್ಸ್ಪೆಕ್ಟರ್ ಆಗಿದ್ದ ವ್ಯಕ್ತಿ, ಆತ ಈಗ ಮಳವಳ್ಳಿಯಲ್ಲಿ ಉಪವಿಭಾಗದ ಪೊಲೀಸ್ ವೃತ್ತನಿರೀಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅವರನ್ನು ಕೇಳಿದರೆ ಏನಾದರೂ ಸಹಾಯ, ಉಪಕಾರ ಸಿಗಬಹುದೇ ಎಂದವನಿಗೆ ಭರ್ಜರಿ ಪ್ಲಾನ್ ಒಂದನ್ನೇ ಮಳವಳ್ಳಿ ತಾಲೂಕಿನ ಉಪವಿಭಾಗದ ಪೊಲೀಸ್ ವೃತ್ತನಿರೀಕ್ಷರು ಮಾಡಿಕೊಟ್ಟಿದ್ದರೂ ಎನ್ನುತ್ತಿವೆ ಮೂಲಗಳು. ಗುಸುಗುಸು ಗಾಳಿಸುದ್ದಿಗಳು. ಮಾಜಿ ಶಾಸಕರ ಮಗ ಶ್ರೀಕಾಂತ್ ಮತ್ತು ಆಪಾದನೆ ಹೊತ್ತಿರುವ ಇನ್ಸ್ಪೆಕ್ಟರ್ ಧನರಾಜ್ ಅಂದುಕೊಂಡಂತೆಯೇ ನಡೆದು ಹೋಗಿದ್ದರೇ ಈಗ ಸಲೀಂ ಕೊಲೆಯ ಕೇಸು ಹಳ್ಳಹಿಡಿದು, ಮೊದಲಿಗೆ ತಾವೇ ಮಳವಳ್ಳಿ ಠಾಣೆಗೆ ಶರಣಾಗಿದ್ದ ಆನಂದ, ಮಂಜುನಾಥ ವಜ್ರಮುನಿ ಹೆಸರಲ್ಲಿ ದಾಖಲಾಗಿ ಮುಚ್ಚಿ ಹೋಗುತ್ತಿತ್ತು. ರಾತ್ರಿಯ ಕತ್ತಲು ಹಾದಿ ತಪ್ಪಿಸಿ, 50ಮೀಟರ್ ಡಿಸ್ಟೆನ್ಸ್ ನಲ್ಲಿ ವ್ಯತ್ಯಾಸವಾಗಿ ಸಲೀಂ ನ ಶವ ಎದ್ದು ಕುಳಿತು ಅಸಲೀ ಕಥೆ ಹೇಳುತ್ತಿದೆ! ಅಂತೆ ಕಂತೆ ಊಹೆಯಂತೆ ಆಗಿರುವುದು ಇಷ್ಟೇ.. ಕೊಳ್ಳೇಗಾಲದ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಅರಣ್ಯಾಧಿಕಾರಿಗಳು, ಫಾರೆಸ್ಟ್ ವಾಚರ್ ಗಳನ್ನು ಕೈಬಿಸಿಮಾಡಿ ಸರಿಮಾಡಿಟ್ಟುಕೊಂಡಿದ್ದ ಈ ರೈಸ್ ಫುಲ್ಲಿಂಗ್ ಡೀಲರ್ ಸಲೀಂ ಬೆಂಗಳೂರು–ಮೈಸೂರು ಕಡೆಗಳಿಂದ ಬರುವ ದೋ ನಂಬರ್ ದಂಧೆಯ ಮಧ್ಯವರ್ತಿಗಳ ಪಾಲಿನ ಏಜೆಂಟ್, ಡೀಲರ್, ಗೈಡ್ ಎಲ್ಲಾ ಆಗಿದ್ದ. ಕೆಜಿಗೆ ಇಪ್ಪತ್ತೈದು ಸಾವಿರ ರೂಪಾಯಿಗೆ ಕಾಪರ್ ವೈರ್ ಇಟ್ಟರೆ ಕರೆಂಟ್ ಪಾಸ್ ಆಗುವ ಕೆಂಪು ಕತ್ತಾಳೆ ಕೊಡ್ತೀನಿ ಬನ್ನಿ ಅಂತಿದ್ದ! ಮೆಡಿಕಲ್ ರೀಸರ್ಚ್ ಗಾಗಿ ಕಪ್ಪು ಕಾಡು ಹರಿಸಿನ ಬೇಕಾದರೆ ಬನ್ನಿ ಬಂಡಿಪುರ ಫಾರೆಸ್ಟ್ ಗೆಸ್ಟ್ ಹೌಸ್ ನಲ್ಲೇ ರೂಮು ಹಾಕಿಸಿ ಹುಡುಕಿ ಕೊಡ್ತೀನಿ ಅಂತಿದ್ದ! ಬೆಂಕಿಯಲ್ಲಿ ಕರಗಿಸಿ ಪಾದರಸ ತೆಗೆಯುವ ಮೂರು ಸುತ್ತಿನ ನಿಂಬೆ(ಒಂದು ನಿಂಬೆ ಹಣ್ಣಿನ ಬೆಲೆ ಎರಡುವರೆ ಲಕ್ಷವಂತೇ!) ಹಣ್ಣನ್ನು ಹುಡುಕಿಕೊಂಡು ಚಾಮರಾಜನಗರ ಕಾಡೆಲ್ಲಾ ಅಲೆಯುತ್ತಿದ್ದ! ರಕ್ತಚಂದನ, ಆನೆ,ಹುಲಿ ಕಾಡುಪ್ರಾಣಿಗಳ ಚರ್ಮ,ಕೊಂಬುಗಳ ಕಳ್ಳ ಸಾಗಾಣಿಕೆಯಂತಹ ಸ್ಮಗ್ಲಿಂಗ್ ಜಾಲದ ಕಿಂಗ್ ಪಿನ್ ಖತರ್ನಾಕ್ ಖದೀಮ ಸಲೀಂನ ಸುಳ್ಳಿನ ವ್ಯಾಪಾರದ ಬುಟ್ಟಿಯಲ್ಲಿ ಇನ್ನೂ ಹಲವಾರು ಐಟಮ್ ಗಳಿದ್ದವು. ಅದರಲ್ಲಿ ಈ ರೈಸ್ ಫುಲ್ಲಿಂಗ್ ಕೂಡ ಒಂದು.





Dysp ಲಕ್ಷ್ಮೀಪ್ರಸಾದ್

## ಪೊಲೀಸ್ ಅಧಿಕಾರಿಗಳು ಶಾಮೀಲು


ಇತ್ತೀಚೆಗೆ ರಾಜಕಾರಣಿಗಳ ಜೊತೆಗೆ ಪೊಲೀಸ್ ಅಧಿಕಾರಿಗಳು, ಕೂಡ ಈ ಕರಾಳ ರೈಸ್ ಫುಲ್ಲಿಂಗ್ ದಂಧೆಯಲ್ಲಿ ತೊಡಗಿರುವ ಶಂಕೆ ಇದೆ. ಇಸ್ರೋ, ನಾಸಾ ಹೆಸರಿನಲ್ಲಿ ಸಾವಿರಾರು ಕೋಟಿ ರೂಪಾಯಿಗಳ ವ್ಯವಹಾರದ ಹೆಸರೇಳಿ ಕೊಂಡು, ಈ ಸಿಡಿಲು ಹೊಡೆದ ತಾಮ್ರದ ಚೆಂಬು ಎಲ್ಲೋ ಇದೆ ಎಂದೂ, ಅದು ಇದೇ ಎಂದು ನಂಬಿಸುತ್ತಾ, ಇದೂ ಕೋಟ್ಯಂತರ ರೂಪಾಯಿ ಬೆಲೆಬಾಳುವ, ಉಪಗ್ರಹ ಉಡಾವಣೆಗೆ ಬೇಕಾಗುವ ಮೆಟೀರಿಯಲ್ ಎಂತಲೂ ನಂಬಿಸಿ ವ್ಯವಸ್ಥಿತವಾಗಿ ಮೋಸಮಾಡಿ ಲಾಗುತ್ತಿದೆ. ಇಂತಹ ಮೋಸದ ಜಾಲದ ಸುಳಿಗೆ ಹೇಗೋ ಸಿಲುಕಿಕೊಂಡಿರುವ ಕೆ.ಆರ್.ಪೇಟೆಯ ಮಾಜಿ ಶಾಸಕರ ಪುತ್ರ ದಂತವೈದ್ಯ ಶ್ರೀಕಾಂತ್ ನಿಗೆ ಡೆಮಾ ಫೀಸ್(ಡಿ –ಪೀಸ್) ತೋರಿಸಿ 5 ಲಕ್ಷ ಹಣ ಪಡೆದಿರುವ ವಂಚಕ ಸಲೀಂ ನಂತರ ಮತ್ತಷ್ಟು ಹಣ ಪಡೆದು ಡೀ ಪೀಸ್ (ಡೂಪ್ಲಿಕೇಟ್ ಪೀಸ್) ಅನ್ನೇ ಓ ಪೀಸ್ (ಒರಿಜಿನಲ್ ಪೀಸ್) ಮೆಟೀರಿಯಲ್ ಎಂದು ನಂಬಿಸಿ ಮಾರಾಟ ಮಾಡಿ ವಂಚಿಸಿರುವ ಸಾಧ್ಯತೆ ಇದೆ! ಸಲೀಂಗೆ ಹಾಗೆ ಮೋಸ ಮಾಡದೆ ಬೇರೆ ದಾರಿಯೆ ಇರುವುದಿಲ್ಲ! ಏಕೆಂದರೆ ಈ ದಂಧೆಯಲ್ಲಿ ಅಸಲಿಗೇ ಓ ಪೀಸ್ ಎಂಬ ಒರಿಜಿನಲ್ ರೈಸ್ ಫುಲ್ಲಿಂಗ್ ಮೆಟೀರಿಯಲ್ಲೇ ಎಲ್ಲೂ ಇಲ್ಲಾ! ಡಿ– ಪೀಸ್ ಎಂಬ ಡೂಪ್ಲಿಕೇಟ್ ರೈಸ್ ಫುಲ್ಲಿಂಗ್ ಮೆಟೀರಿಯಲ್ ಅನ್ನೇ ಒರಿಜಿನಲ್ ಡೆಮೋಪೀಸ್ ಎಂದು ಸೋ ಮಾಡಿ ಲಕ್ಷಾಂತರ ರೂಪಾಯಿ ಅಡ್ವಾನ್ಸ್ ಹಣ ಪಡೆದು ಕೊನೆಗೆ ಅದೇ ಡೂಪ್ಲಿಕೇಟ್ ರೈಸ್ ಫುಲ್ಲಿಂಗ್ ಚಂಬನ್ನೇ ಕೋಟಿಗಳ ಲೆಕ್ಕದಲ್ಲಿ ಮಾರಿ ಪರಾರಿಯಾಗುತ್ತಾರೆ! ರೈಸ್ ಫುಲ್ಲಿಂಗ್ ದಂಧೆಯೆಂದರೇ ದೋಖಾ..!ದೋಖಾ..!ದೋಖಾ! ಅಷ್ಟೇ. ಇದನ್ನು ಅರಿಯುವಷ್ಟರಲ್ಲಿ ಮೂರ್ಖರು, ದೋ ನಂಬರ್ ದಂಧೆಯಲ್ಲಿ, ಸಾರ್ಟ್ ಕಟ್ನಲ್ಲಿ ಹೆಚ್ಚಿನ ಹಣ ದುಡಿಯ ಬಯಸುವ ಆಸೆಬುರುಕರು ಮಾತ್ರ ಮೋಸಹೋಗುತ್ತಾರೆ. ಅಪ್ಪ ಎಮ್ಮೆಲ್ಲೆ ಯಾಗಿದ್ದಾಗಲೇ ಮರಳು ಫಿಲ್ಟರ್ ಮಾಫಿಯಾ ದಂಧೆ ಜೊತೆಗೆ ಕೈಜೋಡಿಸಿ ಅರ್ಜೆಂಟಾಗಿ ಹಣಮಾಡಲು, ಅಕ್ರಮವಾಗಿ ದುಡ್ಡು ಬಾಚಲು ಹೊರಟಿದ್ದ ದಂತವೈದ್ಯ ಶ್ರೀಕಾಂತ್ ನಿಗೇ ಈ ಹಣದ ಹಿಂದೆ ಬೀಳುವ ಚಾಳಿ ಹಳೆಯ ಕಾಯಿಲೆಯಿರ ಬೇಕೆನಿಸುತ್ತದೆ! ಅದಕ್ಕಾಗಿಯೇ ಇಂತಹ ಹೀನ ಸುಳಿಯ ದಂಧೆಯ ಆಳ ಅಗಲ ನೋಡದೆ ಧುಮುಕಿ ಜೈಲಿನ ಕಂಬಿಗಳ ಹಿಂದೆ ಮುದ್ದೆ ಮುರಿಯುತ್ತಿದ್ದಾನೆ.



ಇಂದಿನ ಶಾಸಕರ ಮಕ್ಕಳು ಅಪ್ಪಂದಿರಂತೆ ಶಾಸಕರಾಗದಿದ್ದರೂ ಪರವಾಗಿಲ್ಲ ಕೊಲೆಗಾರಾಗದಿದ್ದರೇ ಸಾಕು ಅನ್ನುವಂತಾಗಿದೆ. ಆದರೂ ಇಷ್ಟು ಬುದ್ಧಿವಂತ ವ್ಯಕ್ತಿ, ಮಾಜಿ ಶಾಸಕರ ಮಗ ಕೇವಲ ಐದು ಲಕ್ಷ ಹೋಯಿತೆಂದು ಕೋಲೆಮಾಡಿ ಸೇಡುತೀರಿಸಿಕೊಳ್ಳುತ್ತಾನೆಯೇ? ಅಸಲೀ ವಿಚಾರ ಹೆಚ್ಚಿನ ತನಿಖೆಯಿಂದಷ್ಟೇ ಹೊರಬರಬೇಕಿದೆ. ಐದು ಲಕ್ಷಕ್ಕಾಗಿಯೇ ಈ ಸಲೀಂ ಕೊಲೆ ನಡೆದಿದ್ದರೇ ಈಗ ಸೆರೆಂಡರ್ ಆಗಿರುವ ಹುಡುಗರಿಗೆ ತಲೆಗತ್ತು ಲಕ್ಷವಂತೇ! ಜೈಲಿನ,ಕೋರ್ಟಿನ ಖರ್ಚು, ತನ್ನದೆ ಸ್ಟೇಷನ್ ವ್ಯಾಪ್ತಿಯಲ್ಲಿ ಕೊಂದ ಹೆಣವನ್ನು ರಾತ್ರೋರಾತ್ರಿ ತಂದಿಡಲು ಸಲಹೆ ಇತ್ತ ಪೊಲೀಸಪ್ಪನಿಗೇ ಹತ್ತು ಲಕ್ಷದ ಮೇಲೊಂದು ಹೊಸ ಬ್ರಾಂಡೆಡ್ ಕಾರು! ಇವೆಲ್ಲಾ ಒಟ್ಟು ಎಷ್ಟು ಲಕ್ಷದ ಬಾಬತ್ತು? ಹಾಗಾದರೇ ಎಷ್ಟಿರಬಹುದು ಸಲೀಂ ಕೊಲೆಯ ಹಿಂದಿನ ಬೆಲೆಯ ಕಿಮ್ಮತ್ತು? ಹೇಳಿ ಕೇಳಿ ಶ್ರೀಕಾಂತ್ ಹೇಳಿಕೆಯಂತೆಯೇ ಇದು 500 ಕೋಟಿರೂಪಾಯಿಗಳಿಗೆ ಮಾತುಕತೆ ಯಾಗಿದ್ದ ವ್ಯವಹಾರ! ಈ ವ್ಯವಹಾರದಲ್ಲಿ ಇನ್ನೂ ಯಾರ್ಯಾರು ಸೇರಿಕೊಂಡಿದ್ದಾರೋ? ಎಷ್ಟು ಕೋಟಿಗಳ ಕಂತೆಗಳು ಕೈ ಬದಲಾಗಿವೆಯೋ ಬಲ್ಲವರಾರು? ಶ್ರೀಕಾಂತ್ ಏನಾದರೂ ಈ ರೈಸ್ ಫುಲ್ಲಿಂಗ್ ಒರೀಜಿನಲ್ ಮೆಟೀರಿಯಲ್ ತಂದು ಕೊಡುವುದಾಗಿ ಬೇರೊಬ್ಬ ಡೀಲರ್ ಕಮ್ ಪರ್ಚೇಷರ್ ಬಳಿ ಕೋಟ್ಯಂತರ ರೂಪಾಯಿ ಹಣ ಪಡೆದುಕೊಂಡಿರುವ ಸಾಧ್ಯತೆಯೂ ಇವೆ.

## ರೈಸ್ ಫುಲ್ಲಿಂಗ್ ಇತಿಹಾಸ

ಈ ರೈಸ್ ಫುಲ್ಲಿಂಗ್ ವಂಚಕರ ತಂಡ ಈ ವಿಶೇಷ ಶಕ್ತಿ ಇರುವ ವಸ್ತು ನಿಮ್ಮ ಮನೆಯಲ್ಲಿದ್ದರೇ ನಿಮ್ಮ ಸಂಪತ್ತು ದ್ವಿಗುಣಗೊಳ್ಳುತ್ತದೆ ಎಂದು ಬಿಸಿನೆಸ್ ಮ್ಯಾನ್ ಗಳನ್ನು ನಂಬಿಸಿ ಬಲಿಪಶು ಮಾಡುತ್ತಾರೆ. ಆರ್. ಪಿ ಗೂ ಇನ್ಸೂರೆನ್ಸ್ ಇದೆ ಎಂದು ನಂಬಿಸುತ್ತಾರೆ! ಒಟ್ಟಾರೆ ಇದೊಂದು ಹುರುಳಿಲ್ಲದ ವಂಚನೆಯ ಅಟ. ಒಮ್ಮೊಮ್ಮೆ ವ್ಯಾಪಾರ ಕುದುರಿಸಿದ ನಂತರ ಈ ರೈಸ್ ಫುಲ್ಲಿಂಗ್ ವಂಚಕರು ಹಣ ತರಿಸಿಕೊಂಡು ದರೋಡೆ ಮಾಡಿ ಪರಾರಿಯಾಗಿರುವ ಘಟನೆ ನಡೆದಿವೆ. ಕೆಲವೊಮ್ಮೆ ಹಣ ಬದಲಾವಣೆಯಾಗುವ ಟೈಮಿಗೇ ನಕಲೀ ಪೊಲೀಸರನ್ನು ನುಗ್ಗಿಸಿ ಹಣ ಕಿತ್ತುಕೊಂಡು ಕಳುಹಿಸಿರುವ ಪ್ರಕರಣಗಳೂ ವರದಿಯಾಗಿವೆ. ಎಷ್ಟೋ ಪ್ರಕರಣಗಳಲ್ಲಿ ಕಂಪ್ಲೇಂಟ್ ಕೊಡದೆ ಇರುವುದರಿಂದ


ಎಸ್ ಪಿ ಯತೀಶ್

# ವಸ್ತು ಸಂಗ್ರಹಾಲಯದ ಬೆನ್ನೇರಿ...



## ಪರಿಶೋಧನೆ

ಡಾ.ಎಸ್.ವೈ.ಸೋಮಶೇಖರ್
ಕನ್ನಡ ವಿಶ್ವವಿದ್ಯಾಲಯ, ಹಂಪಿ



ಕನ್ನಡ ವಿಶ್ವವಿದ್ಯಾಲಯಕ್ಕೆ ಸಂಶೋಧನಾ ವಿದ್ಯಾರ್ಥಿಯಾಗಿ ಬಂದ ನನಗೆ ಎಂ.ಫಿಲ್., ಪಿಎಚ್.ಡಿ ಪದವಿಗಳನ್ನು ಪಡೆದುದೇನೋ ನಿಜ. ಈ ಮಧ್ಯೆ ಸಂಶೋಧನಾ ಸಹಾಯಕನಾಗಿ ಕಾರ್ಯ ನಿರ್ವಹಿಸಿದ ಅನುಭವ ತುಸು ರೋಚಕವೇ. ವಿಶ್ವವಿದ್ಯಾಲಯದಲ್ಲಿ ಕನ್ನಡ–ಕರ್ನಾಟಕ ನಾಡು, ನುಡಿ, ಸಂಸ್ಕೃತಿಯನ್ನು ಪ್ರತಿನಿಧಿಸುವ ವಸ್ತುಸಂಗ್ರಹಾಲಯ ನಿರ್ಮಿಸಬೇಕೆಂಬುದು ಕುಲಪತಿ ಚಂದ್ರಶೇಖರ ಕಂಬಾರರ ಕನಸು. ಅಂತೆಯೇ ಅದಕ್ಕೆ ಕನ್ನಡ ಲೋಕ ಎಂಬ ಅಭಿದಾನ ನೀಡಿ ಮೂರ್ತರೂಪ ಕೊಟ್ಟ ಕೀರ್ತಿ ಎಂ.ಎಂ ಕಲಬುರ್ಗಿ ಅವರದ್ದು. ಇದಕ್ಕಾಗಿ ನೇಮಕವಾದವರು ಕೆ.ಎಂ. ಸುರೇಶ್. ಇವರೊಂದಿಗೆ ಸಿ.ಮಹದೇವ, ಚಲುವರಾಜು, ಸಿ.ಎಸ್. ವಾಸುದೇವನ್ ಸೇರಿದ್ದರು. ಇವರ ನಂತರದ ಸರದಿ ವಾಸುದೇವ ಬಡಿಗೇರ, ಗಂಗಾಧರ ದೈವಜ್ಞ, ಎಂ. ಕೊಟ್ರೇಶ, ಎಂ. ಮಲ್ಲಿಕಾರ್ಜುನಗೌಡ ಮತ್ತು ನನ್ನದು. 1996ರಲ್ಲಿ ಆರಂಭಿಸಿದ ವಸ್ತುಸಂಗ್ರಹಾಲಯಕ್ಕೆ ಅನೇಕ ಬಗೆಯ ವಸ್ತುವಿಶೇಷಗಳನ್ನು ಸಂಗ್ರಹಿಸುವಲ್ಲಿ ಈ ಎಲ್ಲರ ಪಾತ್ರವೂ ಮಹತ್ವದ್ದು. ಈ ಕಾಯಕದಲ್ಲಿ ನಮಗೆ ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲೆಗಳ ಊರೂರು, ಓಣಿ ಮತ್ತು ಮನೆಮನೆಗಳನ್ನು ಸುತ್ತುವುದು, ಅಲ್ಲಿನ ಜನರ ಮನಗಳನ್ನು ಓಲೈಸಿ ವಸ್ತುಗಳನ್ನು ತರುವುದೇ ಮುಖ್ಯವಾಗಿತ್ತು. ಅದರಲ್ಲೂ ಶಿಲ್ಪ, ಶಾಸನ, ವೀರಗಲ್ಲು, ಮಾಸ್ತಿಗಲ್ಲುಗಳನ್ನು ಅರಸುತ್ತಾ ಹೊರಟ ನಮಗೆ ಸಿಕ್ಕಸಿಕ್ಕ ಶಿಲ್ಪಗಳನ್ನು ಲಾರಿಯಲ್ಲಿ ತುಂಬಿಸುವುದು, ಅವುಗಳನ್ನು ವಿವಿಗೆ ತಂದು ಡಂಪ್ ಮಾಡುವುದು. ಇದರ ಜೊತೆಗೆ ಇನ್ನೊಂದು ಲಾರಿ ಶಿಲ್ಪಗಳನ್ನು ಹೇಗೆ ತುಂಬಿಸಿ ತರುವುದೆಂಬುದೇ ಆಗಿತ್ತು.

ನಮ್ಮ ವಸ್ತುಸಂಗ್ರಹಾಲಯದ ಕಲ್ಪನೆ ತುಸು ಗಮನಿಸಬೇಕಾದ್ದೇ. ಹೆಚ್‌ಪಿಸಿಯ ಬೃಹತ್‌ಗಾತ್ರದ ನಂದಿಯು ಕನ್ನಡ ವಿಶ್ವವಿದ್ಯಾಲಯಕ್ಕೆ ಬಂದವರನ್ನು ಸ್ವಾಗತಿಸುವಂತೆ, ಕುರುಗೋಡಿನ ದೊಡ್ಡಬಸವೇಶ್ವರ ಗುಡಿಯ ಆನೆಗಳು ಕೈಬೀಸಿ ಕರೆವಂತೆ, ಕುಕನೂರಿನ ಶಿಲ್ಪಗಳು ಮ್ಯೂಸಿಯಂಗೆ ದ್ವಾರಪಾಲಕರಾಗಬೇಕೆಂದು, ಕೊಪ್ಪಳದ ಕೋಟೆಯಲ್ಲಿದ್ದ ಫಿರಂಗಿಗಳು ಸಂಗ್ರಹಾಲಯದ ಖನಿಗಳಾಗಿ ಪ್ರೇಕ್ಷಕರ ಕಣ್ಮನ ಸೆಳೆಯಬೇಕೆಂಬ ಮಹದಾಸೆ ನಮ್ಮದು. ಅಂತೆಯೇ ಇವುಗಳಲ್ಲಿ ಕುಕನೂರಿನ ಶಿಲ್ಪಗಳ ಹೊರತಾಗಿ ಎಲ್ಲವನ್ನೂ ಸಾಕ್ಷಾತ್ಕರಿಸಿದ ಕೀರ್ತಿ ನಮ್ಮದು.

ಈ ಕಾರ್ಯದಲ್ಲಿ ನಮ್ಮ ಅಲೆದಾಟ ಮತ್ತು ಸಂಗ್ರಹದ ದೊಡ್ಡ ಗಣಿಯೆಂದರೆ ಕುಡುತಿನಿ ಗ್ರಾಮ. ಇಲ್ಲಿ ಕುಮಾರಸ್ವಾಮಿ, ಸಂಗಮೇಶ್ವರ, ವೀರಭದ್ರ, ದುರ್ಗಾ, ಬಸವಣ್ಣ, ಲಕ್ಷ್ಮೀನರಸಿಂಹ ಮೊದಲಾದ ಅನೇಕ ದೇವಾಲಯಗಳಿವೆ. ಕುಡುತಿನಿಯು ಅತ್ಯಂತ ಪ್ರಾಚೀನ ನೆಲೆ. ಇದನ್ನು ಕೊಟ್ಟಿತ್ತೊಣೆ, ಕೊಟ್ಟಿತೊಣೆ, ಕುಡುತಣಿ ಎಂದೂ, ಇಲ್ಲಿ ಟಂಕಿಸುತ್ತಿದ್ದ ನಾಣ್ಯಕ್ಕೆ 'ನವಿಲಚ್ಚಿನ ಪೊನ್' ಎಂದೇ ಕರೆಯುತ್ತಿದ್ದುದನ್ನು ಶಾಸನಗಳು ಉಲ್ಲೇಖಿಸಿವೆ. ಇದು ಹಿಂದೆ ಕಾರ್ತಿಕೇಯನ ತಪೋವನವಾಗಿದ್ದು, ಇಲ್ಲಿ ತಯಾರಿಸುತ್ತಿದ್ದ ಶ್ರೇಷ್ಠ ದರ್ಜೆಯ ಕಬ್ಬಿಣದ ಆಯುಧ ಪರಿಕರಗಳು ಭಾರತದಲ್ಲೇ ಪ್ರಸಿದ್ಧಿ ಹೊಂದಿದ್ದವೆಂಬುದು ಬಡಿಗೇರರ ಸಂಶೋಧನಾ ಸಾರಲೇಖ. ಹೌದು, ಇಂದಿಗೂ ಬಳ್ಳಾರಿ ಜಿಲ್ಲೆಯು ಭಾರತಕ್ಕಷ್ಟೇ ಅಲ್ಲ, ಜಗತ್ತಿಗೇ ಚಿರಪರಿಚಿತವಾದದ್ದು ಕಬ್ಬಿಣದ ಗಣಿಗಾರಿಕೆಯಿಂದ ಎಂಬುದೂ ಇತಿಹಾಸವೇ. ಕುಡುತಿನಿಯಂತೆ ವಸ್ತುಸಂಗ್ರಹಣೆಯ ಖನಿಗಳೆಂದರೆ ಕೋಳೂರು, ಕೊಳಗಲ್ಲು ಮತ್ತು ಕುರುಗೋಡುಗಳಾಗಿವೆ. ಈ ಗ್ರಾಮಗಳ ಭಿನ್ನವಾದ ಅನೇಕ ಪ್ರಾಚೀನ ಶಿಲ್ಪಗಳು ನಮ್ಮ ಸಂಗ್ರಹ ಸೇರಿವೆ. ಅವುಗಳಲ್ಲಿ ಗಣೇಶ, ಲಿಂಗ, ಪಾನವಟ್ಟಗಳು, ಲಕ್ಷ್ಮೀನಾರಾಯಣ, ಪಾರ್ಶ್ವನಾಥ, ಭೈರವ–ಭೈರವಿಯರು ಲಾರಿಯಲ್ಲಿ ವಿಶ್ವವಿದ್ಯಾಲಯಕ್ಕೆ ಪ್ರಯಾಣ ಬೆಳೆಸಿವೆ. ಇದಕ್ಕೆ ಅಲ್ಲಿನ ಗ್ರಾಮಸ್ಥರ ಸಹಕಾರ ಅನನ್ಯವಾದದ್ದು. ಅದರಲ್ಲೂ ಕುಡುತಿನಿಯಲ್ಲಿ ಶಿಲ್ಪಗಳನ್ನು ಲಾರಿಗೆ ಎತ್ತಿಹಾಕುವುದಕ್ಕೆಂದೇ ಒಂದು ತಂಡ ರಚನೆಯಾಗಿತ್ತು. ಊರ ಬಾಗಿಲಲ್ಲಿ ಕೆಲಸ ಕಾಣದೆ ಚಹಾವನ್ನು ಹೀರುತ್ತಾ ಹರಟೆಯಲ್ಲಿದ್ದವರೆಲ್ಲಾ ಈ ತಂಡದ ಸದಸ್ಯರಾದರು. ಅದೂ ಎಷ್ಟರಮಟ್ಟಿಗೆ ಎಂದರೆ ಊರ ಬಾಗಿಲ ಬಳಿ ನಮ್ಮ ಲಾರಿ ನಿಂತರೆ ಸಾಕು, ಅವರೇ ಲಾರಿಗೆ ಶಿಲ್ಪಗಳ ದಾರಿ ತೋರಿಸುತ್ತಿದ್ದರು. ಹಾಗೆಯೇ ಶಿಲ್ಪಗಳನ್ನು ಲಾರಿಗೆ ತುಂಬಿಸಿ ನಾಳೆಯ ಆಗಮನಕ್ಕೆ ನಮ್ಮನ್ನು ಒತ್ತಾಯಿಸುವ ಜರೂರು ಇವರದ್ದೇ ಆಗಿತ್ತು. ಅಲ್ಲದೆ ಅಲ್ಲಿ ಗಣಪ್ಪ, ಇಲ್ಲಿ ದುರ್ಗವ್ವ, ಆ ಓಣಿಯಲ್ಲಿ ಗಂಡು ದೇವರು, ಕುಮಾರಸ್ವಾಮಿ ಗುಡಿ ಮುಂದೆ ಹೆಣ್ಣು ದೇವರು, ಊರಬಾಗಿಲಲ್ಲಿ ಅಕ್ಷರ ಕಲ್ಲು, ದೆವ್ವ ಬಿಡಿಸೋ ಜಾಗದಲ್ಲಿ ಚಿತ್ರಕಲ್ಲು, ರಾಮಲಿಂಗೇಶ್ವರ ಮಠ(ಹಿಂದೆ ಜಿನಾಲಯವಾಗಿತ್ತು)ದ ಹತ್ತಿರ ಬೆತ್ತಲೆ ಕಲ್ಲು ಇವೆ ಎಂಬ ಸಂಗತಿಯನ್ನು ಮೊದಲೇ ತಿಳಿಸುತ್ತಿದ್ದರು. ಅದು ನಮಗೆ ವರದಾನವೇ ಸರಿ. ಹೀಗೆಯೇ ಮುಂದುವರಿದ ಕಾಯಕದಲ್ಲಿ ಅನಾಹುತ ಎದುರಿಸಿದ್ದೂ ಆಯಿತು. ಹೇಗೂ ನಮಗೆ ಶಿಲ್ಪಾವಶೇಷಗಳ ಸ್ವರ್ಗವೇ ಆಗಿದ್ದ ಕುಡುತಿನಿ ಚಿರಪರಿಚಿತವಾದ್ದರಿಂದ ಮತ್ತೊಮ್ಮೆ ಲಾರಿಯನ್ನು ಕೊಂಡೊಯ್ದೆವು. ಈಗಾಗಲೇ ಲಾರಿ ತುಂಬಿಸುತ್ತಿದ್ದ ತಂಡವು ತಮ್ಮ ದರವನ್ನು ಹೆಚ್ಚಿಸಲು ಡಿಮಾಂಡ್ ಮಾಡಿತು. ಆದರೆ ನಮ್ಮ ಬಜೆಟ್‌ಗೆ ಒಗ್ಗದ ಕಾರಣ ಬೇರೊಂದು ತಂಡಕ್ಕೆ ಕೈಹಾಕಿದೆವು. ಆದದ್ದು ತಪ್ಪು ಅಲ್ಲೇ, ಹಳೆಯ ತಂಡದ ಕೆಂಗಣ್ಣಿಗೆ ಗುರಿಯಾಗಿ ಕೊನೆಗೆ ಪೊಲೀಸರ ಮೊರೆಹೋಗಿ ಪಾರಾಗಿ ಬರಬೇಕಾಯಿತು. ಹೀಗೆ ಸಂಗ್ರಹಿಸಿ ತಂದ ಅನೇಕ ಶಿಲಾಕೊಡಲಿ, ಮೂರ್ತಿಶಿಲ್ಪ, ಶಾಸನಗಳಲ್ಲದೆ ಬುಡಕಟ್ಟು, ಜಾನಪದ ಮತ್ತಿತರ ವಸ್ತುಗಳು ಕನ್ನಡ ವಿಶ್ವವಿದ್ಯಾಲಯದ ವಸ್ತುಸಂಗ್ರಹಾಲಯಕ್ಕೆ ಮೂರ್ತ ರೂಪವನ್ನು ನೀಡಿವೆ. ಅಕ್ಷರ ಗ್ರಂಥಾಲಯ ಕಟ್ಟಡದ ಸರಳ ಸುಂದರ ವಾಸ್ತುರಚನೆಗೆ ಮೆರುಗನ್ನು ತಂದಿವೆ. ಅಲ್ಲದೆ ವಿದ್ಯಾರಣ್ಯ ಆವರಣದ ಹಚ್ಚ ಹಸುರಿನ ಸಹಜ ಸೊಬಗಿಗೆ ಈ ಬಗೆಯ ವಸ್ತುವಿಶೇಷಗಳು ಕನ್ನಡ ನಾಡಿನ ಚರಿತ್ರೆಯೆಂಬ ಹೊಳಪನ್ನು ಹೊದ್ದಿಸಿವೆಯೆಂದೇ ಹೇಳಬೇಕು.

---




ಹಲವು ಈಚೆಗೇ ಬರುವುದಿಲ್ಲ! ಹಾಗೆಯೇ ನಂದಿ ವಿಗ್ರಹ, ನಾಗಮಣಿ, ಕಪ್ಪು ಹರಿಸಿನ, ರೆಡ್ ಮರ್ಕ್ಯುರೀ, ಕೆಂಪು(ಕತ್ತಾಳೆ) ಅಲೋವೆರಾ, ಮೂರು ಸುತ್ತಿನ ನಿಂಬೆ ಹಣ್ಣು, ಡಬಲ್ ಎಂಜಿನ್ (ಎರಡು ತಲೆ ಹಾವು) ತಿಮಿಂಗಿಲ ವಾಂತಿ, ತಾಮ್ರದ ಪುರಾತನ ಕಾಲದ ಶಾಸನಗಳು, ಓಬಿರಾಯನ ಕಾಲದ ಹಳೇ ನಾಣ್ಯಗಳು, ಪ್ರಾಚೀನ ಕಾಲದ ದೇವಾಲದ ವಿಗ್ರಹಗಳು, ಚಿನ್ನದ ಇಟ್ಟಿಗೆ, ಈಸ್ಟ್ ಇಂಡಿಯಾ ಕಂಪನಿಯ 1818 ಇಸವೀ ಬಾಂಡ್ ಪೇಪರ್, 1616ರ ಚೇಳು ಗುರುತಿನ ಈಸ್ಟ್ ಇಂಡಿಯಾ ಕಂಪನಿ ಕಾಪರ್ ಸೀಟ್ ಗಳ ಹೆಸರಲ್ಲಿಯೂ ಕೂಡ ವಂಚನೆ ನಡೆಯುತ್ತಿದೆ! ಇಂತಹ ವಿಚಿತ್ರ ವಸ್ತುಗಳ ಮಾರಾಟದ ಜಾಲವೇ ಕೆಲಸ ಮಾಡುತ್ತಾ ಇವುಗಳಿಗೆಲ್ಲಾ ಅಂತಾರಾಷ್ಟ್ರೀಯ ಮಟ್ಟದಲ್ಲಿ ಬೇಡಿಕೆ ಇರುವಂತೆ ಬಿಂಬಿಸಲಾಗಿದೆ! ಕೋಟ್ಯಾಂತರ ರೂಪಾಯಿ ಲೆಕ್ಕದಲ್ಲಿ ಹಣ ಸಿಗುತ್ತದೆ ಎಂದು ನಂಬಿಸಿ ಮೇಲಿನ ಎಲ್ಲಾ ವಸ್ತುಗಳನ್ನು ನಕಲಿಯಾಗಿ ಸೃಷ್ಠಿಸಿ, ಅವುಗಳ ಬೆಲೆ ಕೋಟ್ಯಾಂತರ ರೂಪಾಯಿ ಎಂದು ನಂಬಿಸಿ, ವ್ಯಾಪಾರ ನಡೆಸಿ ಮೋಸ ಮಾಡುತ್ತಲೇ ಬದುಕುತ್ತಿರುವ ದೊಡ್ಡ ಜಾಲವೇ ಕೆಲಸ ಮಾಡುತ್ತಿದೆ! ಆಟೋ ಫೈರ್ ಆಗುವ ಈಸ್ಟ್ ಇಂಡಿಯಾ ಕಂಪನಿ ಬಾಂಡ್ ಪೇಪರ್ ಬೆಲೆ ಕೋಟಿಯಂತೇ! ಚೇಳು ಗುರುತಿನ ಪೇಪರ್ ಬೆಲೆ 25ಲಕ್ಷವಂತೆ! ಕ್ಯಾನ್ಸರ್–ಏಡ್ಸ್ ಗೆ ಔಷದಿ ಎಂದು ಹಬ್ಬಿಸಿರುವ ಕಪ್ಪು ಹರಿಸಿನ ಕೆ.ಜಿ.ಗೆ ಮೂರು ಕೋಟಿಯಂತೇ! ಸಮುದ್ರದಲ್ಲಿ ಸಿಗುವ ತಿಮಿಂಗಿಲ ವಾಂತಿ ಕೇಜಿಗೊಂದು ಕೋಟಿಯಂತೇ! ಕೋಟಿಗಟ್ಟಲೆ ಹಣದ ಕನಸಿನ ಲೋಕದಲ್ಲಿ ತೇಲುವಂತೆ ಮಾಡುವ ಈ ದೋ ನಂಬರ್ ದಂಧೆಯ ವಸ್ತುಗಳ ವ್ಯಾಪಾರದ ಸುಳಿಯಲ್ಲಿ ಸಿಲುಕಿ ಎಷ್ಟೋ ಜನರು ದಿನ ನಿತ್ಯ ಹಣ ಕಳೆದುಕೊಂಡು ಮೋಸ ಹೋಗುತ್ತಿದ್ದಾರೆ. ಅಬ್ದುಲ್ ಸ್ವಾಮಿ ಎಂಬ ವೇಲೂರಿನ ನಿದಿಗಳ್ಳ ನಕಲಿ ಸ್ವಾಮೀಜಿಯೊಬ್ಬ ನಿಮ್ಮ ಜಮೀನಿನಲ್ಲಿ ನಿಧಿ ಇದೆ, ಅಷ್ಟದಿಗ್ಬಂದನ ಹಾಕಿ ನಿಧಿ ಎತ್ತಿ ಕೊಡುತ್ತೇನೆ, ಎರಡು ಲಕ್ಷ ಪೂಜೆಗೆ ಹಣ ಕೊಡಿ ಎಂದು ಕಳ್ಳೆಪುರಿ–ನಿಂಬೆಹಣ್ಣಿನಿಂದಲೇ ಇಂದ್ರಜಿತ್ ಎಂಬ ಕಣ್ ಕಟ್ ವಿದ್ಯೆ ಮಾಡ್ತೀನಿ ನಿಧಿ ಕಾಯುತ್ತಿರುವ ಸರ್ಪಗಳನ್ನು ಪಕ್ಕಕ್ಕೆ ಸರಿಸುತ್ತೇನೆ! ಎಂದು ರೈಲು ಬಿಡುತ್ತಾನೆ. ಖಾಲಿ ಚಂಬಿಗೆ ಇದ್ದಿಲು ತುಂಬಿಕೊಟ್ಟು ಯಾಮಾರಿಸುವ ನಿಧಿ ಕಳ್ಳರ ಗ್ಯಾಂಗ್ ಅಮಾಯಕರ ಜಮೀನಿಗೆ ವಕ್ಕರಿಸಬಹುದೆಂದು ಪೊಲೀಸರೂ ಎಚ್ಚರಿಸುತ್ತಿದ್ದಾರೆ.



ಕಾಡುಗಳಲ್ಲಿ ಪಾಳುಬಿದ್ದ ಗುಡಿಗಳಲ್ಲಿ ನಿಧಿ ಹುಡುಕುತ್ತಿರುವ ನಿಧಿ ಕಳ್ಳರ ಗ್ಯಾಂಗ್ ಪುರಾತನ ದೇವಾಲಯಗಳ ಗರ್ಭಗುಡಿಯ ಕೆಳಗೆ ನಿಧಿ ಇದೆಯೆಂದು ನಡುರಾತ್ರಿಯಲ್ಲಿ ಬೇಟೆಗಿಳಿದಿದೆಯಂತೆ! ಮಡಿಕೇರಿ, ಬಂಡೀಪುರ ತಮಿಳುನಾಡಿನ ಕಾಡುಗಳಲ್ಲಿ ಕೋಟಿಗಳ ಆಸೆಗೆ ಬಿದ್ದು ಕಪ್ಪುಹರಿಸಿನ,ಕೆಂಪು ಕತ್ತಾಳೆ, ಮೂರು ಸುತ್ತಿನ ನಿಂಬೆ ಹುಡುಕುತ್ತಿರುವ ತಂಡಗಳೇ ಇವೆಯಂತೇ! ಕರ್ನಾಟಕದ ಪೊಲೀಸರು ಕೂಡ ಈ ರೈಸ್ ಫುಲ್ಲಿಂಗ್ ಇರಿಡಿಯಮ್ ಸ್ಕ್ಯಾಂಡಲ್ ಹಿಂದೆ ಬಿದ್ದು ಇದುವರೆಗೂ ನೂರಾರು ವಂಚಕರನ್ನು ಬಂಧಿಸಿ ಜೈಲಿಗಟ್ಟಿದ್ದಾರೆ! 2020ರ ಫೆಬ್ರವರಿ ಯಲ್ಲಿ ರೈಸ್ ಫುಲ್ಲಿಂಗ್ ಒರಿಜಿನಲ್ ಪರೀಕ್ಷೆ ನಡೆಸಲು 25ಲಕ್ಷ ಖರ್ಚಾಗುತ್ತದೆಂದು ನಂಬಿಸಿ, ವಿದೇಶಿ ವಿಜ್ಞಾನಿಗಳಂತೆ ವೇಷದರಿಸಿ ಆ ನಕಲಿ ವಿಜ್ಞಾನಿಗಳಿಗೆ ಇಬ್ಬರು ಗನ್ ಮ್ಯಾನ್ ಗಳನ್ನು ಸೃಷ್ಠಿಸಿ, ಕೋಟಿ ಕೋಟಿ ದೋಚಲು ಹೊರಟಿದ್ದ ಮಹಾರಾಷ್ಟ್ರದ ಪುಣೆಯ ನೀವಾಸಿ ವಿಕಾಸ್ ಕುಕಾಸ್ ಎಂಬ ವಂಚಕಿ ಸೇರಿದಂತೆ ಆಕೆಯ ತಂಡದಲ್ಲಿದ್ದ ಪ್ರಮುಖ ಆರೋಪಿ ಸಿದ್ದೇಶ್ವರ ಸೋನ್ ಕಾಂಬ್ಳೆ, ಚಂದ್ರಕಾಂತ್, ಬನ್ಸಿಲಾಲ್ ದುಷಿಯಾ, ರಾಕೇಶ್ ,ಬನ್ಸೋಡೆ, ಎಂಬುವರನ್ನು ಬೆಂಗಳೂರಿನ ಸಿಸಿಬಿ ಪೊಲೀಸರು ಬಂಧಿಸಿ ಜೈಲಿಗಟ್ಟಿದ್ದರು. ಸೆಪ್ಟೆಂಬರ್ 2021ರಲ್ಲಿ ಆಂದ್ರ ಪ್ರದೇಶದ ಗುಂತಕಲ್ ಮೂಲದ ಶೇಖ್ ಮತ್ತು ಜರೀನಾ ಅವರ ಏಜೆಂಟರಾದ ರಾಘವೇಂದ್ರ ಪ್ರಸಾದ್, ಫರೀದಾ, ನಯೀಮುಲ್ಲಾ, ಮುದಾಸೀರ್ ಎಂಬುವರನ್ನು ಬೆಂಗಳೂರು ಸಿಸಿಬಿ ಪೊಲೀಸರು ಸ್ಯಾಂಕಿ ರಸ್ತೆಯ ತುಲಿಪ್ ಹೋಟೆಲ್ ನಲ್ಲಿ ವಂಚಿಸುತ್ತಿದ್ದಾಗ ಬಂಧಿಸಿದ್ದರು. 2018ರಲ್ಲಿ ಶಿವಾಜಿನಗರದ ಮಹಿಳಾ ಪೊಲೀಸ್ ಠಾಣೆಯಲ್ಲಿ ಇನ್ಸ್ಪೆಕ್ಟರ್ ಆಗಿದ್ದ ಕನಕಲಕ್ಷ್ಮಿ ಮತ್ತು ಇನ್ಸ್ಪೆಕ್ಟರ್ ನದಾಫ್ ಎಂಬುವರು ಇದೇ ರೈಸ್ ಫುಲ್ಲಿಂಗ್ ದಂಧೆಯಲ್ಲಿ ಭಾಗಿಯಾಗಿ ಶಿರಾದ ಡಾಬಾ ರಾಜಣ್ಣ ಎಂಬುವರು ಜೊತೆಗೆ ಸೇರಿ ಬಳ್ಳಾರಿ ಜಿಲ್ಲೆಯ ಸುಧಾಕರ್ ರೆಡ್ಡಿ ಎಂಬುವರಿಗೆ ಹದಿನೇಳು ಲಕ್ಷ ಪಡೆದು ವಂಚಿಸಿದ್ದು ತನಿಖೆಯಿಂದ ಸಾಬೀತಾಗಿ ಇಬ್ಬರು ಪೊಲೀಸರ ವಿರುದ್ಧ ಹೈಕೋರ್ಟ್ ಉನ್ನತ ಮಟ್ಟದ ತನಿಖೆಗೆ ಆದೇಶಿಸಿತ್ತು! ಹಾಗೆಯೇ 2019ರಲ್ಲಿ ನಗರದ ಅನ್ನಪೂರ್ಣೇಶ್ವರಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ರಾಮೇಗೌಡ ಎಂಬುವರ ಬಳಿ 50ಲಕ್ಷ ದೋಚಿ ಪರಾರಿಯಾಗಿದ್ದ ರೈಸ್ ಫುಲ್ಲಿಂಗ್ ವಂಚಕರನ್ನು ಬಂಧಿಸಲಾಗಿತ್ತು. ಆಂಧ್ರದ ವಂಶಿಕ್ರಷ್ಣ ಎಂಬುವರಿಗೆ ಎರಡುವರೆ ಕೋಟಿ ರೂಪಾಯಿ ರೈಸ್ ಫುಲ್ಲಿಂಗ್ ಹೆಸರಲ್ಲಿ ವಂಚಿಸಿದ್ದ ಚಿಕ್ಕಬಳ್ಳಾಪುರದಲ್ಲಿ ವಂಚಕಿ ಅರ್ಚನಾ, ಶ್ರೀಪತಿ, ಶ್ರೀಹರಿ ಮತ್ತು ಕನ್ನಡ ಚಲನಚಿತ್ರ ನಟ ಶಂಕರ್ ಎಂಬುವರನ್ನು ಬಂಧಿಸಿ ಜೈಲಿಗಟ್ಟಲಾಗಿತ್ತು! ಕೊರಟಗೆರೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕ್ರಿಷ್ಣ ಮೂರ್ತಿಗೆ ಆರುವರೆ ಕೋಟಿ ವಂಚಿಸಿದ ಆರೋಪದಲ್ಲಿ ಹಲಸೂರು ನಿವಾಸಿ ಸಗಾಯ್ ರಾಜ್ , ವೆಂಕಟೇಶ್, ಸತೀಶ್,ಪ್ರಭಾ ಎಂಬುವರನ್ನು 2015ರಲ್ಲಿ ಬಂಧಿಸಲಾಗಿತ್ತು! ಮೈಸೂರಿನ ದೇವರಾಜ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಾಲ್ವರು ತಮಿಳುನಾಡು, ಕೇರಳ ಮೂಲದ ರೈಸ್ ಫುಲ್ಲಿಂಗ್ ವಂಚಕರನ್ನು 2021ರಲ್ಲಿ ಜೈಲಿಗಟ್ಟಲಾಗಿತ್ತು. 2018ರಲ್ಲಿ ರೈಸ್ ಫುಲ್ಲಿಂಗ್ ದಂಧೆಗೆ ಮುಖ್ಯಮಂತ್ರಿಯೊಬ್ಬರ



ಹೆಸರು ಬಳಸಿ 350ಜನ ಸಾರ್ವಜನಿಕರಿಗೆ 25ಕೋಟಿ ವಂಚಿಸಿದ್ದ ಆನೇಕಲ್ ಚೂಡಳ್ಳಿ ನಿವಾಸಿ ರಾಮಚಂದ್ರಾಚಾರಿ ಎಂಬಾತ ಹಣ ವಾಪಸ್ ಕೇಳಿದಾಗ ವಿಷಕುಡಿವ ನಾಟಕವಾಡಿ ಜೈಲು ಸೇರಿದ್ದ!

ನಾಸಾ ಏಜೆನ್ಸೀಸ್. ಇಸ್ರೋ. ಡಿ.ಅರ್.ಡಿ.ಓ.(ರಕ್ಷಣಾ ಸಂಶೋಧನಾ ಅಭಿವೃದ್ಧಿ ಸಂಸ್ಥೆ) ನಕಲಿ ಏಜೆನ್ಸಿಗಳ ಹೆಸರಲ್ಲಿ ವಂಚನೆ ನಡೆಯುತ್ತಲೇ ಇದೆ! ರೈಸ್ ಫುಲ್ಲಿಂಗ್ ವಂಚಕರ ಬಳಿ ನಮ್ಮದೇ ಆರ್.ಬಿ.ಐ.ನ ಫೇಕ್ ಡೆಪಾಸಿಟ್ ಸರ್ಟಿಫಿಕೇಟ್! ಅಮೆರಿಕನ್ ರೇಡಿಯಮ್ ಸೊಸೈಟಿ ಫೇಕ್ ಮನೀ ಲಾಂಡ್ರಿಂಗ್ ಕ್ಲಿಯರೆನ್ಸ್ ಸೆರ್ಟಿಫಿಕೇಟ್! ಫೇಕ್ ಲ್ಯಾಬೋರೇಟರೀ ರೈಸ್ ಫುಲ್ಲಿಂಗ್ ರಿಪೋರ್ಟ್ ಗಳು ಇರುವುದರಿಂದ ವಿದ್ಯಾವಂತ ಜನರೇ ಬೇಗನೆ ಮೋಸ ಹೋಗುತ್ತಿದ್ದಾರೆ! ಮೈಬಗ್ಗಿಸಿ ದುಡಿದು ತಿನ್ನಲಾರದ ವಂಚಕರು ಜೀವನವನ್ನೇ ವಂಚಕ ವೃತ್ತಿಗೆ ಮುಡುಪಾಗಿಟ್ಟು ಈ ರೈಸ್ ಫುಲ್ಲಿಂಗ್ ನಂತಹ ಕರಾಳ ದಂಧೆಗೆ ಇಳಿದು ಜನರನ್ನು ಮೋಸಗೊಳಿಸುತ್ತಾ ಕ್ರಿಮಿನಲ್ ಚಟುವಟಿಕೆಗಳು ಹೆಚ್ಚಾಗಲು ಕಾರಣರಾಗಿದ್ದಾರೆ. ಈ ರೈಸ್ ಫುಲ್ಲಿಂಗ್ ದಂಧೆಗೆ ಕಡಿವಾಣ ಹಾಕಲು ಸರಿಯಾದ ಕಾನೂನು ಜಾರಿಯಾಗದಿದ್ದರೇ ಅವರು ಬುದ್ಧಿ ಕಲಿಯುವುದಿಲ್ಲ. ಏಕೆಂದರೇ ಇಷ್ಟೆಲ್ಲಾ ವಂಚನೆ ಮಾಡಿದರೂ ಅವರ ಮೇಲೆ ಬೀಳುವುದು ಕೇವಲ ವಂಚನೆಯ (420)ಕೇಸು ಅಷ್ಟೆ! ಆದ್ದರಿಂದ ನಮ್ಮ ಕಾನೂನಿನ ಕೈ ಬಲವಾದಾಗ ಮಾತ್ರ ಇಂತಹ ವಂಚನೆಗಳು ಕಡಿಮೆಯಾಗಲು ಸಾಧ್ಯ.. ನಕಲಿಚಿನ್ನದ ಇಟ್ಟಿಗೆ ಮಾರುವ ಕಿರಾತಕರೂ, ನಿಧಿ ಎತ್ತುವ ಹೆಸರಲ್ಲಿ ಮೂಡರನ್ನು ದೋಚುವ ನಿಪುಣರು, ಹಳೇನೋಟು ವಿನಿಮಯ ಮಾಡಿಕೊಡುತ್ತೇವೆ ಎನ್ನುವ ಕಿಲಾಡಿಗಳು, ಕೋಟಿಗಳ ಕಥೆಹೇಳಿ ನಿಮ್ಮ ಕೈಗೆ ಖಾಲಿಚೊಂಬು ಕೊಟ್ಟು ಮೋಸಮಾಡಿ ಪರಾರಿಯಾಗುವ ರೈಸ್ ಫುಲ್ಲಿಂಗ್ ಏಜೆಂಟರು ನಾನಾ ಬಗೆಯ ವೇಶಗಳಲ್ಲಿ ನಿಮ್ಮ ಮುಂದೆ ಕಾಣಿಸಿಕೊಳ್ಳುವ ಸಾಧ್ಯತೆ ಇರುವುದರಿಂದ ಹುಷಾರಾಗಿರಿ ಎನ್ನುತ್ತಿವೆ ಪೊಲೀಸ್ ಠಾಣೆಗಳು.!

# ಊರ ಕಟ್ಟಿ ಊರು ಬೆಳಸಿ...



ಸ್ಥಿತಿಬಿಂಬ
ಡಾ.ಶಿವಕುಮಾರ್ ಕಂಪ್ಲಿ

ಇಳೆ ಮತ್ತು ಮಳೆಗಳ ಕಥನ ಭೂಮಿಯ ಫಲಗಳ ಕಥನ ಮಾತ್ರವಲ್ಲ, ಬಹು ಜೀವಿಗಳ ಬದುಕಿನ ವಿರುದ್ದ ವಿನ್ಯಾಸಗಳ ನೋವಿನ ತಾರ್ಕಿಕ ಕಥನವೂ ಹೌದು." ರೈತ ಬಡವನಾದರೂ ಭೂಮಿ ಬಡವಲ್ಲ" ಎಂಬ ಗಾದೆ ಉದಾರ ನೆಲೆಯಿಂದ ಕೂಡಿದೆ.ಹಳ್ಳಿಗಳ ಒಡಲಾಳದ ಜಮೀನ್ದಾರಿ ವ್ಯವಸ್ಥೆ ಭೂಮಿ ನಂಬಿದ ಕೂಲಿ ರೈತರನ್ನ ಬಡವರನ್ನಾಗಿಸಿದ ರೀತಿಗಳನ್ನ ಬಗೆಯ ಬೇಕಿದೆ.

ಅಶ್ವಿನಿ ಮಳೆ ಆರಂಭದಂದು ಕೂರಿಗೆ,ರಂಟೆ,ಕುಂಟೆಗಳ ಪೂಜೆಯನ್ನ ಪ್ರಾರಂಭಿಸುವಂತೆಯೇ ದನಕರುಗಳಿಗೆ ನೇಗಿಲು,ನೊಗಗಳಿಗೆ,ಕೃಷಿಯ ಎಲ್ಲಾ ಪರಿಕರಗಳಿಗೆ ಪೂಜೆ ಸಲ್ಲಿಸಲಾಗುತ್ತದೆ. ನೆಲ ಉಳಲಿರುವ ಬಸವಣ್ಣಗಳಿಗೆ ಪ್ರಸಾದ ನೀಡಿ ಭೂಮಿಯಲ್ಲಿ ಬೆನಕನ ಪೂಜೆ ಮಾಡಿ( ಗೊಬ್ಬರ ಪೂಜೆ) ರೈತ ಬೇಸಾಯದ ಆರಂಭ ಮಾಡುತ್ತಾನೆ.

" ಹೂಡೋದು ಹೊಸ ಎತ್ತು
ಊಳೋನು ಹೊಸ ಮಗ
ಕೂಗು ಕೇಳವ್ವ ಭೂತಾಯಿ
ವಲ್ಲಿ ಕಟ್ಯಾನೆ ದುಡಿಯೋಕೆ"

ಎಂದು ಹಾಡುವ ರೈತನು ಹೊಸದಾಗಿ ಮದುವೆ ಆದವ.ಬೇಸಾಯದ ಆರಂಭದಲ್ಲಿ ಪತ್ನಿಯೊಂದಿಗೆ ಜೋಡಿ ಇದ್ದವ ಆಷಾಡಕ್ಕೆ ಆಕೆಯಿಂದ ದೂರ ಇರಬೇಕಾಗುತ್ತದೆ.ಆಷಾಡ ಮಾಸ ದುಡಿವ ರೈತರಿಗೆ ಬಹು ಮುಖ್ಯ . ಅದು ಮುಂಗಾರಿನ ಅಬ್ಬರದ ಕಾಲ. ಬಿತ್ತಿದ ಬೀಜ ಉಳಿಸಿಕೊಳ್ಳುವ ಜವಾಬ್ದಾರಿಗಳು ಆತನ ಹೆಗಲ ಮೇಲಿರುತ್ತದೆ.ಹೊಲವೇ ನೆಲೆಯಾದ ರೈತನಿಗೆ ಬಿಡುವೆಂಬುದು ಆ ಕಾಲದಲ್ಲಿ ಇರಲಾರದು.ಆಗೆಲ್ಲಾ ರೈತ..

" ಕರಿಯೆತ್ತ ಕಾಳಿಂಗ ಬಿಳಿಯೆತ್ತ ಮಾಲಿಂಗ
ಸರದಾರನೆತ್ತ ಸಾರಂಗ"

ಎನ್ನುತ್ತ ಹೊಲದ ಕೆಲಸಗಳಲ್ಲೇ ಮುಳುಗಿರುತ್ತಾನೆ.ಗಾಳಿ,ಮಳೆ, ಬಿಸಿಲು ಎನ್ನದ ಆತನಿಗೆ ಆಷಾಢ ಪತ್ನಿಯ ನೆನಪು ತಂದರೂ ಆತ ಶ್ರಾವಣ ಪಂಚಮಿಗಾಗಿ( ಹಾಲು ತೆನೆಗಳ ವರೆಗೂ) ಕಾಯಬೇಕಾಗುತ್ತದೆ.ದುಡಿವ ಕೆಲವರಿಗಂತೂ ಗಾಳಿ,ಮಳೆ,ಬಿಸಿಲಿನ,ದಿನಗಳಿಗಿಂತಹ ಮನೆಯೊಳಗೇ ಬೆಚ್ಚಗೆ ಕಳೆವ ಮಹಿಳೆಯ ಜೀವನವೇ ಸೊಗಸು ಎನಿಸುತ್ತದೆ.



ಶ್ರಾವಣ ಪಂಚಮಿಯ ತನಕ ಒಕ್ಕಲಿಗರ ಮನೆಯಲ್ಲಿ ಕೂಡಿಟ್ಟ ಹಳೆಯ ಕಾಳುಗಳು ತೀರಿ ಹೋಗುತ್ತ ಬರುವುದರಿಂದಲೇ ಹೊಲ ನಂಬಿಕೊಂಡವರಿಗೆ ಈ ಕಾಲ ಕಷ್ಟದ ಕಾಲವೇ.ಒಕ್ಕಲಿಗರ ನಂಬಿದ ಕೂಲಿಕಾರರಿಗಂತೂ ಇನ್ನೂ ದುರ್ಧಿನಗಳ ಕಾಲ.ಒಕ್ಕಲಿಗನ ನಂಬಿದ ಹೊಲೆಯನ " ಯಾಕೆ ಅಳತಿ ಹೊಲೆಯಾ ಅಂದ್ರೆ ಮುಂದ ಬರುವ ಆಷಾಢಕ್ಕಾಗಿ ಎಂದ" ಎಂಬ ಗಾದೆಯು ತಳ ಸಮುದಾಯಗಳ ಬಾಳಿನ ಸಾಹಿತ್ಯಿಕ ಮತ್ತು ಆತ್ಮಕಥೆಗಳ ನೆನಪು ಮೂಡಿಸುತ್ತವೆ.ಆಚರಣೆಗಳೆಂಬ ಜನಪದ ಲೇಖನಗಳ ವಿವರಣೆಗಳಲ್ಲಿ ಕಾಣಿಸುವ ಬೆಳಕಿದೆ ಆದರೆ ಕಾಣದ ಇರುಳು ಮರೆಯಾಗಿದೆ.

ಆಯಗಾರರು ವರ್ಷದ ಚಾಕರಿ ಸೇವೆಗೆ ಪಡೆವ ಮುಷ್ಟಿ ಕಾಳನ್ನ ಬ್ರಹ್ಮದೇವ ಹದಳಿಗಿ ಅವರ ಚಾಕ್ರಿ ನಿಂಬಜ್ಜ ತೋರುತ್ತದೆ." ಆಯ ಕೇಳಾಕ ಹೋದ್ರ ಬಿಕ್ಷೆ ಹಾಕ್ದಂಗ ನಾಕು ಮುಷ್ಟಿ ಭತ್ತ ಕೊಡ್ತಾರು,ನಾವೇನು ಬಿಕ್ಷೆ ಬೇಡಾಕ ಹೋಗೇವೇನು?, " ಏನವ್ವ ತಾಯಿ,ಗಿರಿಜವ್ವ ನಾಕು ಬೊಗಸೆ ಹೆಚ್ಚು ಹಾಕು. ಮುಂದಿನ ವರ್ಷಕ್ಕೆ ರಾಶಿ ಇನ್ನೂ ಹಲಸತೈತಿ.ನಮ್ಮಪ್ಪ ಮಳಿ ಮಲ್ಲಪ್ಪ ಪ್ರತಿ ವರ್ಷನೂ ಕಣ್ಣು ಮುಚ್ಚಿ ಕುಂದ್ರಲ್ಲ" ಎಂದು ದೈನೇಸಿ ಬಿಟ್ಟು ಬೇಡಿಕೊಂಡ್ರೆ . " ನೀವು ಮಾಡ ಕೆಲಸಕ್ಕೆ ಇನ್ನೆಷ್ಟು ಕೊಡ್ತಾರು,ನಡೆದು ಬಂದ ನಡಿ ಐತಿ,ಎಲ್ಡು ಬೊಗಸೆ ಕೊಡ್ತಾರಪ್ಪ ಅನ್ಬೇಕಾ!"ಇದು ಪಟಗಾಣೀ,ಬಾರಿಕೋಲು,ಮೂಗುದಾಣ,ಕೋಡು ಬಾರು,ಚಪ್ಪಲಿ ಕಾಯಕದ ಮಾದಿಗರ ಕೊರಗು.

ನೀಡಲಾರದ ಗೌಡರ ಮನೆಯ ಹಗೇವು ಖಾಲಿಯೂ ಅಲ್ಲ, ಎಂಬುದನ್ನ ಈ ಚಾಕರಿ ನಿಂಬಜ್ಜ ಕಾದಂಬರಿಯೇ ನಿರೂಪಿಸುತ್ತದೆ.ದೇಶ ಬಹುರಾಷ್ಟ್ರೀಯ ಕಂಪನಿಗಳು,ಎಸ್.ಈ.ಜೆಡ್,ಲ್ಯಾಂಡ್ ಕನ್ವರ್ಟಗಳೆಂದು ಹಣದ ಜೊತೆಗೆ ಕಾರ್ಡ ಲೆಸ್ ವ್ಯವಹಾರ ನೆಡೆಸಿ ಅಭಿವೃದ್ಧಿ ಎಂಬ ಹೆಸರು ಸೂಚಿಸಿದರೂ ಹಳ್ಳಿಯ ಗೌಡರ ಮನೆಗಳು ಈಗಲೂ ಜಮೀನ್ದಾರಿ ಜಾಗಗಳಲ್ಲಿ ನಿಂತು ವಸ್ತು ವಿನಿಮಯ ಪದ್ದತಿಯನ್ನೇ

ಆಷಾಡ ಕಾಲ ಗೌಡರ ಮನೆಗಳ ನಗೆ ಹಬ್ಬಗಳ ಆಚರಣೆಯ ಕಾಲವೂ ಹೌದು.ಇವು ಆಯಾ ಓಣಿಯ ಪ್ರಧಾನ ಆಯಗಾರಿಕಯ ಸಮುದಾಯಕ್ಕೇ ಸೀಮಿತವಾದವು.

**ಗುಳ್ಳವ್ವನ ಪೂಜೆ:**

ಇದು ಗೌಡರ ಓಣಿಯ ಒಕ್ಕಲು ಹೆಣ್ಣು ಮಕ್ಕಳು ಕೆರೆದಂಡೆಯ ಮಣ್ಣು ತಂದು ಇಲ್ಲವೇ ಕುಂಬಾರರ ಮನೆಯ ತಿಗರಿಯ ಮಣ್ಣು ತಂದು ದೊಡ್ಡ ಜಗಲಿಯ ಮೇಲಿಟ್ಟು ಗುಳ್ಳವ್ವನನ್ನ ಮಾಡಿ ಗರುಕೆ,ಹೂವುಗಳು ಹಸಿರು ಸೀರೆ ಕುಬುಸಗಳಿಂದ ಪೂಜಿಸಿ ಹಬ್ಬದ ಅಡುಗೆಗಳನ್ನ ಮಾಡಿ ರಾತ್ರಿಯಿಡೀ ಜಾಗರಣೆಯಲ್ಲಿ ಹಾಡುತ್ತಾ,ಕಥೆಗಳನ್ನ ಹೇಳುತ್ತಾ,ನಗುತ್ತಾ, ಆಡುತ್ತಾ ಕಾಲ ಕಳೆಯುತ್ತಾರೆ,ಹೆಣ್ಣುಮಕ್ಕಳೇ ಸೇರಿಕೊಂಡು ನಡೆಸುವ ಈ ಹಬ್ಬದಲ್ಲಿ ಪುರುಷರು ಊಟಕ್ಕೆ ಮಾತ್ರ ಸೀಮಿತ.ಮರುದಿನ ಗುಳ್ಳವ್ವನನ್ನ ಗಂಗಮ್ಮನಿಗೆ ಕಳಿಸಿ ಬನದೂಟವನ್ನೂ ಆಚರಿಸುತ್ತಾರೆ.

**ಚೆಂಗಳಿಕೆಪ್ಪ:**

ನಾಗರ ಪಂಚಮಿ ಆದ ವಾರದೊಳಗೇ ನಡೆವ ಈ ಹಬ್ಬ ಊರ ಗೌಡಪ್ಪನ ನೇತೃತ್ವದಲ್ಲಿ ನಡೆಯುತ್ತದೆ.ನಗಿಸಲಿಕ್ಕೆಂದೇ ನಡೆವ ಈ ಹಬ್ಬ ಊರ ಮದ್ಯದ ಬೆನಕನ ಗುಡಿ ಮುಂದೆ ಇಲ್ಲವೇ ಈರಣ್ಣನ ಗುಡಿ ಮುಂದೆ ನಡೆಯುತ್ತದೆ.ಬಡಿಗೇರ ಮನೆಯಲ್ಲಿನ ಈ ಹಿಂದೆಯೇ ಮಾಡಿಟ್ಟ ಎರಡು ಗಂಡು ಮತ್ತು ಹೆಣ್ಣು ಗೊಂಬೆಗಳನ್ನ ತಂದು ಊರ ಪ್ರಧಾನ ಆಯಗಾರರಾದ ಬಡಿಗೇರು,ಕುಂಬಾರರು, ಕಮ್ಮಾರರು,ಅಕ್ಕಸಾಲಿಗಳು,ಜೇಡರು, ಅಪ್ರಧಾನ ಆಯಗಾರರೆನಿಸಿದ ಕುರುಬರು,ಬಾರಿಕೇರು,ತಳವಾರು,ಕೊನೆಯ ಆಯಗಾರರಾದ ಹೊಲೆಮಾದಿಗರಾದಿಯಾಗಿ ಒಂದೆಡೆ ಸೇರಿಕೊಂಡು ಎರಡು ಗುಂಪುಗಳಾಗಿ ಮಾರ್ಪಡುತ್ತಾರೆ.ಇಲ್ಲಿ ಹೊಲೆಯರು ಸನಾಯಿ ಕಾಯಕ ಮಾಡಿದರೆ ,ಮಾದಿಗರು ಹಲಗೆ ಬಾರಿಸುವ ಕಾಯಕ ಮಾಡುತ್ತಾರೆ, ಹೆಣ್ಣು ಕೇಳಲು ಬರುವ ಗಂಡಿನ ಕಡೆಯ ಗುಂಪಿಗೆ ಹೆಣ್ಣಿನ ಕಡೆಯ ಗುಂಪಿನವರು ನಾನಾ ಬಗೆಯಲ್ಲಿ ಹಂಗಿಸುತ್ತಾ,ರೇಗಿಸುತ್ತಾ ,ಛೇಡಿಸುತ್ತಾ ಹಾಸ್ಯ ಸನ್ನಿವೇಶ ನಿರ್ಮಾಣ ಮಾಡುತ್ತಾರೆ.ಪುರವಂತರ ಆಚರಣೆ ಎಂದು ಕರೆವ ಈ ಗುಂಪಿನ ನಡುವೆಯೇ ಗೋಣೀಚೀಲ,ಹಳೆಯ ಬಟ್ಟೆ,ಬರಿಗಳನ್ನ ಸುತ್ತಿಕೊಂಡ ವಿದೂಷಕ,ಬಯಲಾಟ ಆಡುವ ರಕ್ಕಸರ ತಂಡಗಳೂ ನೆರೆದು ರಂಜಿಸುತ್ತವೆ.ಹಾಗೇ ಜನ ರಂಜಿಸಲು ಹುಸಿ ಕುಸ್ತಿ ಪಂದ್ಯಗಳೂ ನಡೆಯುತ್ತವೆ. ಆನಂತರ ನೆರೆದ ಊರ ಮಹಿಳೆಯರು ಪುರುಷರೆನ್ನದೆ ಎಲ್ಲರ ಕಡೆಗೂ ಸಗಣಿಯನ್ನು ಎರಚಲಾಗುತ್ತದೆ. ನಗೆಯ ಹಬ್ಬ ಮುಗಿದ ಮೇಲೆ ಹೊಲೆ ಮಾದಿಗರ ಮೇಳಗಳೊಂದಿಗೆ ಗೊಂಬೆಗಳ ನರ್ತನ ನಡೆಯುತ್ತದೆ.ಕೊನೆಗೆ ಗಂಗೆ ಪೂಜೆಯ ಮೂಲಕ ಹಬ್ಬ ಮುಗಿಯುತ್ತದೆ.ಇಲ್ಲೂ ಮರುದಿನ ಊರ ಪ್ರಧಾನರ ಮನೆಗಳಲ್ಲಿ ಹೋಳಿಗೆಯ ಹಬ್ಬ ಮಾಡುತ್ತಾರೆ.

ಇದು ಬೆಳೆ ಕೈಗೆ ಬರುವ ಹಂತವಾದ್ದರಿಂದ ಇಲ್ಲಿ ರೈತರೂ ನೆಮ್ಮದಿಯಾಗಿದ್ದಾರೆ,ದೂರ ದೂರವಿದ್ದ ನವಜೋಡಿಗಳೂ ಒಂದೆಡೆ ಸೇರಿವೆ.ದುಡಿಮೆಯ ಒತ್ತಡಗಳು ಕರಗಿ ನಿರಾಳವಾದ ಕಾಲವಿದು. ಗೌಡರ ಕೇಂದ್ರಿತವಾದ ಈ ಹಬ್ಬವು ಒಂದು ರೀತಿಯಲ್ಲಿ ವಡ್ಡಾರಾಧನೆಯ ಕಾರ್ತಿಕ ಋಷಿಯ ಕಥೆಯ ರಾಜ ಹೆಂಡತಿಯನ್ನ ನಗಿಸಲು ನೆರೆಸಿದ ಕಥನವನ್ನ ನೆನಪಿಸುತ್ತದೆ. ಆಷಾಢದ ಗುಳ್ಳವ್ವ ಪ್ರಧಾನ ಒಕ್ಕಲಿಗ ಮಹಿಳೆಯರ ಹಬ್ಬವಾದರೆ,ಪಂಚಮಿಯ ಚಂಗಳಿಕೆಪ್ಪ ಪ್ರಧಾನ ಒಕ್ಕಲಿನ ಗಂಡು ಮಕ್ಕಳ ಹಬ್ಬವಾಗಿದೆ.

ಈ ನಡುವೆ ಸುಳಿಯಲಾರದ,ಕಾಣಲಾರದ ಸದ್ದೇ ಇರದ ಕೂಲಿಕಾರರ ಹಸಿವಿನ ಗೆರೆಗಳು ಅನೇಕ.ಹಸಿವಿಗಾಗಿ ಎತ್ತಿನ ಜೊತೆಗೆ ನೊಗಕ್ಕೆ ಹೆಗಲು ಕೊಟ್ಟವರು,ಬಾಡಿನ ಆಸೆಗೆ ಮೈಮೇಲೆ ದೇವರು ಬರಿಸಿಕೊಳ್ಳುವರು,ಕದ್ದು ತೆನೆಗಳನ್ನ ತಂದು ಬೆಂಕಿಯಲ್ಲಿ ಕಾಯಿಸಿ ಮನೆಯವರನ್ನೆಲ್ಲಾ ಕಲೆಸಿ ರಾತ್ರಿಯಿಡೀ ತಿನ್ನುವವರು,ಹೊಲ ಹೊಲ ತಿರುಗಿ ಬೆರಣಿ ಆರಿಸಿಕೊಂಡು ತಂದು ಸೋಸಿ ಅದರೊಳಗಿನ ಜೋಳಗಳನ್ನ ಒಣಗಿಸಿ ಹಿಟ್ಟು ಮಾಡಿ ತಿನ್ನುವುದು,ಅನ್ನ ತಿನ್ನಲಿಕ್ಕೆ ಬಂದವನನ್ನ ಜಾತಿ ಕಾರಣಕ್ಕಾಗಿ ಹೊರಗೇ ಕೂಡಿಸಿ ಮಣ್ಣಿನ ಮುಚ್ಚಳದಲ್ಲಿ ನೀಡುವುದು . ತಿನ್ನುವಾಗಲೇ ಸುಳಿಗಾಳಿಗೆ ಅದರೊಳಗೆ ಮಣ್ಣು ಬಿದ್ದರೂ ಹಸಿದ ಹುಡುಗ ಅದನ್ನೇ ನೆಮಲುವುದು, ಊಟಕ್ಕೆ ಹೋದ ತಳವರ್ಗಗಳು ಊಟದ ಸರದಿಗಾಗಿ ಅರ್ಧ ರಾತ್ರಿಯವರೆಗೂ ಕಾಯುವುದು,ಏರುವ ದೊಡ್ಡ ಹೊಳೆಯ ಗಂಡಾಂತರವನ್ನು ಲೆಕ್ಕಿಸದೇ ಒಬ್ಬೊಬ್ಬರೂ ಸಾಲಾಗಿ ಕೈ ಕೈ ಹಿಡಿದು ಸಾಗುವುದು ಮೊದಲಾದ ಚಿತ್ರಗಳನ್ನ ಈ ನಾಡಿನ ದಲಿತ ಆತ್ಮ ಕಥೆಗಳು ಕಟ್ಟಿಕೊಡುತ್ತವೆ.

ಈ ಚಿತ್ರಗಳು ಭೂಮಿಯ ಒಡೆಯರ ನಿಲುವುಗಳನ್ನೂ ಮತ್ತು ಭೂಮಿ ಒಡೆಯರುಗಳು ಎಸಗುವ ತಾರತಮ್ಯಗಳನ್ನ ತಿಳಿಸುತ್ತವೆ. ತೆಲುಗಿನ ದಿಗಂಬರ ಕವಿ ಚರಬಂಡರಾಜು ಅವರ ಕವಿತೆ ಹೇಳುವಂತೆ ಬಯಲು ಸೀಮೆಯ ತಳವರ್ಗಗಳ ಸ್ಥಿತಿ

" ಊರ ಕಟ್ಟಿ ಊರು ಬೆಳಸಿ
ಕೇರಿಗೊಂದು ಬಾವಿ ತೋಡಿ
ದಿಕ್ಕಿಲ್ಲದ ಪಕ್ಷಿಯಾದೆಯಾ ಓ ರಾಮಣ್ಣ

ಊರಾಚೆ ನಿನ್ನ ನಿಟ್ಟರೋ.
ಊರು ಗುಡಿಸಿ ಕೇರಿ ಗುಡಿಸಿ
ಸತ್ತ ಹೆಣವ ಮಸಣಕೊಯ್ದು
ಬಿಟ್ಟಿ ಚಾಕರಿ ನಿನ್ನ ದಾಯಿತೋ ಓ ರಾಮಣ್ಣ

ಹಳ್ಳಿಯ ಹಬ್ಬಗಳೆಂಬ ಧಾರ್ಮಿಕ ಕಾನೂನುಗಳು,ಪುರಾಣಗಳೆಂಬ ನೈತಿಕ ಕಾನೂನುಗಳು ಇಲ್ಲಿನ ಕೂಲಿಕಾರರನ್ನ ಅಧೋಲೋಕಕ್ಕೇ ತಳ್ಳಿವೆ.ಪ್ರಭುಗಳು,ಪಾಳೆಗಾರರ ಕಾಲದಿಂದ ಬ್ರಿಟೀಷರ ಕಾಲದ ತನಕ ತಳವರ್ಗಗಳು ಕೂಲಿ ಕೇಳಲಾಗದ ಬಿಟ್ಟಿಯಾಳುಗಳಾಗಿಯೂ, ಒಡೆಯರ ಜಮೀನಿನಲ್ಲಿ, ಪ್ರಭುತ್ವಗಳ ಊಳಿಗದಲ್ಲಿ,ದೇವಾಲಯಗಳ ಸೇವೆಯಲ್ಲಿ ಸರಕಿನಂತೆ ಮಾರಾಟವಾಗುತ್ತಿದ್ದರು, ಒಬ್ಬರಿಂದ ಒಬ್ಬರಿಗೆ ಕೊಡುಗೆಯಂತೆ ನೀಡಲ್ಪಡುತ್ತಿದ್ದರು.

ನಗೆಯ ತಾಣಗಳಾದ ಹಬ್ಬಗಳಲ್ಲಿ ಒಗ್ಗಟ್ಟು ಮೇಲಸ್ತರಕ್ಕೆ ಒಂದೆಂಬಂತೆ ಕಾಣುತ್ತದೆ.ಒಡೆದು ನೋಡಿದಾಗ ಅಲ್ಲಿನ ತಾರತಮ್ಯಗಳು ಹಲವು. ಕಣದ ರಾಶಿಯಂತೆ ಇವು ಕಾಣುವ ಬೆಳಕು ಮತ್ತು ಕಾಣದ ಇರುಳು.

## ಪರಿಭ್ರಮಣೆ



ಸುಳ್ಳಿನ ಭಿತ್ತಿಯೊಳಗೆ
ಜನಿಸಿದ ನಿಮ್ಮ ಮಾತುಗಳು
ಹರಿಯುತ್ತಿದೆ ನನ್ನ
ಮನದೊಳಗೆ

ಸುಳ್ಳು ಎಂದರೆ ಸುಳ್ಳಲ್ಲ
ನಿಜವೆಂದರೆ ನಿಜವಲ್ಲ
ಇವೇ ನನ್ನ ಸಂಕಟಗಳು

ಬಿಕರಿಗಿಟ್ಟ ಮಾಲಿನೊಂದಿಗೆ
ನಿಮ್ಮ ಸಂಬಂಧ

ಆಧ್ಯಾತ್ಮದ ಸುಳಿಯೊಳಗೆ
ನಿಮ್ಮ ಸಂಬಂಧ

ಹೊಂದಿದ ನಮ್ಮನ್ನೆಲ್ಲಾ
ಹಿಂದಕ್ಕೋಡಿಸುತ್ತಿದೆ

ನನ್ನಿರವನ್ನು ಗಮನಿಸದೆ
ಜೀವಿಸುವ ನಾನು

ಚೆಲ್ಲಾಪಿಲ್ಲಿಯಾದ
ಮನದೊಳಗೆ
ಬದುಕುತ್ತಿದ್ದೇನೆ

ಅಷ್ಟಕ್ಕೆ
ನೀವು ಸುಮ್ಮನಿರುವವರಲ್ಲ

ಕೊಚ್ಚಿದ ಮನದೊಳಗೆ
ಸುಳ್ಳಿನ ಸತ್ಯವನ್ನು
ತುಂಬುತ್ತಿರುವುದು
ನಿಮ್ಮ ಜಾಯಮಾನವೇ ಆಗಿದೆ

ಪರಿಭ್ರಮಣೆಗೆ ಒಳಗಾದ
ನಾನು
ಬಹಳ
ಸಂತೋಷ ಪಡುತ್ತೇನೆ

ಚೆನ್ನಾಟದ ಮುಖ ಬಿಂದುಗಳೊಳಗೆ
ಮುಳುಗುತ್ತೇನೆ
ಸುಳ್ಳುಗಳ ಕಾದು ಕೂತಂತೆ.



ಶೀಲಾ ಹಾಲ್ಕುರಿಕೆ

# ಮಿಂಚು ಧ್ಯಾನಸ್ಥ ಫಳಿಗೆಯ ಅನುಭಾವಗಳ ಗುಚ್ಚ

●ತುರುವನೂರು ಮಂಜುನಾಥ

ಪುಸ್ತಕ ವಿಮರ್ಶೆ


“ಮೌನದ ಚಿಪ್ಪಿನೊಳಗೆ
ಮಾತು ಮಗುವಂತೆ
ಮಲಗಿತ್ತು ನೋಡಾ
ಮನಕೊಳದೊಳಗೆ
ಅಲೆಗಳ ಬಡಿತವಿಲ್ಲ
ಮೌನದೊಳಗಿನ ಮೌನ”

ಮನುಷ್ಯನ ಬದುಕಿನ ಬಂಡಿಯಲ್ಲಿ ಸರಾಗವಾಗಿ ಸಾಗಬೇಕಾದಾಗ ಮೌನ ಎನ್ನುವುದು ಬೆಲೆ ಕಟ್ಟಲಾಗದ ಮಾಣಿಕ್ಯ ಅದನ್ನು ತಿಳಿದು ಬೆಳೆದರೆ ಮೌನ ಜೀವನದ ಒಟ್ಟಾರೆಯ ಬೆಳಗಾಗುತ್ತದೆ ಎನ್ನುವುದು ಅರ್ಥವಾಗುವ ರೀತಿಯಲ್ಲಿ ಬರೆದ ಈ ಕವನದಲ್ಲಿ ಆದ್ಯಾತ್ಮವಿದೆ, ಬದುಕಿನ ಪ್ರೀತಿಯಿದೆ ತಿಳುವಳಿಕೆಯ ಜಾಲ ವಿದೆ ಈ ಎಲ್ಲಾ ವಿಶೇಷಗಳು ಧ್ಯಾನಸ್ಥ ಫಳಿಗೆಯ ಅನುಭಾವದ ಭಾವಗಳ ಗುಚ್ಚ ಎಂದು ಹೇಳಬಹುದು.

ಹಿರಿಯ ಪತ್ರಕರ್ತ ಕಂ.ಕ.ಮೂರ್ತಿ ಅವರ ‘ಮಿಂಚು’ ಕವನ ಸಂಕಲನದಲ್ಲಿ ಅಡಗಿರುವ ಈ ಧ್ಯಾನಸ್ಥ ಫಳಿಗೆಯ ಮಿಂಚು ಎನ್ನುವ ಕವನದ ಸಾರಗಳು ಬದುಕಿನ ಹೊಂಬೆಳಕಾಗಿ ಎಲ್ಲೆಲ್ಲೂ ಪಸರಿಸುವ ಜೀವಾತ್ಮದ ಹುಸಿರಾಗಿವೆ; ಒನ್ನೊಂದು ಕವನದಲ್ಲಿಯೂ ಇಡೀ ಜೀವನದ ಚುಲುಮೆಯ ಸಿಂಚನವಿದೆ.

“ರಾತ್ರಿ ತಾರೆ, ನಿಹಾರಿಕೆ,ಚಂದಿರನ
ಒಡ್ಡೋಲಗ ನಡೆಸಿದ ಆಕಾಶ
ಬೆಳ್ಳಂಬೆಳಿಗ್ಗೆ ಬರಿದಾದ ಸರಳತೆಯಲ್ಲಿ
ಶಾಂತಿಯನ್ನು ಧೇನಿಸುತ್ತಿದೆ
ಅಲ್ಲಿ ಹೂವಂತೆ ಅರಳಿದ ಸೂರ್ಯ
ಜ್ಞಾನದ ಹಣತೆಯಂತೆ ಪ್ರಜ್ವಲಿಸುತ್ತಿದೆ.”

ಕತ್ತಲು-ಬೆಳದಿಂಗಳು ಕೇವಲ ನಿತ್ಯನಿಯಮದ ಸಂಕೇತಗಳಾಗಿರಬಹುದು ಆದರೆ, ಈ ಸಂಕೇತಗಳಲ್ಲಿಯೂ ಬದುಕಿನ ವಿಸ್ತಾರದ ಪ್ರಕೃತಿಯ ನಿಯಮಗಳು ಹೇಗೆ ಜೀವನದ ಹೊಂದಾಣಿಕೆಯಾಗಿವೆ ಎನ್ನುವುದನ್ನು ಹೇಳುತ್ತಲೇ ಕತ್ತಲು ಹೊರಟು ಹೋದನಂತರದ




ಬೆಳಗು ಶಾಂತಿಯ ಸಂಕೇತವಾಗಿ, ಶಾಂತಿಯ ಬಿತ್ತಿಯಲ್ಲಿ ಹೂ ಅರಳಿ ಜಗಕ್ಕೆ ಜ್ಞಾನದ ಹಣತೆಯನ್ನು ಹಚ್ಚುವ ಮೂಲಕ ಮನುಷ್ಯನ ಪ್ರಜ್ಞಾವಂತಿಕಯ ದ್ಯೋತಕವಾಗಿವೆ ಎನ್ನುವುದನ್ನು ಉಪಮೇಮಗಳ ಮೂಲಕ ಸೆಳೆಯುವ ಪದಗಳು ಒಂದರ್ಥದಲ್ಲಿ ದ್ಯಾನದ ಬಲದಿಂದ ಹುಟ್ಟಿದ ಅನುಭಾವದ ಜೀವದ ಸೆಲೆಗಳು. ಹೀಗೆ ಒಟ್ಟಾರೆ ಕವನಗಳನ್ನು ಓದುತ್ತಾ ಹೋದರೆ ಅಲ್ಲಿ ನಮಗೆ ಜ್ಞಾನದ ಬಂಡಾರ, ದ್ಯಾನಸ್ಥದ ಅನುಭವಗಳು ಪ್ರಕೃತಿಯಲ್ಲಿನ ಚಿಲಿಪಿಲಿ ನಾದದ ಅವಲೋಕನಗಳ ವಿಕಾಸಗಳು ತೆರದಿಡುತ್ತವೆ. ಬದುಕಿನ ನಡೆಯನ್ನು ,ಬದುಕಿನ ಹಾದಿಯನ್ನು ಸವಿಸುವ ಸಾರವನ್ನು ಹೇಳುತ್ತಾ ಹೋಗುತ್ತವೆ , ಆ ಎಲ್ಲವೂ ಒಂದು ಪರಿಭ್ರಮಣದ ಮೂಸೆಯಲ್ಲಿಯೇ ವ್ಯಕ್ತವಾಗುತ್ತವೆ, ಹಾಗೆ ಕವನಗಳನ್ನು ವಿಸ್ತರಿಸುತ್ತಾ ವಿಕಾಸಿಸುತ್ತಾ ಸೆಳೆಯುವ ಆ ಗೂಡಾರ್ಥದ ಪದಗಳಿವೆಯಲ್ಲ ಅವು ನಮ್ಮೊಳಗೆ ಹುಟ್ಟಿದ ಧ್ಯಾನದ ಫಳಿಗೆಗಳು ಎನ್ನುವ ಅನುಭವವನ್ನು ಕೊಡುತ್ತವೆ ಅಷ್ಟರ ಮಟ್ಟಿಗೆ ಈ ಕವನಗಳು ನಮ್ಮನ್ನು ಆವರಿಸುತ್ತವೆ ;

ಹಾಗೆಯೇ ದೇವರ ಬಗ್ಗೆ ಹೇಳುತ್ತಾ:-

ದೇವರು ಎಲ್ಲಿದ್ದಾನೆ ಎಂದು ಹುಡುಕಿಎ
ಗುಡಿ, ಮಸೀದಿ,ಚರ್ಚುಗಳಲ್ಲಿ
ಕಾಣಲಿಲ್ಲ
ಅಗೋ ಮೂಡಣದಲ್ಲಿ
ಬೆಳಗಿನ ದೀಪಾರತಿ
ದೇವರ ಆಗಮನಕ್ಕೆ ಎಂತ ಸಡಗರದ ಸಿದ್ಧತೆ
ಅಂತರಂಗದ ಬಾಗಿಲು ತೆರಯಿತು
ದೇವರ ದರ್ಶನವಾಯಿತು.

ದೇವರ ಇರುವಿಕೆಯ ಬಗ್ಗೆ ನಂಬಿಕೆ ಬಗ್ಗೆ ಹಲವಾರು ರೀತಿಯ ಚರ್ಚೆಗಳು ನಡೆದಿವೆ ನಡೆಯುತ್ತಲೇ ಇವೆ ಆದರೆ ಇಲ್ಲಿ ಮೂರ್ತಿ ಅವರು ದೇವರೂ ಗುಡಿ ಗುಂಡಾರಗಳಲ್ಲಿ ದೇವರಿಲ್ಲ, ಪೃಕೃತಿಯ ಮಡಿಲಲ್ಲಿ ಸದಾ ಜೀವಂತವಾಗಿದ್ದಾನೆ ಚಂದ್ರನಂತೆ ಪ್ರಕಾಶಿಸುವ ಮೂಲಕ ಇಡೀ ಜಗತ್ತಿಗೆ ಬೆಳಕು ಕೊಡುವ ಮೂಲಕ ದೀಪ ಹಚ್ಚಿ ಆರತಿ ಮಾಡುವ ಮೂಲಕ ಬೆಳಗು ಹರಿಸಿ ಬದುಕಿನ ಆರಂಭಕ್ಕೆ ಮುನ್ನಡಿ ಬರೆಯುವದೇ ಅಲ್ಲವೇ ದೇವರು , ಎನ್ನುವುದನ್ನು ಅತ್ಯಂತ ಸರಳವಾಗಿ ದೇವರ ಬಗ್ಗೆ ಅರ್ಥೈಸಿದ್ದಾರೆ. ಹೀಗೆಯೇ ಹಲವಾರು ಕವನಗಳಲ್ಲಿ ಇಂತ ಹಲವಾರು ಜ್ಞಾನದ ಸಂಕೇತಗಳನ್ನು ಹರಡುತ್ತಾ ಹೋಗುತ್ತಾರೆ.

ಹಲವಾರು ಕವಿತೆಗಳು ಗಮನಾರ್ಹವಾಗಿವೆ ನಿಸರ್ಗದ ಒಡಲಾಗಿ ಮೂಡಿವೆ, ಆದರೆ ನಿಸರ್ಗ ಎಂದರೆ ಕಣ್ಣಿಗೆ ತಂಪನೀಯುವ ಸುಂದರತೆ ಮಾತ್ರ ಎಂಬ ಸಾಂಪ್ರದಾಯಿ ದೃಷ್ಟಿಯಿಂದ ದೂರವಾಗಿವೆ. ಇದೇ ಮೂರ್ತಿ ಅವರ ವಿಶೇಷತೆ, ಸಂಭ್ರಮ ಮತ್ತು ಸಂಕಟಗಳ ಕವಿತೆಯಲ್ಲೂ ನಿಸರ್ಗವನ್ನು ಒಳಗೊಳ್ಳುವ ಸಾಮಾಜಿಕ ಆಯಾಮಕ್ಕೆ ಚಾಚಿಕೊಳ್ಳಲಾಗಿದೆ, ಸುಂದರವೆನ್ನುವ ನಿಸರ್ಗದೊಳಗೆ ಸಂಕಟವನ್ನು ಕಾಣಿಸುವ ಕವಿತಾ ರಚನೆ ನಿಜಕ್ಕೂ ವಿಶೇಷ ಅನುಭವದಿಂದು ಹುಟ್ಟಿದ ಅಭಿವ್ಯಕ್ತಿ ವಿಧಾನವಾಗಿದೆ.

“ಮುಂಜಾನೆ ಮಾತ್ರವಲ್ಲ,ರಾತ್ರಿ ಸಹ
ಪ್ರಕೃತಿ ಅರಳುತ್ತದೆ, ಹಕ್ಕಿಗಳು
ಗೂಡು ಸೇರುವ ಹೊತ್ತು ಸಂಜೆಯ
ಎಳೆಯ ಕಿರಣಗಳಿಗೆ ನವಿರಾಗಿ ಮೊಗ್ಗು ಅರಳುವ
ಹೊತ್ತು
ಹೂವಿನ ಘಮ ಘಮ ಸುಸ್ತಾದಂತಿರುವ
ತಿಳಿಗಾಳಿಯಲಿ ಬೆರತು ಇಡೀ ಪರಿಸರಕ್ಕೆ
ಮರಳಿಸುವ ಹೊತ್ತು”

ಇಂತಹ ಸಾಲುಗಳು ಓದುಗರಿಗೆ ಇಷ್ಟವಾಗದೆ ಇರಲಾರದು, ಪೃಕತಿಯ ಸೌಂದರ್ಯದ ಜೊತೆ ಜೊತೆಯಲಿಯೇ ಹಕ್ಕಿಗಳ ಕಲರವದಲಿ ಹೂ ಮೊಗ್ಗುಗಳ ಘಮ ಘಮಮಿಸಿದರೂ ರಾತ್ರಿ ಗೂಡು ಸೇರುವ ಜೀವನ ಪಯಣದ ಚಕ್ರಾಕಾರದ ಪ್ರವೃತಿಯನ್ನು ಹೇಳಿರುವ ಪರಿ ನಿಜಕ್ಕೂ ಹಲವಾರು ಅರ್ಥಗಳನ್ನು ಇಲ್ಲಿ ಪೂರೈಸುತ್ತದೆ. ಬದುಕಿನ ಎಲ್ಲಾ ಮಗ್ಗಲುಗಳನ್ನು ಮತ್ತು ಕಷ್ಟಗಳ ಕೌಟಲ್ಯಗಳ ಕುರಿತು ತಿಳಿಸುವ ಮೂಲಕ ಬಂಡಾಯದ ಮನೋಧರ್ಮವನ್ನು ತೆರದಿಟ್ಟಿದ್ದಾರೆ. ಹೀಗೆ ಅವರ ಹಲವು ಕವಿತೆಯಳಲ್ಲಿಯೂ ಬಂಡಾಯದ ವಾಸನೆಯೂ ಗಮ್ಮೆನ್ನುತ್ತದೆ ಜೀನದ ದೌರ್ಬಲ್ಯಗಳ ಕುರಿತು ಸಾಂಕೇತಿಕಗಳ ಉಪಮೇಗಳ ಮೂಲಕ ಹೇಳಿರುವ ಹಲವಾರು ಕವಿತೆಗಳಲ್ಲಿ ಜೀವಸೆಲೆಗಳ ಸೌಮ್ಯತೆಗಳ ಮೌನವಿದೆ.

ಇಲ್ಲಿ ಸಹಜೀವಗಳ ಒಡಲೊಳಗಿನ ಸಂಕಟದ ಅನಾವರಣ ಎನ್ನುವ ಸಹಜತೆ ಇಲ್ಲಿನ ಕವಿತೆಗಳ ಅಂತಃಸತ್ವ ದಮನಕ್ಕೋಗಾದ ಜೀವಗಳ ಅಂತರಂಗಕ್ಕಿಳಿದು ಕರುಣೆಯ ಕಣ್ಣುಗಳಿಂದ ಕವಿತೆಯಾಗಿಸುವ ತಾಕ್ಕತ್ತು ಈ ಕವಿತೆಗಳಿಗಿವೆ

ಆದರೆ ಮೂರ್ತಿ ಅವರು ಈ ಕವಿತೆಗಳಿಗೆ ಒಂದು ಶೀರ್ಷಿಕೆಯನ್ನು ನೀಡಬೇಕಿತ್ತು ಒಂದೇ ಪದ್ಯವೆನ್ನುವಂತೆ ಎಲ್ಲವನ್ನೂ ಒಂದಾದ ಮೇಲೊಂದರಂತೆ ಪದ್ಯಗಳನ್ನು ಜೋಡಿಸುತ್ತಾ ಹೋಗಿದ್ದಾರೆ ಯಾವುದೇ ಕವಿತೆಗೆ ಶೀರ್ಷಿಕೆ ಇಲ್ಲದೆ ಹೋದರೆ ಅದರ ಗುರಿತು ಇಲ್ಲದಂತಾಗಿ ಬಿಡುತ್ತದೆ ಹಾಗಾಗಿ ಶೀರ್ಷಿಕೆ ಅಗತ್ಯವನ್ನು ಈ ಕವಿತೆಗಳು ಸಾರಿ ಹೇಳುತ್ತವೆ. ಆದರೆ ಕವಿತೆಗಳಲ್ಲಿ ಶಕ್ತಿಯಿದೆ ಅನುಭವನ್ನು ಅನುಭಾವವಾಗಿಸುವ ಬೆಳಕನ್ನು ಚಿದ್ ಬೆಳಗಾಗಿಸುವ ನೋವನ್ನು ನಂಜಿನಾಚೆ ತಂದು ದೇವನುಡಿಯಾಸುವ ಶಕ್ತಿ ಈ ಕವಿತೆಗಳಿಗಿವೆ ಇಂಥ ಕಾವ್ಯವೇ ಕಂ.ಕ.ಮೂರ್ತಿಯವರ ಕಾವ್ಯಶಕ್ತಿಯಾಗಿ ಮೂಡಿವೆ.

# ಕೊಹ್ಲಿಗೆ ಶ್ರೇಯಸ್ಸ್ ಕಾಂಪಿಟೇಷನ್-ಮೂರನೇ ಕ್ರಮಾಂಕಕ್ಕೆ ಚಿತ್ತ

●ಮಲ್ಲಿಕಾರ್ಜುನ ಹಿರೇಮಠ್






2 ಮಿಲಿಯನ್‌ಗಿಂತಲೂ ಹೆಚ್ಚು ಬಿನೊಮಿಸ್ಟ್‌ಗಳ ಜೊತೆಗೆ ಹೆಚ್ಚುವರಿ ಆದಾಯ ಗಳಿಸಿ ಟೀಂ ಇಂಡಿಯಾದ ಮಾಜಿ ನಾಯಕ ವಿರಾಟ್ ಕೊಹ್ಲಿಗೆ ಒಂದು ಕಾಲದಲ್ಲಿ ಭಾರತ ಕ್ರಿಕೆಟ್‌ನಲ್ಲಿ ತಾನು ಆಡಿದ್ದೇ ಆಟವಾಗಿತ್ತು. ಆದ್ರೀಗ ಕಿಂಗ್ ಕೊಹ್ಲಿಗೆ ಟೀಮ್ ಇಂಡಿಯಾದಲ್ಲಿ ಸಂಕಷ್ಟ ಎದುರಾಗಬಹುದಾದ ಅನುಮಾನ ಸೃಷ್ಟಿಯಾಗಿದೆ.

ಟಿ20 ವಿಶ್ವಕಪ್‌ನ ದುರಂತ ಸೋಲಿನ ನಂತರ, ಪರಿಸ್ಥಿತಿ ಅವರಿಗೆ ನಕಾರಾತ್ಮಕವಾಗಿ ಪರಿಣಮಿಸಿತು. ಟಿ20 ನಾಯಕತ್ವ ಬಿಟ್ಟುಕೊಟ್ಟಿದ್ದ ಕೊಹ್ಲಿಯನ್ನ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಏಕದಿನ ನಾಯಕತ್ವದಿಂದ ವಜಾಗೊಳಿಸಿತು. ಆದ್ರೆ ಅದಾಗಲೇ ಫಾರ್ಮ್ ವೈಫಲ್ಯ ಅನುಭವಿಸಿದ್ದ ವಿರಾಟ್ ನಾಯಕತ್ವದ ಜವಾಬ್ದಾರಿಯನ್ನು ಬಿಟ್ಟುಕೊಟ್ಟರೂ ಮೊದಲಿನಂತೆ ಬ್ಯಾಟಿಂಗ್ ಮಾಡಲು ಆಗುತ್ತಿಲ್ಲ. ಕಳೆಗುಂದಿದೆ ಕೊಹ್ಲಿ ಬ್ಯಾಟಿಂಗ್ ಕಳೆದ ಎರಡು ವರ್ಷಗಳಿಂದ ವಿರಾಟ್ ಕೊಹ್ಲಿ ಅಭಿಮಾನಿಗಳು ಶತಕಕ್ಕಾಗಿ ಕಾಯುತ್ತಿದ್ದಾರೆ. ವಿರಾಟ್‌ನ ವೇಗದ ಬ್ಯಾಟಿಂಗ್ ನೋಡಲು ಕಾತರರಾಗಿದ್ದಾರೆ. ಆದ್ರೆ ವಿರಾಟ್ ಮೊದಲಿನಂತೆ ಬ್ಯಾಟ್ ಬೀಸುತ್ತಿಲ್ಲ. ಮೊದಲಿನಂತೆ ವೇಗವಾಗಿ ಆಡಲು ಸಾಧ್ಯವಾಗುತ್ತಿಲ್ಲ. ಈ ಹಿನ್ನೆಲೆಯಲ್ಲಿ ಮುಂಬರುವ ಟಿ20 ವಿಶ್ವಕಪ್ ನಲ್ಲಿ ಕೊಹ್ಲಿ ಸ್ಥಾನಕ್ಕೆ ಕಂಟಕ ಎದುರಾಗಿದೆ. ವಿರಾಟ್ ಕೊಹ್ಲಿ ವಿಶ್ವಕಪ್‌ಗೂ ಮುನ್ನ ಉಳಿದ ಸಮಯದಲ್ಲಿ ಉತ್ತಮ ಪ್ರದರ್ಶನ ನೀಡುವ ಅನಿವಾರ್ಯತೆ ಸೃಷ್ಟಿಸಿದ್ದಾರೆ. ಇಲ್ಲವಾದಲ್ಲಿ ಟೀಮ್ ಮ್ಯಾನೇಜ್ ಮೆಂಟ್ ಈ ಹಿರಿಯ ಕ್ರಿಕೆಟಿಗನನ್ನು ನಿರ್ದಾಕ್ಷಿಣ್ಯವಾಗಿ ಹೊರಗಿಡುವ ಸಾಧ್ಯತೆ ಇದೆ. ಸದ್ಯದಲ್ಲಿ ಯಾವುದೇ ಟಿ20 ಟೂರ್ನಿಗಳಿಲ್ಲದಿದ್ದರೂ, ಮಾರ್ಚ್ 26ರಿಂದ ನಡೆಯಲಿರುವ ಐಪಿಎಲ್ ಅವರ ವೃತ್ತಿಜೀವನಕ್ಕೆ ನಿರ್ಣಾಯಕವಾಗಲಿದೆ. ಸೂರ್ಯಕುಮಾರ್, ಶ್ರೇಯಸ್ ಅಯ್ಯರ್‌ನಿಂದ ತೀವ್ರ ಪೈಪೋಟಿ ಇದುವರೆಗೂ ವಿರಾಟ್ ಕೊಹ್ಲಿ ಟೀಂ ಇಂಡಿಯಾದಲ್ಲಿ ಖಾಯಂ ನಂ.3 ಆಟಗಾರರಾಗಿದ್ದರು. ಆದರೆ ಇತ್ತೀಚಿನ ದಿನಗಳಲ್ಲಿ ಸೂರ್ಯಕುಮಾರ್ ಯಾದವ್ ಮತ್ತು ಶ್ರೇಯಸ್ ಅಯ್ಯರ್ ಟಿ20 ಸ್ವರೂಪದಲ್ಲಿ ಸ್ಥಾನವನ್ನು ಪಡೆದುಕೊಳ್ಳುತ್ತಿದ್ದಾರೆ. ಅವಕಾಶ ಸಿಕ್ಕಾಗಲೆಲ್ಲ ಬ್ಯಾಟ್ ನಿಂದ ಅಬ್ಬರಿಸುತ್ತಿದ್ದಾರೆ. ಅದರಲ್ಲೂ ಸೂರ್ಯ ಹೆಚ್ಚು ಆಕ್ರಮಣಕಾರಿ ಆಟದ ಶೈಲಿಗೆ ಇಳಿಯುತ್ತಿದ್ದಾರೆ. ಕಳೆದ ವರ್ಷ ಶ್ರೇಯಸ್ ಅಯ್ಯರ್ ಗಾಯಗೊಂಡ ನಂತರ ಅವಕಾಶ ಪಡೆದ ಸೂರ್ಯಕುಮಾರ್ ತಮ್ಮದೇ ಶೈಲಿಯಲ್ಲಿ ಮಿಂಚಿದ್ದರು. ನಾಲ್ಕನೇ ಸ್ಥಾನದಲ್ಲಿ ಬ್ಯಾಟಿಂಗ್ ಮಾಡುವ ಮೂಲಕ ತಂಡದಲ್ಲಿ ತಮ್ಮ ಸ್ಥಾನವನ್ನು ಭದ್ರಪಡಿಸಿಕೊಂಡರು. ಐಪಿಎಲ್: ನೂತನ ನಾಯಕ ಯಾರೆಂದು ಘೋಷಿಸುವಲ್ಲಿ ಆರ್‌ಸಿಬಿ ತಡ ಮಾಡುತ್ತಿರುವುದು ಈ ಮೂವರಿಂದ! ಲಂಕಾ ವಿರುದ್ಧ ಅಬ್ಬರಿಸಿದ ಶ್ರೇಯಸ್ ಅಯ್ಯರ್ ಶ್ರೇಯಸ್ ಕೂಡ ಇತ್ತೀಚೆಗೆ ತಾನೆಷ್ಟು ಅಪಾಯಕಾರಿ ಬ್ಯಾಟ್ಸ್‌ಮನ್ ಅನ್ನೋದನ್ನ ಸಾಭೀತುಪಡಿಸಿದ್ರು, ಶ್ರೀಲಂಕಾ ವಿರುದ್ಧದ ಇತ್ತೀಚಿನ ಟಿ20 ಸರಣಿಯೇ ಅದಕ್ಕೆ ಸಾಕ್ಷಿ. ಅವರು ಎಲ್ಲಾ ಮೂರು ಪಂದ್ಯಗಳಲ್ಲಿ ಕೊಹ್ಲಿಯ ಜಾಗದಲ್ಲಿ ಅಬ್ಬರಿಸಿದ್ದಷ್ಟೇ ಅಲ್ಲದೆ ಮೂರು ಪಂದ್ಯಶ್ರೇಷ್ಠ ಇನ್ನಿಂಗ್ಸ್‌ಗಳನ್ನು ಆಡಿದರು. ಕೊನೆಯ ಕ್ಷಣದಲ್ಲಿ ಸೂರ್ಯ ಕುಮಾರ್ ಟಿ20 ಸರಣಿಯಿಂದ ಹೊರಗುಳಿದಿದ್ದು, ವಿರಾಟ್ ಕೊಹ್ಲಿಗೆ ವಿಶ್ರಾಂತಿ ನೀಡಲಾಗಿದೆ. ಇದರೊಂದಿಗೆ ಶ್ರೇಯಸ್ ಅಯ್ಯರ್ (57, 74, 73) ಫಸ್ಟ್ ಡೌನ್ ನಲ್ಲಿ ಬ್ಯಾಟಿಂಗ್ ಗೆ ಬಂದು ಧೂಳೆಬ್ಬಿಸಿದರು. ಅಜೇಯ ಹ್ಯಾಟ್ರಿಕ್ ಅರ್ಧಶತಕಗಳೊಂದಿಗೆ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ ಅಯ್ಯರ್ , ಈ ಸರಣಿಯಲ್ಲಿ ಒಟ್ಟು 174 ಸ್ಟ್ರೈಕ್ ರೇಟ್‌ನೊಂದಿಗೆ 204 ರನ್ ಗಳಿಸಿ ’ಮ್ಯಾನ್ ಆಫ್ ದಿ ಸೀರೀಸ್ ಪ್ರಶಸ್ತಿ’ ಪಡೆದರು. ಮುಂಬರುವ ಐಪಿಎಲ್‌ನಲ್ಲಿ ಶ್ರೇಯಸ್ ಅಯ್ಯರ್ ಮತ್ತು ಸೂರ್ಯಕುಮಾರ್ ಯಾದವ್ ವಿಧ್ವಂಸಕ ಬ್ಯಾಟಿಂಗ್ ಮುಂದುವರಿಸಿ, ವಿರಾಟ್ ಕೊಹ್ಲಿ ವಿಫಲವಾದ್ರೆ ಈ ಇಬ್ಬರು ಅಂತಿಮ ತಂಡದಲ್ಲಿ ಸ್ಥಾನ ಪಡೆಯಬಹುದು.

ಅಯ್ಯರ್ ಶ್ರೇಯಸ್ ಅಯ್ಯರ್ ಕೂಡ ಇತ್ತೀಚೆಗಷ್ಟೇ ನಂ.3ರಲ್ಲಿ ಆಡುವುದನ್ನು ಇಷ್ಟಪಡುವುದಾಗಿ ಬಹಿರಂಗಪಡಿಸಿದ್ದಾರೆ. ಟೀಂ ಇಂಡಿಯಾ ಮ್ಯಾನೇಜ್‌ಮೆಂಟ್ ಕೂಡ ಯುವ ಆಟಗಾರರಿಗೆ ಅವಕಾಶ ನೀಡುವ ಭರವಸೆ ಇದೆ. ವೆಸ್ಟ್ ಇಂಡೀಸ್ ಮತ್ತು ಶ್ರೀಲಂಕಾ ವಿರುದ್ಧದ ಸರಣಿಯಲ್ಲಿ ಇದು ಸ್ಪಷ್ಟವಾಗಿದೆ. ಈಗ ಎಷ್ಟೇ ಟ್ರಯಲ್ಸ್ ಮಾಡಿದರೂ, ಹಿಂದಿನಂತೆ ಐಪಿಎಲ್ ಪ್ರದರ್ಶನವನ್ನು ಪರಿಗಣಿಸಿ ವಿಶ್ವಕಪ್ ತಂಡವನ್ನು ಆಯ್ಕೆ ಮಾಡಲಾಗುತ್ತದೆ. ಈ ಎರಡು ಸರಣಿಗಳಲ್ಲಿ ಮಿಂಚಿದ ವೆಂಕಟೇಶ್ ಅಯ್ಯರ್, ರವಿ ಬಿಷ್ಣೋಯ್ ಮತ್ತು ಅವೇಶ್ ಖಾನ್ ಐಪಿಎಲ್ನಲ್ಲಿ ಮಿಂಚಿದ್ರೆ, ವಿಶ್ವಕಪ್ ತಂಡದಲ್ಲಿ ಸ್ಥಾನ ಪಡೆಯುವುದು ಖಚಿತ.

# ನಿರ್ದೇಶಕ ಸ್ಥಾನಕ್ಕೆ ತಾರಾಮೌಲ್ಯ ತಂದ ಪುಟ್ಟಣ್ಣಕಣಗಾಲ್

ತೆರೆಮರೆ

**ಕನ್ನಡ ಚಿತ್ರ ಇತಿಹಾಸ**

ಭಾಗ–67



ಅ.ನಾ.ಪ್ರಹ್ಲಾದರಾವ್
ವಾರ್ತಾ ಇಲಾಖೆ, ನಿವೃತ್ತ ಅಧಿಕಾರಿ

ಕನ್ನಡದಲ್ಲಿ ನಿರ್ದೇಶಕನ ಪಟ್ಟಕ್ಕೆ ತಾರಾ ಮೌಲ್ಯ ತಂದು ಕೊಟ್ಟ ಎಸ್.ಆರ್.ಪುಟ್ಟಣ್ಣ ಕಣಗಾಲ್(ಸುಬ್ರವೇಷ್ಠಿ ರಾಮಸ್ವಾಮಯ್ಯ ಸೀತಾರಾಮ ಶರ್ಮ) ಅವರು ಬಿ.ಆರ್.ಪಂತುಲು ಅವರ ಗರಡಿಯಲ್ಲಿ ಪಳಗಿ ಬಂದವರು. ಪುಟ್ಟಣ್ಣ ಕಣಗಾಲ್ ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲ್ಲೂಕು ಕಣಗಾಲ್ ಗ್ರಾಮದಲ್ಲಿ ಪುಟ್ಟಣ್ಣ 1933ರ ಡಿಸೆಂಬರ್ 1ರಂದು ಜನಿಸಿದರು. ಪ್ರಾಥಮಿಕ ಶಾಲೆಯನ್ನು ಕಣಗಾಲ್‌ನಲ್ಲಿ ಓದಿ ಮುಂದಿನ ವ್ಯಾಸಂಗಕ್ಕಾಗಿ ಮೈಸೂರಿಗೆ ಬಂದರು. ಭಿಕ್ಷಾನ್ನ ಮಾಡಿಕೊಂಡು ಓದಬೇಕಾದ ಪರಿಸ್ಥಿತಿ.ವರದಾಚಾರ್ ಎನ್ನುವ ಛಾಯಾಗ್ರಾಹಕರ ಮನೆಯಲ್ಲಿ ವಾಸ್ತವ್ಯದ ಅವಕಾಶ ದೊರೆತಿತ್ತು. ಬಿಡುವಿನಲ್ಲಿ ಅವರ ಸ್ಟುಡಿಯೋಗೆ ಹೋಗಿ ಛಾಯಾಗ್ರಹಣ ಕಲೆ ಬಗ್ಗೆ ಅರಿತುಕೊಳ್ಳುತ್ತಿದ್ದರು. ಚಲನಚಿತ್ರಗಳನ್ನು ನೋಡುವ ಹವ್ಯಾಸ ಬೆಳೆಸಿಕೊಂಡಿದ್ದ ಪುಟ್ಟಣ್ಣ ಒಮ್ಮೆ ಮೈಸೂರಿನ ಪ್ರೀಮಿಯರ್ ಸ್ಟುಡಿಯೋ ಒಳಗೆ ಹೋಗಲು ಪ್ರಯತ್ನಿಸಿ ನಿರಾಶರಾದರು. ನಟಭಯಂಕರ ಗಂಗಾಧರ ರಾಯರ ಕಂಪನಿಯಲ್ಲಿ ಸಣ್ಣ ಕೆಲಸ ಮಾಡಿದರು. ಧರಿಸಲು ಬಟ್ಟೆಯೂಇಲ್ಲ.ಕಂಪನಿ ಮನೆ ಜಗಲಿ ಮೇಲೆ ವಾಸ.ಮೈಸೂರಿನ ಪೆಟ್ರೋಲ್ ಬಂಕ್‌ಒಂದರಲ್ಲಿ ಕೆಲಸ ಮಾಡಿದರು.ಬೆಂಗಳೂರಿಗೆ ಬಂದು ಮಾಲೀಕರೊಬ್ಬರಲ್ಲಿಕಾರು ತೊಳೆಯುವ ಕೆಲಸವನ್ನು ನಿರ್ವಹಿಸಿದರು.

ಪುಟ್ಟಣ್ಣ ಹತ್ತಾರು ಸಣ್ಣ ಪುಟ್ಟ ಕೆಲಸಗಳನ್ನು ನಿರ್ವಹಿಸಿ ಸೂಕ್ತ ಉದ್ಯೋಗ ಅರಸುತ್ತಿದ್ದರು. ಮದರಾಸಿನಲ್ಲಿದ್ದ ಅಣ್ಣ ಕಣಗಾಲ್ ಪ್ರಭಾಕರಶಾಸ್ತ್ರಿಗಳು ತಮ್ಮನನ್ನುಕರೆತಂದು 1934ರಲ್ಲಿ ಪಂತುಲು ಬಳಿ ಕೆಲಸಕ್ಕೆ ಸೇರಿಸಿದರು.ಆಗ ಪುಟ್ಟಣ್ಣನವರ ವಯಸ್ಸು 21.ಪುಟ್ಟಣ್ಣನವರು ನಿರ್ದೇಶನಕ್ಷೇತ್ರದಲ್ಲಿ ಸಹಾಯಕರಾಗಿ ಕೆಲಸ ಮಾಡಲಾರಂಭಿಸಿದರು.





ಸಿನಿಮಾ ಕೆಲಸದ ಜೊತೆ ಜೊತೆಯಲ್ಲಿ ಪುಟ್ಟಣ್ಣಕಣಗಾಲರು ವಾಹನ ಚಾಲನೆಯಲ್ಲಿಯೂ ಪರಿಣಿತರಾಗಿದ್ದರಿಂದ ಪಂತುಲು ಅವರ ಕಾರಿನ ಚಾಲಕರಾಗಿಯೂ ಕೆಲಸ ಮಾಡಿದರು.ಪುಟ್ಟಣ್ಣ 9 ವರ್ಷಗಳ ಕಾಲ ಪದ್ಮಿನಿ ಪಿಕ್ಚರ್ಸ್ ಸಂಸ್ಥೆಯಲ್ಲಿಕಾರ್ಯನಿರ್ವಹಿಸಿದರು. 'ಕಿತ್ತೂರುಚೆನ್ನಮ್ಮ'ಅಂತಹ ಐತಿಹಾಸಿಕ ಚಿತ್ರಕ್ಕೂ ಪುಟ್ಟಣ್ಣ ಸಹಾಯಕ ನಿರ್ದೇಶಕರಾಗಿ ಕೆಲಸ ಮಾಡಿದರು. ಶಿಷ್ಯನೊಬ್ಬ ಗುರುಗಳ ಮಹದಾಶಯವನ್ನು ಪೂರೈಸಿದ ಹೆಗ್ಗಳಿಕೆಗೂ ಪುಟ್ಟಣ್ಣಕಣಗಾಲ್ ಪಾತ್ರರಾದರು. ಪುಟ್ಟಣ್ಣ ಸ್ವಯಂ ನಿರ್ದೇಶನ ಮಾಡಬಲ್ಲರೆಂಬುದು ಪಂತುಲುಅವರಿಗೆ ಮನವರಿಕೆಯಾದ ನಂತರ 'ಸ್ಕೂಲ್‌ಮಾಸ್ಟರ್'ಚಿತ್ರಮಲೆಯಾಳಂ ಭಾಷೆಯಲ್ಲಿ ನಿರ್ಮಾಣ ಮಾಡಿದ ಸಂದರ್ಭದಲ್ಲಿ ಆ ಚಿತ್ರವನ್ನು ಎಸ್. ಆರ್.ಪುಟ್ಟಣ್ಣಕಣಗಾಲ್‌ಅವರಿಂದಲೇ ನಿರ್ದೇಶನ ಮಾಡಿಸಿದರು.

ಹಂತಹಂತವಾಗಿ ಮೇಲೇರಿ



ಬಂದ ಪುಟ್ಟಣ್ಣ 'ಬೆಳ್ಳಿಮೋಡ' (1967) ಚಿತ್ರವನ್ನು ನಿರ್ದೇಶಿಸುವ ಮೂಲಕ ಸ್ವತಂತ್ರ ನಿರ್ದೇಶಕರಾದರು. ಪುಟ್ಟಣ್ಣ 23 ಚಲನಚಿತ್ರಗಳನ್ನು ನಿರ್ದೇಶಿಸಿದರು. ಇವರ ಚಿತ್ರಗಳಲ್ಲಿ ಏನಾದರೊಂದು ವಿಶೇಷವಿರುತ್ತಿತ್ತು. 'ಶರಪಂಜರ' ಚಿತ್ರದಲ್ಲಿ ಪ್ರಕೃತಿಯ ಸೊಬಗನ್ನು ಸೆರೆಹಿಡಿದರು. 'ಸಾಕ್ಷಾತ್ಕಾರ' ಚಿತ್ರದಲ್ಲಿ ಪೃಥ್ವಿರಾಜ್ ಕಪೂರ್ ಅವರಿಂದ ಪಾತ್ರ ಮಾಡಿಸಿದರು. ತ.ರಾ.ಸು.ಅವರ 'ನಾಗರಹಾವು' ಎರಡು ಹೆಣ್ಣು ಒಂದು ಗಂಡು ಹಾಗೂ ಸರ್ಪಮತ್ಸರ ಕಾದಂಬರಿಗಳನ್ನು ಆಧರಿಸಿ 'ನಾಗರಹಾವು' ಚಿತ್ರ ತೆಗೆದರು. ಕನ್ಯಾಕುಮಾರಿಯ ಸೊಬಗನ್ನು 'ಉಪಾಸನೆ' ಚಿತ್ರದಲ್ಲಿ ಹಿಡಿದಿಟ್ಟರು. 'ಶುಭಮಂಗಳ' ಮೂಲಕ ಶ್ರೀನಾಥ್ ಅವರಿಗೆ ಪುನರ್ಜನ್ಮ ನೀಡಿದರು.ವಿದೇಶಿ ಯುವತಿಯನ್ನು ತಂದು 'ಬಿಳಿಹಂಡ್ತಿ' ಚಿತ್ರದಲ್ಲಿ ಪಾತ್ರ ಮಾಡಿಸಿದರು. ಮೂರು ಸಣ್ಣ ಕಥೆಗಳನ್ನು ಸೇರಿಸಿ 'ಕಥಾಸಂಗಮ' ಮಾಡಿದರು. ವಿಜಾಪುರದ ಗೋಲ್‌ಗುಂಬಜ್ ಚೆಲುವನ್ನು 'ಫಲಿತಾಂಶ' ಚಿತ್ರದಲ್ಲಿ ಸೆರೆಹಿಡಿದರು. ರಂಗಭೂಮಿಯ ಏಳು–ಬೀಳುಗಳನ್ನು 'ರಂಗನಾಯಕಿ' ಚಿತ್ರದಲ್ಲಿ ಬಿಂಬಿಸಿದರು. ಆರತಿ ಮತ್ತು ಅವರದಾಂಪತ್ಯ ಕೊನೆಗೊಂಡಾಗ 'ಮಾನಸ ಸರೋವರ' ತಂದರು. ಕೊನೆಯ ಚಿತ್ರ 'ಮಸಣದ ಹೂವು' ಪೂರ್ಣಗೊಳಿಸದೆಯೇ ನಿಧನರಾದಾಗ ಅವರಿಗೆ ಪ್ರಿಯರಾಗಿದ್ ಕೆ.ಎಸ್.ಎಲ್.ಸ್ವಾಮಿ (ರವೀ) ಅದನ್ನು ಪೂರ್ಣಗೊಳಿಸಿದರು. ಹಲವಾರು ಕಲಾವಿದರನ್ನು ತಮ್ಮ ಚಿತ್ರದ ಮೂಲಕ ಬೆಳಕಿಗೆ ತಂದಕೀರ್ತಿ ಪುಟ್ಟಣ್ಣನವರೊಂದಿಗಿದೆ. ವಿಷ್ಣುವರ್ಧನ್, ಅಂಬರೀಷ್, ವಜ್ರಮುನಿ, ಆರತಿ, ಸುಂದರಕೃಷ್ಣಅರಸ್, ಲೋಕನಾಥ್, ಧೀರೇಂದ್ರಗೋಪಾಲ್, ರಜನಿಕಾಂತ್, ಪದ್ಮವಾಸಂತಿ, ಶ್ರೀಧರ್, ಜೈಜಗದೀಶ್, ಸೀತಾರಾಂ, ಚಂದ್ರಶೇಖರ್, ಅಪರ್ಣ ಮುಂತಾದ ಕಲಾವಿದರನ್ನು ಪುಟ್ಟಣ್ಣ ರೂಪಿಸಿದರು. ಇವರು ನಿರ್ದೇಶಿಸಿದ 'ಗೆಜ್ಜೆಪೂಜೆ' ಹಾಗೂ 'ಶರಪಂಜರ' ಚಿತ್ರಗಳು ರಾಷ್ಟ್ರಪತಿಯವರ ರಜತ ಪದಕ ಪ್ರಶಸ್ತಿಗೆ ಪಾತ್ರವಾದವು. 'ಬೆಳ್ಳಿಮೋಡ' ದ್ವಿತೀಯ ಅತ್ಯುತ್ತಮ ಚಿತ್ರ), 'ಗೆಜ್ಜೆಪೂಜೆ', ಪ್ರಥಮ ಅತ್ಯುತ್ತಮ ಚಿತ್ರ, 'ಶರಪಂಜರ' ಪ್ರಥಮ ಅತ್ಯುತ್ತಮ ಚಿತ್ರ, 'ನಾಗರಹಾವು' ದ್ವಿತೀಯ ಅತ್ಯುತ್ತಮ ಚಿತ್ರ, 'ಉಪಾಸನೆ' ಪ್ರಥಮ ಅತ್ಯುತ್ತಮ ಚಿತ್ರ, 'ಕಥಾ ಸಂಗಮ' ನಾಲ್ಕನೆ ಅತ್ಯುತ್ತಮಚಿತ್ರ, 'ರಂಗನಾಯಕಿ' ಪ್ರಥಮ ಅತ್ಯುತ್ತಮ ಚಿತ್ರರಾಜ್ಯ ಪ್ರಶಸ್ತಿ ಪಡೆದ ಪುಟ್ಟಣ್ಣಕಣಗಾಲ್ ನಿರ್ದೇಶನದ ಚಿತ್ರಗಳಾಗಿವೆ. .ಕನ್ನಡ ಚಿತ್ರರಂಗಕ್ಕೆ ವಿಶಿಷ್ಟ ಕೊಡುಗೆ ನೀಡಿದ ಇವರು 1985ರ ಜೂನ್ 5ರಂದು ಹೃದಯಾಘಾತದಿಂದ ನಿಧನರಾದರು.



## ನಿಮ್ಮ ಮಾತು

### ಒಂದೊಳ್ಳೆ ಅಭಿರುಚಿಯ ಪತ್ರಿಕೆ

ಒಂದು ವಾಟ್ಸಾಪ್ ಗ್ರೂಪಲ್ಲಿ ಒಂದು 'ಕೆಂಧೂಳಿ' ಎಂಬ ಶೀರ್ಷಿಕೆಯ ಪಿಡಿಎಫ್ ಬಂದಿತ್ತು. ನಾನು ಅದನ್ನು ಕುತೂಹಲದಿಂದ ಕ್ಲಿಕ್ ಮಾಡಿ ಓದುತ್ತಾ ಹೋದಾಗ ವೈವಿಧ್ಯಮಯವಾದ ಸುದ್ಧಿಗಳು ಒಳಗೊಂಡಂತೆ ಇತ್ತು. ರಾಜಕೀಯ ಪ್ರಚಲಿತ, ಚಿತ್ರರಂಗದ ವಿಷಯಗಳು, ಸಾಹಿತ್ಯ ಲೇಖನಗಳು, ಕವಿತೆ, ಜನಾಭಿಪ್ರಾಯ, ನಾಡಿನ ಮೂಲೆಮೂಲೆಯಲ್ಲಿ ನಡೆಯುವ ಸುದ್ದಿ ಸಮಾಚಾರ, ಬೆಂಗಳೂರಿನ ಸುತ್ತಮುತ್ತಲ ಸುದ್ಧಿಗಳು, ಅಂಕಣ ಬರಹ, ಪುಸ್ತಕ ವಿಮರ್ಶೆ, ಕ್ರೀಡಾ ಸುದ್ದಿಗಳು ಒಂದು ವಾರದ ಸುದ್ದಿಗಳನ್ನು ಹೊತ್ತು ತರುವ ಈ ವಾರಪತ್ರಿಕೆಯು ಬೇರೆ ಕನ್ನಡ ನಾಡಿನ ಹೆಸರಾಂತ ಪತ್ರಿಕೆಗಳಂತೆ ತನ್ನ ಆಂತರಿಕ ಗಟ್ಟಿತನವನ್ನು ಹೊಂದಿದೆ ಎಂದರೆ ತಪ್ಪಾಗಲಾರದು. ಪಿಡಿಎಫ್ ಬದಲಾಗಿ ಈಗ ನಾನು ಪತ್ರಿಕೆಯನ್ನು ಕೊಂಡು ಓದುತ್ತಿದ್ದೇನೆ ಪ್ರತಿ ವಾರವೂ ವಿಶಿಷ್ಟ ಬಗೆಯ ಲೇಖನಗಳನ್ನು ಹೊತ್ತು ತರುತ್ತದೆ ಈ ವಾರದ 'ಕೆಟ್ಟ ರಾಜಕೀಯಕ್ಕೆ ಇನ್ನೆಷ್ಟು ಮುಗ್ಧರ ಬಲಿ' ಎನ್ನುವ ಶೀರ್ಷಿಕೆಯಲ್ಲಿ ಬಂದ ಪತ್ರಿಕೆ ತುಂಬಾ ಚನ್ನಾಗಿದೆ. ಪರಶಿವ ಧನಗೂರು ಬರೆದಿರುವ ಈ ಮುಖಪುಟದ ಲೇಖನ ನಿಜಕ್ಕೂ ಅದ್ಭುತವಾಗಿ ಮೂಡಿಬಂದಿದೆ. ಹಾಗೆಯೇ ಮನಮಿಡಿತ ಅಂಕಣವೂ ಒಂದು ವಿಶಿಷ್ಟವಾಗಿದೆ. ಸನತ್‌ಕುಮಾರ್ ಬೆಳಗಲಿ ಅವರ ಅಂಕಣ,ಭಾಸ್ಕರ್ ರಾವ್ ಅವರ ಅಂಕಣ, ಸೋಮಶೇಖರ್ ಅವರ ಇತಿಹಾಸದ ಲೇಖನ ಮತ್ತು ಕನ್ನಡ ಚಲನಚಿತ್ರದ ಕತೆ ಹೇಳುವ ತೆರೆಮರೆ ಅ.ನಾ.ಪ್ರಹ್ಲಾದ್ ರಾವ್ ಅವರ ಅಂಕಣ ಒಂದು ಕೌತುಕವೆನಿಸಿತು. ಒಟ್ಟಾರೆ ಪತ್ರಿಕೆ ಚನ್ನಾಗಿದೆ ಲಂಕೇಶ್ ಪತ್ರಿಕೆಯನ್ನು ನೆನಪಿಸುತ್ತದೆ ನಿಮ್ಮ ಪತ್ರಿಕೆಗೆ ಭವಿಷ್ಯವಿದೆ ಹೆಚ್ಚು ಹೆಚ್ಚು ಬೆಳೆಯಲಿ ಎಂದು ಆಶಿಸುತ್ತೇನೆ

● ಸೌಭಾಗ್ಯ.ಎಸ್.ಕೆ ಬೆಂಗಳೂರು

### ವಿಶಿಷ್ಟವಾಗಿ ಮೂಡಿಬರುತ್ತಿದೆ

ಕೆಂಧೂಳಿ ಪತ್ರಿಕೆ ಒಂದು ಅಚ್ಚರಿ. ಇಂಥ ಕಾಲದಲ್ಲೂ ಪತ್ರಿಕೆ ಮಾಡುವುದು ಸುಲಭವಲ್ಲ ಆದರೂ ನಿಮ್ಮ ಚಲದಿಂದ ಪತ್ರಿಕೆ 67 ವಾರ ಮೂಡಿ ಬಂದಿದೆ ಎಂದರೆ ಅದು ಸುಲುಭವಲ್ಲ ವಾರವಾರವೂ ಅದಕ್ಕೆ ಆರ್ಥಿಕ ಬಲ ತುಂಬಿಸಬೇಕು, ಯಾಕೆಂದರೆ ನನಗನಿಸಿದ ಮಟ್ಟಿಗೆ ಪತ್ರಿಕೆಯಿಂದ ನಿಮಗೆ ಹಣ ಬರುವುದು ಕಷ್ಟ ಬೇರೆ ದಾರಿಯಿಂದ ಹಣ ತರಲಾಗುತ್ತಿದೆ ಎಂದರೆ ಅದು ನಿಮ್ಮ ಪತ್ರಿಕೆ ನೋಡಿದರೆ ಆ ರೀತಿ ಅನಿಸುತ್ತಿಲ್ಲ ಹಾಗಾಗಿ ಆರ್ಥಿಕ ಬಲ ತುಂಬಿ ತರಲಾಗುತ್ತಿದೆಯಲ್ಲ ಅದು ನಿಮ್ಮ ತಾಕತ್ತು ಇರಬೇಕು ಎನಿಸುತ್ತದೆ. ಇರಲಿ ಈವಾರದ ಪತ್ರಿಕೆ ತುಂಬಾ ವಿಶಿಷ್ಟವಾಗಿದೆ.' ಕೆಟ್ಟ ರಾಜಕಾರಣಕ್ಕೆ ಇನ್ನೆಷ್ಟು ಮುಗ್ಧರ ಬಲಿ ಬೇಕು' ಎನ್ನುವ ಮುಖಪುಟದ ಲೇಖನ ತುಂಬಾ ಚನ್ನಾಗಿ ಮೂಡಿ ಬಂದಿದೆ ಈ ಲೇಖನವನ್ನು ಬರೆದಿರುವ ಪರಶಿವ ಧನಗೂರ್ ನನ್ನ ಅಭಿನಂದನೆಗಳು. ಹಾಗೆಯೇ ಬಹುತೇಕ ಅಂಕಣಗಳು. ಲೇಖನಗಳು ಕೂಡ ತುಂಬಾ ಉತ್ತಮವಾಗಿವೆ, ಎಲ್ಲಾ ಲೇಖನಗಳನ್ನು ಓದಿಸುತ್ತವೆ ಒಂದು ಸಮಾಜಕ್ಕೆ ಸಂದೇಶವಾಗಿ ಬರುತ್ತಿದೆ ನಿಜಕ್ಕೂ ನಿಮ್ಮ ಸಂಯಮ ಮತ್ತು ಹಠಕ್ಕೆ ನಮ್ಮದೊಂದು ಸಲಾಂ.

● ರುದ್ರಮುನಿ ಮೂಲಿಮನಿ ಧಾರವಾಡ

### ಪತ್ರಿಕೆ ಮೌಲ್ಯಯುತವಾಗಿದೆ.

'ಕೆಂಧೂಳಿ ' ಎನ್ನುವ ವಿಶೇಷ ಅರ್ಥವುಳ್ಳ ಪತ್ರಿಕೆಯ ಹೆಸರೆ ಒಂದು ವಿಶಿಷ್ಟವಾಗಿದೆ ,ಹಾಗೆಯೇ ಪತ್ರಿಕೆಯೂ ಕೂಡ ಒಂದು ವಿನೂತವಾಗಿ ಹೊರಬರುತ್ತಿದೆ. ಇತ್ತೀಚಿನ ವಾರಪತ್ರಿಕೆಗಳನ್ನು ನಾನು ಗಮನಿಸುತ್ತಿದ್ದೇನೆ ಅದರಲ್ಲಿ ಯಾವುದೇ ಸುದ್ದಿಗಳು ಇರುವುದಿಲ್ಲ ಇದ್ದರೆ ಯೋರೋ ಒಬ್ಬರ ಬಗ್ಗೆ ಅವರ ವ್ಯಕ್ತಿಚಿತ್ರ ಮತ್ತು ಇನ್ನೊಬ್ಬರ ಬಗ್ಗೆ ಅವಹೇಳನಕಾರಿಯಾಗಿ ಬರೆಯುವುದು ಇಷ್ಟನ್ನು ಹೊರೆತು ಪಡೆಸಿದರೆ ಓದಬೇಕಾದಂತ ತಿಳಿಯಬೇಕಾದಂತ ಸುದ್ದಿಗಳಿರುವುದಿಲ್ಲ ನನ್ನ ಮಟ್ಟಿಗೆ ಅದು ಪತ್ರಿಕೋದ್ಯಮವಲ್ಲ ಒಬ್ಬ ಪತ್ರಕರ್ತ ಮಾಡುವ ಕೆಲಸವಲ್ಲ, ಹಣದಾಸೆಗೆ ಮತ್ತು ಮತ್ತೊಬ್ಬರನ್ನು ಬೆದರಿಸಿ ತಿಂದು ತೇಗುವ ಪತ್ರಿಕೆಯಷ್ಟೆ .ಆದರೆ ಆ ಪತ್ರಿಕೆ ಸಾಲಿನಲ್ಲಿ ಎಲ್ಲಿಯೂ ಹೋಲಿಸಲಾಗದ ಕೆಂಧೂಳಿ ನಿಜಕ್ಕೂ ಈ ನಾಡಿನ ಅತ್ಯಂತ ಒಂದು ಧ್ವನಿಯಾಗಿ ಮೂಡಿಬರುತ್ತಿದೆ ಪ್ರತಿವಾರವೂ ಒನ್ನೊಂದು ವಿಶೇಷ ಸರ್ಕಾರದ ಧೋರಣೆಗಳ ಬಗ್ಗೆ ವಿಮರ್ಶಿಸಿ ಬರೆಯುವ ನಿಮ್ಮ ಪತ್ರಿಕೆಗೆ ನಿಜಕ್ಕೂ ಭವಿಷ್ಯವಿದೆ 'ಲಂಕೇಶ್ ಪತ್ರಿಕೆ' ಮತ್ತು' ಹಾಯ್ ಬೆಂಗಳೂರು' ಇಲ್ಲದ ಈ ಸಮಯದಲ್ಲಿ ನಿಮ್ಮ ಪತ್ರಿಕೆ ಎಲ್ಲರ ಮನಸ್ಸಿನಲ್ಲೂ ಉಳಿಯಲಿದೆ. ಮತ್ತು ಒಂದು ಸೈದ್ಧಾಂತಿಕ ಹಿನ್ನೆಲೆಯಲ್ಲಿ ಬರುತ್ತಿದೆ ಜೊತೆಗೆ ನಾಡಿನ ಶ್ರೇಷ್ಠ ಪತ್ರಕರ್ತರಾದ ಡಿ.ಉಮಾಪತಿ, ಬಾಸ್ಕರ್‌ರಾವ್, ಆ.ನಾ.ಪ್ರಹ್ಲಾದ್‌ರಾವ್ ಮತ್ತು ಇತಿಹಾಸ ತಜ್ಞರಾದ ಡಾ,ಸೋಮಶೇಖರ್ ಸಾಹಿತಿ ಕವಿ ಡಾ.ಶಿವಕುಮಾರ್ ಕಂಪ್ಲಿ ಅಂತ ತಂಡವಿರುವುದು ಪತ್ರಿಕೆಯ ಮತ್ತಷ್ಟು ಮೌಲ್ಯವನ್ನು ಹೆಚ್ಚಿಸಿದೆ.

● ಮಧುಕುಮಾರ್ ಸಿ.ಟಿ. ಬಂಗಾರಪೇಟೆ.

**ಬೇಕಾಗಿದ್ದಾರೆ :** 'ಕೆಂಧೂಳಿ' ವಾರ ಪತ್ರಿಕೆಗೆ ಜಿಲ್ಲಾ ವರದಿಗಾರರು/ಏಜೆಂಟರು ಬೇಕಾಗಿದ್ದಾರೆ. ಎಲ್ಲಾ ಜಿಲ್ಲೆಗಳಿಂದಲೂ ವರದಿಗಾರರನ್ನು ನೇಮಕ ಮಾಡಲಾಗುತ್ತಿದೆ ಆಸಕ್ತರು ಈ ದೂರವಾಣಿಗೆ ಸಂಪರ್ಕಿಸಬಹುದು. 9900633109

**KENDHOOLI** *Kannada Weekly*
ಸಂಪುಟ - 02 | ಸಂಚಿಕೆ - 68 | ಪುಟ - 16 | ರೂ. 16/- | ಮಾರ್ಚ್ 03 ರಿಂದ ಮಾರ್ಚ್ 09, 2022
kendhooli.com/e-paper/
RNI no KARKAN/2018/76310

# ಇನ್ನು ರಚಿತಾ ಬೋಲ್ಡ್ ಪಾತ್ರ ಮಾಡಲ್ವಂತೆ!

ಸದ್ಯ ಕನ್ನಡ ಚಿತ್ರರಂಗದಲ್ಲಿ ಅತ್ಯಂತ ಬೇಡಿಕೆ ನಟಿ ಎಂದರೆ ರಚಿತ್ ರಾಮ್. ಬಹುತೇಕ ಎಲ್ಲಾ ನಾಯಕ ನಟರ ಜೊತೆ ನಟಿಸಿದ ರಚಿತಾ ಒಂದಲ್ಲಾ, ಒಂದು ವಿಭಿನ್ನ, ವಿಶೇಷ ಪಾತ್ರಗಳನ್ನು ಮಾಡುತ್ತಾ, ತಮ್ಮ ಅಭಿಮಾನಿಗಳಿಗೆ ಪ್ರೇಕ್ಷಕರಿಗೆ ವಿಭಿನ್ನ ರೀತಿಯಲ್ಲಿ ಕಾಣಿಸಿಕೊಳ್ಳುತ್ತಾ ಇರುತ್ತಾರೆ. ರಚಿತಾಗೆ ಹೆಚ್ಚಿನ ಸಂಖ್ಯೆಯಲ್ಲಿ ಫ್ಯಾನ್ ಫಾಲೋಯಿಂಗ್ ಇರುವ ಕಾರಣಕ್ಕೆ ಆಕೆ ಏನೇ ಮಾಡಿದ್ರು, ಯಾವುದೇ ಪಾತ್ರದಲ್ಲಿ ಕಾಣಿಸಿಕೊಂಡರೂ ಕೂಡ ವಿಶೇಷವಾಗಿ ಸುದ್ದಿ ಆಗುತ್ತಲೇ ಇರುತ್ತದೆ. ಇತ್ತೀಚೆಗೆ ನಟಿ ರಚಿತಾ ರಾಮ್ ಹೆಚ್ಚಾಗಿ ಸದ್ದು ಮಾಡಿದ್ದು ಅಂದರೆ ಅದು ತಮ್ಮ ಹೊಸ ಸಿನಿಮಾಗಳ ಮೂಲಕ. ರಚಿತಾ ರಾಮ್ ಒಬ್ಬ ನಟಿಯಾಗಿ ತಮ್ಮ ಪಾತ್ರಕ್ಕೆ ನ್ಯಾಯ ಒದಗಿಸಲು ಇತ್ತೀಚೆಗೆ ಬಂದ ಕೆಲವು ಸಿನಿಮಾಗಳಲ್ಲಿ ಬೋಲ್ಡ್ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದರು. ಆದರೆ ಅದು ನೆಗೆಟಿವ್ ಆಗಿ ಸುದ್ದಿ ಆಯ್ತು. ರಚಿತಾ ಇತ್ತೀಚೆಗೆ ಮಾಡಿರುವ ಸಿನಿಮಾಗಳು ಹೆಚ್ಚಾಗಿ ಲವ್ ಕಾನ್ಸೆಪ್ಟ್ ಮೇಲೆ ಇದೆ. ಚಿತ್ರದ ಟೈಟಲ್ ಕೂಡ ಅದೇ ಆಗಿದೆ. ಅವರ ಈ ಹಿಂದಿನ ಚಿತ್ರಗಳಲ್ಲೂ ಕೂಡ ಪ್ರೇಮ ಕಹಾನಿ ಕತೆ ಇದ್ದೇ, ಇದೆ. ಆದರೆ ಮುಖ್ಯ ಅಂಶ ಬೇರೆ ಏನೂ ಇರುತ್ತಿತ್ತು. ಇತ್ತೀಚೆಗಿನ ಚಿತ್ರಗಳು ಅಂದರೆ 'ಐ ಲವ್ ಯು', 'ಲವ್ ಯು ರಚ್ಚು', 'ಏಕ್ ಲವ್ ಯಾ' ಚಿತ್ರಗಳು. ಈ ಚಿತ್ರಗಳಲ್ಲಿ ಪ್ರೇಮ ಕಥೆಗೆ ಹೆಚ್ಚಿನ ಪ್ರಾಮುಖ್ಯತೆ ಇದೆ. ಹಾಗಾಗಿ ಪಾತ್ರಕ್ಕೆ ತಕ್ಕಂತೆ ರಚಿತಾ ಅವರು ಕೊಂಚ ಬೋಲ್ಡ್ ಆಗಿ ಕೂಡ ಕಾಣಿಸಿಕೊಂಡಿದ್ದಾರೆ. ಆದರೆ ಅದ್ಯಾಕೋ ರಚಿತಾ ರಾಮ್ ಅವರನ್ನು ಹೋಮ್ಲಿ ಹುಡುಗಿ ಪಾತ್ರದಲ್ಲಿ ನೋಡಿದವರಿಗೆ ರಚ್ಚು ಬೋಲ್ಡ್ ಲುಕ್ ಒಪ್ಪಲು ಅಷ್ಟು ಸುಲಭಕ್ಕೆ ಸಾಧ್ಯ ಆಗಿಲ್ಲ. ಹಾಗಾಗಿ ಒಂದಷ್ಟು ವಿವಾದಗಳು ಹುಟ್ಟಿಕೊಂಡಿದ್ದವು. ರಚಿತಾ ರಾಮ್ ಅವರು ಇತ್ತೀಚೆಗೆ ತಮ್ಮ ಪಾತ್ರಗಳ ಬಗೆಗಿನ ವಿವಾದಗಳ ಬಗ್ಗೆ ಮಾತನಾಡಿದ್ದಾರೆ. ರಚಿತಾ ರಾಮ್ ಅವರ ಬೋಲ್ಡ್ ಪಾತ್ರಗಳ ಬಗ್ಗೆ ಒಂದಷ್ಟು ವಿವಾದಗಳು ಹಬ್ಬಿದ್ದವು. 'ಐ ಲವ್ ಯು' ಚಿತ್ರದ ಬಳಿಕ, 'ಲವ್ ಯು ರಚ್ಚು' ಸಿನಿಮಾ ಬಂತು. ನಂತರ ಅದರ ಹಿಂದೆಯೇ 'ಏಕ್ ಲವ್ ಯಾ' ಸಿನಿಮಾ ರಿಲೀಸ್ ಆಯ್ತು. ಈ ಮೂರು ಚಿತ್ರಗಳಲ್ಲಿ ರಚಿತಾ ರಾಮ್ ಅವರು ಕೊಂಚ ವಿಭಿನ್ನವಾಗಿ ಅಂದರೆ ಬೋಲ್ಡ್ ಪಾತ್ರದಲ್ಲಿಯೇ ಕಾಣಿಸಿಕೊಂಡಿದ್ದಾರೆ. ಲವ್‌ಗೂ ನನಗೂ ಆಗಿ ಬರ್ತಿಲ್ಲ ಹಾಗಾಗಿ ಈ ರೀತಿ ಸಿನಿಮಾಗಳನ್ನು ನಾನು ಇನ್ನು ಮುಂದೆ ಮಾಡುವುದಿಲ್ಲ ಎಂದು ರಚಿತಾ ರಾಮ್ ಪರೋಕ್ಷವಾಗಿ ಹೇಳಿಕೊಂಡಿದ್ದರು.






# 15 ದೇಶಗಳಲ್ಲಿ ತೆರೆ ಕಾಣಲಿದೆ ಜೇಮ್ಸ್!


ಮಾರ್ಚ್ 17 ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ಅವರ ಹುಟ್ಟುಹಬ್ಬಕ್ಕೆ ಸಿನಿಮಾ ರಿಲೀಸ್ ಆಗುತ್ತಿದೆ. ಇನ್ನು ಜೇಮ್ಸ್ ಚಿತ್ರವನ್ನು ಅದ್ದೂರಿಯಾಗಿ ಸ್ವಾಗತಿಸಲು ಅಭಿಮಾನಿಗಳು ದೊಡ್ಡ ಮಟ್ಟದ ತಯಾರಿಮಾಡಿಕೊಂಡಿದ್ದಾರೆ.

ಈ ಮಧ್ಯೆ ಅಪ್ಪು ಅವರ ಅಭಿನಯದ ಕೊನೆಯ ಸಿನಿಮಾ 'ಜೇಮ್ಸ್' 5 ಭಾಷೆಗಳಲ್ಲಿ ಮೂಡಿಬರುತ್ತಿರುವುದು ಎಲ್ಲರಿಗೂ ಗೊತ್ತೆ ಇದೆ. ಪವರ್ ಸ್ಟಾರ್ ಪುನೀತ್ ರಾಜ್ ಕುಮಾರ್ ಅವರ ಈ ಪವರ್ ಪ್ಯಾಕ್ಡ್ ಸಿನಿಮಾ ರಿಲೀಸ್‌ಗಾಗಿ ಕೇವಲ ಕನ್ನಡಿಗರಷ್ಟೆ ಅಲ್ಲ ಪರಭಾಷಿಗರೂ ಕೂಡ ಕಾದುಕುಳಿತಿದ್ದಾರೆ.

ಜೇಮ್ಸ್ ಸಿನಿಮಾದ ಬಗ್ಗೆ ಮತ್ತೊಂದು ವಿಶೇಷ ಸುದ್ದಿ ಹೊರಬಿದ್ದಿದೆ. ಜೇಮ್ಸ್ ಸಿನಿಮಾವನ್ನು ಒಟ್ಟು 15 ದೇಶಗಳಲ್ಲಿ ರಿಲೀಸ್ ಮಾಡಲು ಚಿತ್ರತಂಡ ತಯಾರಿ ನಡೆಸಿದೆಯಂತೆ. ಈ ಮೂಲಕ ಪುನೀತ್ ಕೊನೆ ಸಿನಿಮಾವನ್ನು ಪ್ರಪಂಚದ ಮೂಲೆ ಮೂಲೆಗೂ ತಲುಪಿಸಲು ಪ್ರಯತ್ನ ಮಾಡುತ್ತಿದೆ ಜೇಮ್ಸ್ ತಂಡ. ಈ ಸಿನಿಮಾ ಜರ್ಮನಿ, ನೆದರ್ಲೆಂಡ್ಸ್, ಆಸ್ಟ್ರೇಲಿಯಾ, ಪೋಲ್ಯಾಂಡ್, ಭಾರತ ಸೇರಿದಂತೆ ಒಟ್ಟು 15 ದೇಶಗಳಲ್ಲಿ ಜೇಮ್ಸ್ ರಿಲೀಸ್ ಆಗ್ತಿದೆ. ಈ ಕುರಿತು ಚಿತ್ರತಂಡ ಮಾಹಿತಿ ಹಂಚಿಕೊಂಡಿದೆ. ಈ ವಿಚಾರ ಗೊತ್ತಾಗುತ್ತಿದ್ದ ಹಾಗೆ ಅಭಿಮಾನಿಗಳ ಖುಷಿ ದುಪ್ಪಟ್ಟಾಗಿದೆ. ಮಾರ್ಚ್ 1 ಮಹಾಶಿವರಾತ್ರಿ ಹಬ್ಬದ ಪ್ರಯುಕ್ತ 5 ಭಾಷೆಗಳಲ್ಲಿ ಈ ಹಾಡನ್ನು ರಿಲೀಸ್ ಮಾಡಿದ್ದು ಸಕತ್ ರೆಸ್ಪಾನ್ಸ್ ಕೂಡ ಬಂದಿದೆ.ಇನ್ನು ಈ ಹಾಡು 'ಟ್ರೇಡ್ ಮಾರ್ಕ್' ಅನ್ನೋ ಸಾಹಿತ್ಯದಿಂದ ಶುರುವಾಗಲಿದ್ದು, ಚರಣ್ ರಾಜ್ ಸಂಗೀತಕ್ಕೆ ಚೇತನ್ ಸಾಹಿತ್ಯ ಬರೆದಿದ್ದಾರೆ. ಅಲ್ಲದೆ ಈ ಹಾಡಿಗಾಗಿ ಬೆಂಗಳೂರಿನಲ್ಲಿ ಅದ್ದೂರಿ ವೆಚ್ಚದ ಸೆಟ್ ಹಾಕಿ ಆ ಕಲರ್ ಫುಲ್ ಸೆಟ್ ಗಳಲ್ಲಿ ಪವರ್ ಸ್ಟಾರ್ ಗೆ ಪವರ್ ಫುಲ್ ಸ್ಟೆಪ್ ಗಳ ಕಂಪೋಸ್ ಮಾಡಿದ್ದಾರೆ ಟಾಲಿವುಡ್ ಸ್ಟಾರ್ ಕೋರಿಯೋಗ್ರಫರ್ ಶಂಕರ್. ಈಗಾಗಲೇ ಅಪ್ಪು ರಾಜ್ಯದಲ್ಲಿ ಜೇಮ್ಸ್ ಫೀವರ್ ಶುರುವಾಗಿದೆ. ಜೊತೆಗೆ ಈ ಫೀವರ್ ಮತ್ತಷ್ಟು ಹೈ ಆಗುವಂತ ಸಿಹಿ ಸಮಾಚಾರವೊಂದು ಜೇಮ್ಸ್ ಸಿನಿ ಬಳಗದಿಂದ ಹೊರಬಿದ್ದಿದೆ. ಜೇಮ್ಸ್ ಚಿತ್ರವನ್ನು ಗ್ರ್ಯಾಂಡ್ ಆಗಿ ರಿಲೀಸ್ ಮಾಡಲು ನಿರ್ಮಾಪಕ ಕಿಶೋರ್ ಪ್ಲ್ಯಾನ್? ಮಾಡಿದ್ದಾರೆ. ದೊಡ್ಮನೆ "ರಾಜಕುಮಾರ"ನನ್ನು ದೇವರಂತೆ ಆರಾಧಿಸುವ ಅಭಿಮಾನಿಗಳ ಸಾಗರವೇ ಇರುವ ವಿಜಯನಗರ ಜಿಲ್ಲೆಯ ಹೊಸಪೇಟೆ ಜಿಲ್ಲೆಯಿಂದ ಜೇಮ್ಸ್ ಪ್ರಚಾರದ ತೇರನ್ನು ಎಳೆಯೋಕೆ ಪ್ಲಾನ್ ಮಾಡಿದ್ದಾರೆ.

# ಪ್ರಭಾಸ್ ಚಿತ್ರಕ್ಕೆ ಕನ್ನಡದಲ್ಲಿ ಶಿವಣ್ಣ ಧ್ವನಿ

ಭಾರತೀಯ ಚಿತ್ರರಂಗದ ಬಹುನಿರೀಕ್ಷಿತ ಚಿತ್ರ 'ರಾಧೆ ಶ್ಯಾಮ್' ಟಾಲಿವುಡ್ ರೆಬೆಲ್ ಸ್ಟಾರ್ ಪ್ರಭಾಸ್ ಹಾಗೂ ಪೂಜಾ ಹೆಗ್ಡೆ ನಟಿಸಿರುವ ಔಟ್ ಅಂಡ್ ಔಟ್ ಲವ್ ಕಮ್ ರೊಮ್ಯಾಂಟಿಕ್ ಸಿನಿಮಾ. ಚಿತ್ರದ ಮೋಷನ್ ಪೋಸ್ಟರ್, ಟೀಸರ್ ಹಾಗೂ ಹಾಡುಗಳು ಈಗಾಗಲೇ ಬಿಡುಗಡೆಯಾಗಿ ಸಾಮಾಜಿಕ ಜಾಲತಾಣದಲ್ಲಿ ಸಖತ್ ಹವಾ ಸೃಷ್ಟಿಸಿದೆ. ಈಗಾಗಲೇ ಚಿತ್ರದ ಹಾಡುಗಳು ಕೂಡ ಅಭಿಮಾನಿಗಳ ಮನಗೆದ್ದಿದೆ. ಸದ್ಯ 'ರಾಧೆ ಶ್ಯಾಮ್' ಚಿತ್ರವು ಬಿಡುಗಡೆಗೆ ಸಜ್ಜಾಗುತ್ತಿದೆ. ಇದೀಗ ಚಿತ್ರತಂಡದಿಂದ ಹೊಸ ಸುದ್ದಿಯೊಂದು ಹೊರಬಿದ್ದಿದೆ.



ಹೌದು! ಪ್ರಭಾಸ್‌ರ 'ರಾಧೆ ಶ್ಯಾಮ್' ಸಿನಿಮಾದಲ್ಲಿ ಸ್ಯಾಂಡಲ್‌ವುಡ್ ಸೆಂಚೂರಿ ಸ್ಟಾರ್ ಶಿವರಾಜ್‌ಕುಮಾರ್ ಅವರು ಜೊತೆಯಾಗಿದ್ದಾರೆ. ಈ ಬಗ್ಗೆ ಚಿತ್ರದ ನಿರ್ಮಾಪಕರು ಸ್ವತಃ ಮಾಹಿತಿಯನ್ನು ಸಾಮಾಜಿಕ ಜಾಲತಾಣದಲ್ಲಿ ಅಧಿಕೃತವಾಗಿ ಘೋಷಣೆ ಮಾಡಿದ್ದಾರೆ. ವಿಶೇಷವಾಗಿ ಶಿವರಾಜ್‌ಕುಮಾರ್ ಮಾತ್ರವಲ್ಲದೇ ಖ್ಯಾತ ನಿರ್ದೇಶಕ ರಾಜಮೌಳಿ ಮಲಯಾಳಂ ಸೂಪರ್ ಸ್ಟಾರ್ ಪೃಥ್ವಿರಾಜ್ ಸುಕುಮಾರನ್ ಕೂಡ ಚಿತ್ರತಂಡ ಸೇರಿಕೊಂಡಿದ್ದಾರೆ. ಈ ವಿಷಯ ಕೇಳಿ ಅಭಿಮಾನಿಗಳಿಗೆ ಸಖತ್ ಥ್ರಿಲ್ ಆಗಿದ್ದು, ಕೊನೇ ಹಂತದಲ್ಲಿ ಈ ದಿಗ್ಗಜರೆಲ್ಲ 'ರಾಧೆ ಶ್ಯಾಮ್' ಸಿನಿಮಾ ತಂಡವನ್ನು ಸೇರಿಕೊಂಡಿದ್ದು ಯಾಕೆ ಎಂಬ ಕುತೂಹಲ ಹುಟ್ಟಿದೆ. 'ರಾಧೆ ಶ್ಯಾಮ್' ಸಿನಿಮಾ ತೆಲುಗಿನಲ್ಲಿ ಮಾತ್ರವಲ್ಲದೇ ಬೇರೆ ಬೇರೆ ಭಾಷೆಗಳಲ್ಲಿ ರಿಲೀಸ್ ಆಗುತ್ತಿದೆ. 'ಬಾಹುಬಲಿ' ಚಿತ್ರದ ಯಶಸ್ಸಿನ ನಂತರ ಪ್ರಭಾಸ್ ಅವರು ದೇಶಾದ್ಯಂತ ಫೇಮಸ್ ಆಗಿ ಪ್ಯಾನ್ ಇಂಡಿಯಾ ಸ್ಟಾರ್ ಆದರು. ಹಾಗಾಗಿ ಅವರ ಎಲ್ಲ ಸಿನಿಮಾಗಳು ಪ್ಯಾನ್ ಇಂಡಿಯಾ ಮಟ್ಟದಲ್ಲಿ ಬಿಡುಗಡೆಯಾಗುತ್ತಿದ್ದು, 'ರಾಧೆ ಶ್ಯಾಮ್' ಕೂಡ ಅದೇ ದಾರಿಯನ್ನು ಅನುಸರಿಸುತ್ತಿದೆ. ಕನ್ನಡ, ತಮಿಳು, ಮಲಯಾಳಂ, ಹಿಂದಿ ಭಾಷೆಗಳಿಗೆ ಈ ಸಿನಿಮಾ ಡಬ್ಬಿಂಗ್ ಆಗಿ ತೆರೆ ಕಾಣುತ್ತಿದೆ. ಸಿನಿಮಾದಲ್ಲಿ ಬರುವ ಒಂದೊಂದು ಭಾಷೆಯ ಹಿನ್ನೆಲೆ ನಿರೂಪಣೆಗೆ ಧ್ವನಿ ನೀಡಲು ಆಯಾ ಭಾಷೆಯ ದೊಡ್ಡ ಸೆಲೆಬ್ರಿಟಿಗಳು ಒಪ್ಪಿಕೊಂಡಿದ್ದಾರೆ.



ಈಗಾಗಲೇ ತಿಳಿದಿರುವಂತೆ ಬಾಲಿವುಡ್‌ನ ಸೂಪರ್ ಸ್ಟಾರ್ ಅಮಿತಾಭ್ ಬಚ್ಚನ್ 'ರಾಧೆ ಶ್ಯಾಮ್' ಹಿಂದಿ ವರ್ಷನ್‌ಗೆ ಧ್ವನಿ ನೀಡಿದ್ದಾರ. ಇದೀಗ ಕನ್ನಡ ವರ್ಷನ್ ನಿರೂಪಣೆಗೆ ಶಿವರಾಜ್‌ಕುಮಾರ್ ಅವರು ಹಿನ್ನೆಲೆ ಧ್ವನಿ ನೀಡಿದ್ದು, ಅದೇ ರೀತಿ ತೆಲುಗಿನಲ್ಲಿ ರಾಜಮೌಳಿ ಹಾಗೂ ಮಲಯಾಳಂನಲ್ಲಿ ಪೃಥ್ವಿರಾಜ್ ಸುಕುಮಾರನ್ ಅವರು ನಿರೂಪಿಸಿದ್ದಾರೆ. ಆ ಮೂಲಕ ಈ ಘಟಾನುಘಟಿಗಳು ಸ್ಟಾರ್‌ಗಳು 'ರಾಧೆ ಶ್ಯಾಮ್' ತಂಡದ ಭಾಗವಾಗಿದ್ದು, ಸಿನಿಮಾ ಮೇಲಿನ ನಿರೀಕ್ಷೆಯನ್ನು ದುಪ್ಪಟ್ಟು ಮಾಡಿಸಿದ್ದಾರೆ. 'ನಿಮ್ಮ ಧ್ವನಿಯಿಂದಾಗಿ ಈ ರೊಮ್ಯಾಂಟಿಕ್ ಕಥೆಯನ್ನು ಇನ್ನಷ್ಟು ವಿಶೇಷವಾಗಿಸಿದ್ದಕ್ಕೆ ಧನ್ಯವಾದಗಳು' ಎಂದು ಶಿವರಾಜ್‌ಕುಮಾರ್, ರಾಜಮೌಳಿ ಹಾಗೂ ಪೃಥ್ವಿರಾಜ್ ಸುಕುಮಾರನ್ ಅವರಿಗೆ 'ರಾಧೆ ಶ್ಯಾಮ್' ನಿರ್ಮಾಣ ಸಂಸ್ಥೆಯಾದ 'ಯುವಿ ಕ್ರಿಯೇಷನ್ಸ್' ಟ್ವೀಟ್ ಮೂಲಕ ಧನ್ಯವಾದ ತಿಳಿಸಿದೆ.

KENDHOOLI, Kannada Weekly Printed by, Published by, Owned by & Edited by: T MANJUNATHA, DS MAX SAVVY APARTMENT, PLOT NO 202,2ND FLOOR, JP NAGARA 9TH PHASE, AMRUTHNAGARA MAIN ROAD, ANJANAPURA BANGALORE 560108
Printed at : Brundavan printers, 88/1 1st cross, sameerpura road, Kg nagara Bengaluru-560019
Mob: +91 99161 91222. email: kendhooli18@gmail.com
The Editor is Responsible for selection of news under the PRB Act